


# ಕಲೆಯಾಗಿ ಪ್ರಸಾಧನ



## ಮೇಕಪ್ ನಾಣಿ

ಪ್ರಕಾಶಕರು
ಕರ್ನಾಟಕ ನಾಟಕ ಅಕಾಡೆಮಿ
ಬೆಂಗಳೂರು

# ಕಲೆಯಾಗಿ ಪ್ರಸಾಧನ

**ಮೇಕಪ್ ನಾಣಿ**

ಪ್ರಕಾಶಕರು
ಕರ್ನಾಟಕ ನಾಟಕ ಅಕಾಡೆಮಿ
ರವಿಂದ್ರ ಕಾಲಾಕ್ಷೇತ್ರ, ಜೆ.ಸಿ. ರಸ್ತೆ
ಬೆಂಗಳೂರು.
✆ : 2237484.

**KALEYAGI PRASADHANA**
by **Make-up Nani** 'GREEN ROOM'
276/C, 37th 'A' Cross, 8th Block,
Jayanagar, Bangalore-560 070.

Published by :
Karnataka Nataka Academy,
Bangalore-560002.

Firt Edition 8-11-98

Pages

© Author

Price Rs : **150-00**

Cover Page : Make-up Nani

DTP & Printing
Siddeswara Printers
171, Cotton Main Road
Bangalore - 560 053.
✆ : 6705793

# ಮುನ್ನುಡಿ

ಕರ್ನಾಟಕ ನಾಟಕ ಅಕಾಡೆಮಿಯು ತನ್ನ ನಿರಂತರ ನಾಟ್ಯ ಚಟುವಟಿಕೆಗಳ ಜೊತೆಗೆ ನಾಟ್ಯವಿಮರ್ಶೆ, ನಾಟಕ ಕೃತಿ, ರಂಗಕರ್ಮಿಗಳ ಪರಿಚಯ, ಚರಿತ್ರೆ ಮುಂತಾದುವನ್ನು ಮೊದಲಿನಿಂದ ಪ್ರಕಟಿಸುತ್ತ ಬಂದಿದೆ. ನಾಟ್ಯ ಕಲಾ ಕ್ಷೇತ್ರದಲ್ಲಿ ಬಹುವಾಗಿ ಶ್ರಮಿಸಿರುವ ಕಲಾವಿದರ ಅನುಭವಗಳನ್ನು ನೇರವಾಗಿ ಅವರ ಮಾತುಗಳಲ್ಲಿ ಅಥವಾ ಉಳಿದ ಕಲಾವಿದರ ಮಾತುಗಳಲ್ಲಿ ನಮೂದಿಸಿ ಪ್ರಕಟಿಸುವ ಒಂದು ಹೊಸ ಯೋಜನೆಯನ್ನು ಈ ಸಲದ ಅಕಾಡೆಮಿ ಹಾಕಿಕೊಂಡಿದ್ದು ಆ ದಿಕ್ಕಿನಲ್ಲಿ ಕೆಲವು ಮಹತ್ವದ ಕೃತಿಗಳನ್ನು ಪ್ರಕಟಿಸಲು ಈಗ ನಿರ್ಧರಿಸಿದೆ. ಈ ಯೋಜನೆಯ ಮೊದಲ ಪುಸ್ತಕವಾಗಿ ಪ್ರಸಾಧನ ಕುರಿತ ಪುಸ್ತಕ ಇದೀಗ ಪ್ರಕಟವಾಗುತ್ತಿದೆ.

ಗ್ರೀನ್ ರೂಂ ನಾಣಿ ಅಥವಾ ಮೇಕಪ್ ನಾಣಿ ಎಂದೇ ಹೆಸರಾಗಿರುವ ನಾಣಿ ಅವರದು ಪ್ರಸಾಧನ ಕ್ಷೇತ್ರದಲ್ಲಿ ಅಪಾರ ಅನುಭವ. ಭಾರತದ ವಿರಳ ಪ್ರಸಾಧನ ತಜ್ಞರಲ್ಲಿ ಅವರು ಪ್ರಮುಖರಾದವರು. ನಾಟಕ, ಚಲನಚಿತ್ರ ಕ್ಷೇತ್ರಗಳಲ್ಲಿರುವ ಕರ್ನಾಟಕದ ಬಹುಸಂಖ್ಯಾತ ಕಲಾವಿದರು ನಾಣಿಯವರ ಮೇಕಪ್ಪಿನಿಂದ ಮೆರುಗು ಪಡೆದವರೇ ಆಗಿದ್ದಾರೆ. ಇಂಗ್ಲೆಂಡಿನಲ್ಲಿ ಕಲಿತು ನಾಟ್ಯಕಲೆ, ಪ್ರಸಾಧನ ಕಲೆಗಳ ಆಳ-ಅಗಲಗಳನ್ನು ಅರಿತು ತಮ್ಮ ಜ್ಞಾನವನ್ನು ಅನುಭವದ ಮೂಸೆಯಲ್ಲಿಟ್ಟು ಇನ್ನೂ ಸಮೃದ್ಧಗೊಳಿಸಿಕೊಂಡಿರುವ ನಾಣಿ ಅವರು ಈ ಪುಸ್ತಕದಲ್ಲಿ ಪ್ರಸಾಧನ ಕುರಿತು ಸುಲಲಿತವಾಗಿ ವಿವರಿಸಿದ್ದಾರೆ.

ಉತ್ತಮದಿಂದ ಉತ್ತಮತರವಾಗುವ, ಸುಂದರದಿಂದ ಸುಂದರತರವಾಗುವ ಹಂಬಲ ಪ್ರತಿಯೊಬ್ಬ ವ್ಯಕ್ತಿಯ ಮನಸ್ಸಿನಲ್ಲಿ ಯಾವಾಗಲೂ ತುಡಿಯುತ್ತಿರುತ್ತದೆ. ನೃತ್ಯ, ನಾಟಕ, ಕಾವ್ಯ ಮುಂತಾದ ಕಲೆಗಳು ಮನುಷ್ಯನನ್ನು ಇಂಥ ಉನ್ನತಿಯ, ಎತ್ತರದ ಮಾರ್ಗದತ್ತ ಸೆಳೆದೊಯ್ಯುವಲ್ಲಿ ಪ್ರಾಚೀನ ಕಾಲದಿಂದಲೂ ನೆರವಾಗುತ್ತ ಬಂದಿವೆ. ನಮ್ಮಲ್ಲಿ ಇದ್ದುದಕ್ಕಿಂತ ಹೆಚ್ಚಿನದನ್ನು ಒಳ್ಳೆಯದನ್ನು, ಬೇರೆಯದನ್ನು, ಆಕರ್ಷಕವಾದುದನ್ನು ಸಾಧಿಸುವ ಹಾಗೂ ಅದನ್ನು ಅನ್ಯರಿಗೆ ತೋರಿಸುವ ಸದಿಚ್ಛೆ ಮನುಷ್ಯನಲ್ಲಿ ಸಹಜವಾಗಿಯೇ ಅಂಕುರಿತಗೊಂಡಿರುತ್ತದೆ. ಇದರ ಸಾಕಾರ ರೂಪವೇ ಪ್ರಸಾಧನ. ಪ್ರಾಚೀನ ಕಾಲದಿಂದ ಒಂದಿಲ್ಲೊಂದು ರೀತಿಯಲ್ಲಿ ಕಲಾವಂತ ಮನಸ್ಸುಗಳನ್ನು ಮುದಗೊಳಿಸುತ್ತ ಬಂದಿರುವ ಪ್ರಸಾಧನ ಕಲೆ ಈಚಿನ ಅರ್ವಾಚೀನ ಕಾಲದಲ್ಲಿಯಂತೂ ಒಂದು ಅನಿವಾರ್ಯ, ವಿಶಿಷ್ಟ ಕಲೆಯಾಗಿ ಬೆಳೆದು ನಿಂತಿದೆ. ಕನ್ನಡ ರಂಗಭೂಮಿಯಲ್ಲಿ ಮೇಕಪ್ ನಾಣಿ ಅವರಷ್ಟು ಸೇವೆ, ಪ್ರಯೋಗ ಮಾಡಿದವರು ಕಡಿಮೆ. ಪ್ರತಿಯೊಂದು ನಾಟಕದ ವಸ್ತು, ಉದ್ದೇಶ, ಪಾತ್ರ, ಭಾವ-ವಿಶ್ಲೇಷಣೆಗಳನ್ನು ಮನಸ್ಸುಗೊಟ್ಟು ಅಭ್ಯಸಿಸಿ, ಅವುಗಳಿಗೆ ತಕ್ಕಂತೆ ಬಣ್ಣ-ಕುಂಚ-ಗೆರೆ-ರೇಖೆಗಳ ಒಂದೊಂದು ಎಳೆಯ ಮೂಲಕ ವ್ಯಕ್ತಿಗಳನ್ನು, ವ್ಯಕ್ತಿತ್ವಗಳನ್ನು ರೂಪಾಂತರಿಸಿ ಪ್ರೇಕ್ಷಕರಿಗೆ ತೋರಿಸುವಲ್ಲಿ ರಂಗಭೂಮಿಯ ಮೇಲೆ ಹೊಸ ಜಗತ್ತನ್ನು ಸೃಷ್ಟಿಸಿ ಕೊಡುವಲ್ಲಿ ನಾಣಿಯವರಿಗೆ ಅಪಾರ ಯಶಸ್ಸು ಸಿಕ್ಕಿದೆ. ಅವರ ಅನುಭವ, ಜ್ಞಾನ, ಪರಿಶ್ರಮ, ಚಿಂತನೆಗಳ ಫಲವಾಗಿ ರಂಗ-ನಾಟಕಗಳಿಗೆ, ಪಾತ್ರ ಪರಿಪೋಷಣೆಗೆ ಹೊಸ ಆಯಾಮ ಲಭಿಸಿದೆ. ನಾಣಿ ಅವರು ಹಣಕ್ಕಾಗಿ ಹೆಸರಿಗಾಗಿ ದುಡಿದವರಲ್ಲ. ಕಲಾಪ್ರೀತಿ, ಕಾಳಜಿ, ವೃತ್ತಿ ಗೌರವಗಳನ್ನು ಬೆಳೆಸಿದ ನಾಣಿ ಅವರ ಬಗ್ಗೆ ರಂಗಭೂಮಿಯಲ್ಲಿ ದುಡಿದವರೆಲ್ಲರಿಗೂ ಆದರವಿದೆ.

ನಾಣಿ ಅವರು ಈ ಪುಸ್ತಕದಲ್ಲಿ ಪ್ರಸಾಧನದ ವಿವಿಧ ಮುಖಗಳನ್ನು ಬಿಚ್ಚಿ ತೋರಿದ್ದಾರೆ. ಪ್ರಸಾಧನ ಕಲೆಯ ಮಹತ್ವ, ಅದು ಬೆಳೆದು ಬಂದ ರೀತಿ, ವಿವಿಧ ಪರಿಸ್ಥಿತಿ-ಮನಃಸ್ಥಿತಿಗಳಲ್ಲಿ ಅದು ಪಡೆಯುವ ಆಯಾಮಗಳು; ಬೆಳಕು ಬಣ್ಣಗಳ ಸಂಬಂಧ-ಪ್ರಭಾವಗಳು; ನಿರ್ದೇಶಕ, ನಟ, ನಾಟ್ಯ ಪ್ರಸಂಗಗಳಲ್ಲಿ ಪ್ರಸಾಧಕನು ವಹಿಸಬೇಕಾದ ಶ್ರಮ, ಕಾಳಜಿ, ಎಚ್ಚರಿಕೆ, ಅಗತ್ಯಗಳು, ವಿವಿಧ ಪಾತ್ರಗಳು ಹಾಗೂ ಪ್ರಸಾಧನದ ವಿವಿಧ ಸಾಮಗ್ರಿ, ಸಲಕರಣೆ ಮುಂತಾದವು, ಅವುಗಳ ವಿಧಾನಗಳು, ವೈಶಿಷ್ಟ್ಯ, ಮಹತ್ವ, ಪ್ರಭಾವ, ಗುಣಾವಗುಣಗಳನ್ನು ವಿವರಿಸುವುದರ ಜೊತೆಗೆ ಕೆಲವು ಚಿತ್ರಗಳನ್ನೂ ಕೊಟ್ಟು ವಿಷಯವನ್ನು ಹೆಚ್ಚು ಅರ್ಥೈಸಿದ್ದಾರೆ.

ಕನ್ನಡದಲ್ಲಿ ಹೀಗೆ ಪುಸ್ತಕ ರೂಪದಲ್ಲಿ ಮೊದಲ ಬಾರಿಗೆ ಬರುತ್ತಿರುವ ಇಂಥ ಪುಸ್ತಕವು ಅಭ್ಯಾಸಿಗಳಿಗೆ, ರಂಗಕರ್ಮಿಗಳಿಗೆ, ಹಾಗೂ ಜ್ಞಾನ ಪಿಪಾಸುಗಳಿಗೆ ಪ್ರಯೋಜನಕಾರಿಯಾದುದಲ್ಲದೇ ಕನ್ನಡ ಭಾಷೆ ಸಾಹಿತ್ಯಕ್ಕೆ ಹೊಸ ಪಕ್ಷವೊಂದನ್ನು ನೀಡುವಂಥದೂ ಆಗಿದೆ.

ಇದನ್ನು ರಚಿಸಿಕೊಟ್ಟ ಶ್ರೀ ಮೇಕಪ್ ನಾಣಿ ಅವರಿಗೂ ಸಹಕಾರ ನೀಡಿದ ಎಲ್ಲ ಅಕಾಡೆಮಿ ಸದಸ್ಯರು, ರಿಜಿಸ್ಟ್ರಾರ್, ಅರ್ಥ ಸದಸ್ಯರು, ಡಾ. ಜೀವರಾಜ ಆಳ್ವ, ವಾಣಿಜ್ಯೋದ್ಯಮಿ ಶ್ರೀ ಡಿ. ಕೆ. ಚೌಟ (ಪಿ.ಸಿ. ಎಕ್ಸ್‌ಪೋರ್ಟ್ಸ್) ಶ್ರೀಮತಿ ಮೈನಾಸಿಂಗ್, ಮೈಕೋ ಲಲಿತಕಲಾ ಸಂಘ, ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ. ಅಂದವಾಗಿ ಮುದ್ರಿಸಿಕೊಟ್ಟ ಶ್ರೀ ಸಿದ್ದೇಶ್ವರ ಪ್ರಿಂಟರ್ಸ್ ಮಾಲೀಕರಾದ ಶ್ರೀ ಶಿವದೇವ್ ಹಿರಿಯ ವ್ಯಂಗ್ಯ ಚಿತ್ರಕಾರ ಬಿ.ವಿ. ರಾಮಮೂರ್ತಿ ಇವರುಗಳಿಗೆ ಕೃತಜ್ಞನಾಗಿದ್ದೇನೆ.

ಸಿ. ಜಿ. ಕೃಷ್ಣಸ್ವಾಮಿ
ಅಧ್ಯಕ್ಷರು

## ಅರ್ಪಣೆ

ನನ್ನ ಕೈಗೆ ತಮ್ಮ ಮುಖ ಒಡ್ಡಿ
'ಮುಖಭಂಗ' ಮಾಡಿಸಿಕೊಂಡ
ನನ್ನೆಲ್ಲ ರಂಗ ನಟರಿಗೆ
ಹಾಗೂ
ಪ್ರಸಾಧನ ಕಲೆಯಲ್ಲಿ
ಮುಂದುವರೆಯಬೇಕೆಂದಿರುವ
ನೇಪಥ್ಯ ಕಲಾವಿದರಿಗೆ


ನಾಣಿ

**ಆರ್ಥಿಕ ನೆರವು**

ಶ್ರೀ ಡಿ. ಕೆ. ಚೌಟ, ವಾಣಿಜ್ಯೋದ್ಯಮಿ

ಶ್ರೀಮತಿ ಮೈನಾಸಿಂಗ್
ಮೈಕೋ ಲಲಿತ ಕಲಾ ಸಂಘ

# ನಾಣಿ-ಉರುಫ್ ಮೇಕಪ್‌ನಾಣಿ - ಒಂದು ಪರಿಚಯ -



ಪೂರ್ತಿಹೆಸರು ಬೆಳವಾಡಿ ನಂಜುಂಡಯ್ಯ ನಾರಾಯಣ ಆದರೆ ನಾಟಕ ಮತ್ತು ಕಲಾ ವಲಯಗಳಲ್ಲಿ ಪರಿಚಿತ ಹೆಸರು ನಾಣಿ-ಮೇಕಪ್‌ನಾಣಿ.

1929 ನವೆಂಬರ್ 3ರಂದು ಕರ್ನಾಟಕದ ತುಮಕೂರಿನಲ್ಲಿ ಜನಿಸಿದ್ದು. ತಂದೆ ನಂಜುಂಡಯ್ಯನವರು ಮೈಸೂರು ವೈದ್ಯಕೀಯ ಇಲಾಖೆಯಲ್ಲಿ ಅಸಿಸ್ಟೆಂಟ್ ಸರ್ಜನ್‌ರಾಗಿ ಹೆಚ್ಚುಕಮ್ಮಿ ತಮ್ಮ ಸೇವೆಯನ್ನು ಮಲೆನಾಡು ಮತ್ತು ಇತರೇ ಹಳ್ಳಿಗಾಡಿನಲ್ಲಿ ಮಾಡಿದರು.

ಬಾಲ್ಯವನ್ನು ತಂದೆ ತಾಯಿ ಜೊತೆಯಲ್ಲಿ ಮಲೆನಾಡಿನಲ್ಲೇ ಕಳೆದ ನಾಣಿ ಅವರಿಗೆ ಮಲೆನಾಡಿನ ಕಲೆಗಳಾದ ಯಕ್ಷಗಾನ ಹಾಗೂ ಆಗಾಗ್ಗೆ ಊರಿಗೆ ಬರುತ್ತಿದ್ದ ಕಂಪನಿ ನಾಟಕಗಳ ನೋಟ. ಇದರಿಂದಲೇ ಅವುಗಳ ಮೇಲೆ ಆಸಕ್ತಿ (ಗೀಳು) ಉಂಟಾಗಿರಬಹುದು.

ಬೆಂಗಳೂರಿಗೆ ವಿದ್ಯಾಭ್ಯಾಸಕ್ಕಾಗಿ ಬಂದು ನ್ಯಾಷನಲ್ ಹೈಸ್ಕೂಲಿಗೆ ಸೇರಿದ ನಂತರ ನ್ಯಾಷನಲ್ ಕಾಲೇಜು ಸೇರಿದ್ದಾಯಿತು.

1947ರ ಆರ್ಕಾಟ್ ಬಾಯ್ಕಾಟ್ ಚಳುವಳಿಗೂ ಸೇರಿ ಅಂತೂ ಇಂತು 1948-49ರಲ್ಲಿ ಇಂಟರ್ ಮುಗಿಸಿ ಬಿ. ಎಂ. ಎಸ್. ಇಂಜಿನೀಯರಿಂಗ್ ಕಾಲೇಜಿಗೆ ಸೇರಿ ಎರಡು ವರ್ಷ ಓದಿ, ಬಿಟ್ಟು ಮತ್ತೆ ನ್ಯಾಷನಲ್ ಕಾಲೇಜಿಗೆ ಬಂದು ಬಿ. ಎಸ್. ಸಿ. ಪರೀಕ್ಷೆಗೆ ಓದುವ ಪ್ರಯತ್ನ. ಎರಡು ಭಾಗಗಳ ಪರೀಕ್ಷೆಗೆ ಹೋಗಿ ಕೊನೆಯ ಭೌತಶಾಸ್ತ್ರದ ಪರೀಕ್ಷೆಯಂದು ರಾಮಕೃಷ್ಣ ಆಶ್ರಮದಲ್ಲಿ ನಾಟಕವಿದುದ್ದರಿಂದ ಪರೀಕ್ಷೆಗೆ ಹೋಗಲಿಲ್ಲ. ಹೀಗಾದದ್ದು ವಿದ್ಯಾಭ್ಯಾಸ.

ಮೊದಲ ಬಾರಿಗೆ 1949ರಲ್ಲಿ ರಂಗದ ಮೇಲೆ ಬಂದದ್ದು ಅದೂ ಸ್ತ್ರೀ ಪಾತ್ರದಲ್ಲಿ ಅಂದಿನಿಂದ ಕಲೆ, ಮೈಗೆ ರೂಢಿಸಿದ ನಾಟಕ ಅದರ ಇತರೇ ಅಂಗಗಳ ಬಗ್ಗೆ ಚೆನ್ನಾಗಿ ಅಭ್ಯಾಸ ಮಾಡುವ ಆಸಕ್ತಿ. ಮೇಕಪ್ ಕಲೆಯಲ್ಲಂತೂ ತೀವ್ರ ಆಸಕ್ತಿ 52-1953ರ ಹೊತ್ತಿಗೆ ಬೆಂಗಳೂರಿನ ಹಲವಾರು ಹವ್ಯಾಸಿತಂಡಗಳಿಗೆ ಸಹಾಯ ಮಾಡುತ್ತಿದ್ದರು.

1955-56 ಅಜ್ಜ ದಿವಂಗತರಾದನಂತರ ಮನೆ ಬಿಟ್ಟು ಬರಲೇಬೇಕಾಯ್ತು 1950ರಲ್ಲಿ ಜೆಪ್ಪಿಕೆಂಡಲ್ (ನಟ ಶಶಿಕಪೂರರ ಮಾವ) ಅವರ ಶೇಕ್ಸ್‌ಪೀರಿಯಾನ ಇಂಟರ್ ನ್ಯಾಷನಲ್ ಕಂಪೆನಿ (Shakepeareana International) ಯಲ್ಲಿ ಸಂಬಳವಿಲ್ಲದೇ ಕೆಲಸ. ಮತ್ತೆ ಬೊಂಬಾಯಿಯಲ್ಲಿ ಜರುಗಿದ ಪ್ರಪ್ರಥಮ ವಿಶ್ವ ನಾಟಕ ಸಮ್ಮೇಳನಕ್ಕೆ ಆಹ್ವಾನ. ಅಲ್ಲಿ ಯುವ ಜನಾಂಗಕ್ಕಾಗಿ `ರಂಗ' (Theatre for youth) ಕಮಿಟಿಯ ಸದಸ್ಯನಾಗಿ ಆಯ್ಕೆ. ಈ ಕಮಿಟಿಯ ಒತ್ತಾಯ ಮತ್ತು ಸಲಹೆಯ ಮೇಲೆ ದೆಹಲಿಯಲ್ಲಿ ರಾಷ್ಟ್ರೀಯ ನಾಟಕ ಶಾಲೆ ಮತ್ತು ಏಷಿಯನ್ ಥಿಯೇಟರ್ ಇನ್ಸಿಟ್ಯೂಟ್ ಸ್ಥಾಪನೆ.

ಪರದೇಶಗಳಾದ ರಷ್ಯ, ಅಮೇರಿಕ, ಫ್ರಾನ್ಸ್, ಚೈನಾ ಮತ್ತು ಇಂಗ್ಲೇಂಡಿನಿಂದ ನಗರಕ್ಕೆ ಬರುತ್ತಿದ್ದ ನಾಟಕ ತಂಡಗಳಿಗೆ ಕಲಾತಂಡಗಳಿಗೆ ಸ್ಥಳೀಯ ರಂಗ ವ್ಯವಸ್ಥಾಪಕನಾಗಿ ದುಡಿಮೆ ಹಾಗೂ ರಂಗ ಸಜ್ಜಿಕೆಯ ನಿರ್ವಹಣೆ.

1957ರಲ್ಲಿ ಹೊಟ್ಟೆ ಪಾಡಿಗಾಗಿ ದಿನಗೂಲಿಯ ಮೇಲೆ ಕಿರ್ಲೋಸ್ಕರ್ ಇಲೆಕ್ಟ್ರಿಕ್ ಕಂಪನಿಯಲ್ಲಿ ಕೆಲಸ.

ಇಂಗ್ಲೇಂಡಿನಿಂದ ಬಂದ `ಇಂಗ್ಲೀಷ್ ಕಮೆಡಿಯನ್ಸ್' ಕಂಪನಿ ನಟ - ನಿರ್ದೇಶಕರ ಮೇರಿಯಸ್ ಗೋರಿಂಗ್ (Marius Goring) ಮತ್ತು ಆಡಳಿತಾಧಿಕಾರಿ ಇಯಾನ್‌ಕೀತ್ (IanKeith) ಅವರಿಂದ ನಾಣಿಯವರ ಶ್ರದ್ಧೆ, ಶಿಸ್ತು, ಸಮಯಪ್ರಜ್ಞೆ ಮತ್ತು ನಾಟಕಗಳ ಬಗ್ಗೆ ಇದ್ದ ತಿಳುವಳಿಕೆ - ಜ್ಞಾನದ ಬಗ್ಗೆ ಪ್ರಶಂಸೆ ಹೀಗಾಗಿ 1962ರಲ್ಲಿ ಬ್ರಿಟೀಷ್ ಕೌನ್ಸಿಲ್ ವತಿಯಿಂದ ಲಂಡನ್‌ನಲ್ಲಿ ನಾಟಕಾಭ್ಯಾಸಕ್ಕಾಗಿ ಸ್ಕಾಲರ್‌ಶಿಪ್. ಅಷ್ಟರವೇಳೆಗೆ ಕಿರ್ಲೋಸ್ಕರ್ ಕಂಪೆನಿ ಬಿಟ್ಟು ಟಿ. ಟಿ. ಕೆ. ಯವರ ಕಂಪೆನಿಗೆ ಸೇರಿದ್ದರು. ಕಂಪೆನಿಯವರು ಇವರ ಕೆಲಸವನ್ನು ಬಹುವಾಗಿ ಮೆಚ್ಚಿಕೊಂಡಿದ್ದರಿಂದ ಇವರಿಗೆ ಲಂಡನ್‌ಗೆ ಹೋಗಲು ಅನುಮತಿಯನ್ನು ಮತ್ತು ಸಂಬಳ ಸಮೇತ ರಜೆಯನ್ನು ಕೊಟ್ಟರು ! ಅಲ್ಲಿದ್ದಾಗಲೇ `ಕೈಲಾಸಂ' ಅವರ ಕೃತಿ `ಗಂಡಸ್ಕತ್ರಿ'ಯನ್ನು ನಿರ್ದೇಶಿಸಿ ಪ್ರದರ್ಶಿಸಿದರು ಮತ್ತೆ ಇಂಗ್ಲೇಂಡಿನ ಡ್ರಾಮಾ ಬೋರ್ಡ್ ಅವರು ನಡೆಸಿದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅಸೋಸಿಯೇಟ್ ಆಫ್ ಡ್ರಾಮಾ ಬೋರ್ಡ್ ಪದವಿ ಪಡೆದಿದ್ದಾರೆ ಇದನ್ನು ಪಡೆದವರಲ್ಲಿ ಮೊದಲ ಕನ್ನಡಿಗರು -ನಾಣಿ.

1973ರಲ್ಲಿ ಲಕ್ಷ್ಮಿನಾರಾಯಣ್ (N. Lakshminarayan) ನಿರ್ದೇಶನದ `ಅಬಚೂರಿನ ಪೋಸ್ಟಾಫೀಸ್' (ಪೂರ್ಣ ಚಂದ್ರ ತೇಜಸ್ವಿಯವರ ಕಿರುಕಥೆ ಆಧಾರಿತ) ಚಿತ್ರದಲ್ಲಿ ಮುಖ್ಯ ಪಾತ್ರ. ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ - `ಅತ್ಯುತ್ತಮ ನಟ' ಪ್ರಶಸ್ತಿಗೆ ಪ್ರಥಮವಾಗಿ ಕನ್ನಡದ ಒಬ್ಬ ನಟನ ನಾಮಕರಣ. ಆದರೆ ರಾಜಕೀಯದಿಂದ ಇವರಿಗೆ ದಕ್ಕಲಿಲ್ಲ (ಇದರ ಬಗ್ಗೆ ಟೀಕೆ ಟಿಪ್ಪಣಿಗಳು ಕೂಡ ಪತ್ರಿಕೆಗಳಲ್ಲಿ ಬಂದವು) ಹಲವಾರು ಯುವಕರನ್ನು ನಾಟಕರಂಗಕ್ಕೆ ಪರಿಚಯಿಸಿ ಅವರಲ್ಲಿ ಇದ್ದ ಸುಪ್ತ ಚೈತನ್ಯ ಕಲೆಯನ್ನ ಹೊರಗೆಳೆದು, ಬೆಳಕಿಗೆ ತಂದು, ಬೆಳೆಸಿ ನಾಟಕ ರಂಗದಲ್ಲಿ

ಸಕ್ರಿಯವಾಗಿ ದುಡಿಯುವಂತೆ, ತೊಡಗಿಸಿಕೊಳ್ಳುವಂತೆ ಮಾಡಿದ್ದಾರೆ (ಉದಾ:ಉಪಾಸನೆ ಸೀತಾರಾಂ, ಮುಖ್ಯಮಂತ್ರಿ ಚಂದ್ರು, ಸಿ. ಆರ್. ಸಿಂಹ, ಶ್ರೀನಾಥ್, ಆರ್ ನಾಗೇಶ, ರಮೇಶಭಟ್, ದಾನಿ ಹಾಗೇ ಇನ್ನೂ ಅನೇಕರು) ಅಲ್ಲದೆ `ನೇಪಥ್ಯ'ದ ಬಗ್ಗೆ ಇದ್ದ ಅಸಡ್ಡೆಯನ್ನು ಹೋಗಲಾಡಿಸಿ ಅದಕ್ಕೆ ತಕ್ಕ ಗೌರವ-ಸ್ಥಾನ ಗಳಿಸಿಕೊಟ್ಟಿದ್ದಾರೆ. ಅನೇಕರನ್ನು ಪ್ರಸಾಧನ ಕಲೆಯಲ್ಲಿ ತಯಾರು ಮಾಡಿದ್ದಾರೆ. ಹಲವರಂತೂ ಅದನ್ನೇ ವೃತ್ತಿಯಾಗಿಸಿಕೊಂಡು ನೆಮ್ಮದಿಯಿಂದ ಬದುಕಿದ್ದಾರೆ. `ಕಳ್ಳಸಾಗಾಣಿಕೆ ಕಳ್ಳರನ್ನು ಹಿಡಿಯುವ ಸರ್ಕಾರದ ಸಿಬ್ಬಂಧಿಗಳಿಗೂ ಪ್ರಸಾಧನ ಕಲಿಸಿದ್ದಾರೆ.

ಇವರ ಕೆಲಸವನ್ನು ಮೆಚ್ಚಿ 1979ರಲ್ಲಿ ಕರ್ನಾಟಕ ಅಕಾಡೆಮಿ ಪ್ರಶಸ್ತಿ ಇತ್ತು ಇವರನ್ನು ಗೌರವಿಸಿದೆ ಬೆಂಗಳೂರು ವಿಶ್ವವಿದ್ಯಾನಿಲಯದ ನಾಟಕ ವಿಭಾಗ (BA-Drama), ಮೈಸೂರು ಲಲಿತಕಲಾ ಕಾಲೇಜು, ವಿಜಯನಗರ ವಿಶ್ವವಿದ್ಯಾನಿಲಯ ಮುಂತಾದ ಕಡೆ ಗೌರವ ಉಪನ್ಯಾಸಕರಾಗಿದ್ದರು.

ನಾಟಕದ ಮೂಲಕ ಶಿಕ್ಷಣ `ಸಾಧ್ಯ' ಅನ್ನುವ ಪ್ರಯೋಗ ಇವರಿಂದ ಶಿಕ್ಷಣ ಪಡೆದ ಅನೇಕರು ಶಾಲಾ ಕಾಲೇಜುಗಳಿಗೆ ಹೋಗಿ ಪ್ರದರ್ಶನ ನೀಡಿ ನಂತರ ವಿಚಾರ ವಿನಿಮಯ ಮಾಡಿದ್ದಾರೆ.

ಭಾರತದಲ್ಲೇ ಹೆಸರುಗಳಿಸಿರುವ ಸುಚಿತ್ರ ಫಿಲ್ಮ್ ಸೊಸೈಟಿ ಮತ್ತು ಸಿನಿಮಾ ಅಕಾಡೆಮಿಯ ಸ್ಥಾಪಕ ಅಧ್ಯಕ್ಷರಾಗಿ ಕೆಲಸಮಾಡಿದ್ದಾರೆ. ಇಂದು ಈ ಸಂಸ್ಥೆ ತನ್ನದೇ ಆದ ಪುಟ್ಟ, ಚೊಕ್ಕ ರಂಗ ಮಂದಿರ ಮತ್ತು ಪರಿಸರಕ್ಕೆ ಹೊಂದಿಕೊಂಡಂತಿರುವ ದೊಡ್ಡ ಬಯಲು ರಂಗಮಂದಿರವನ್ನು ಬನಶಂಕರಿ ಬಡಾವಣೆಯಲ್ಲಿ ಹೊಂದಿದೆ. ಇವುಗಳಿಗೆ ಪ್ರೇರಕ ನಾಣಿ, ಅಲ್ಲದೇ `ಜನರಿದ್ದಲ್ಲಿ ನಾಟಕ' `ಬಡಾವಣೆಯಲ್ಲಿ ನಾಟಕ' ಅನ್ನುವ ಪ್ರಯತ್ನ ಈ ರಂಗ ಮಂದಿರಗಳಲ್ಲಿ ಸತತವಾಗಿ ಆಗುತ್ತಿದೆ.

ದಿ. ಲಕ್ಷ್ಮೀನಾರಾಯಣ್‌ರವರ `ಮುಯ್ಯಿ' ಚಿತ್ರಕ್ಕೆ ಕಲಾ ನಿರ್ದೇಶನ ಮತ್ತೆ ದಿ. ಶಂಕರ್‌ನಾಗ್ ಅವರ `ಆಕ್ಸಿಡೆಂಟ್' ಚಿತ್ರದಲ್ಲಿ ಪಾತ್ರ ಅಲ್ಲದೆ ಗಿರೀಶ್ ಕಾರ್ನಾಡ್, ಕಾರಂತರ ನಿರ್ದೇಶನದ `ವಂಶವೃಕ್ಷ' ಚಿತ್ರದಲ್ಲೂ ಪಾತ್ರಮಾಡಿದ್ದಾರೆ.

1991ರಲ್ಲಿ `ವೃದ್ಧಾಪ್ಯ' ಮತ್ತು ಹಿರಿಯರ ಬಗ್ಗೆ ಯಾವುದೋ ರೀತಿಯ ಅಸಡ್ಡೆ ಕಾಣುತ್ತಿರುವ ಈ ಕಾಲದಲ್ಲಿ ಅವರ ಬಗ್ಗೆ ಗಮನ ಮೂಡಿಸಲು `ನಿವೃತ್ತಿ-ಪ್ರವೃತ್ತಿ' ಎಂಬ ಧಾರವಾಹಿಯೊಂದನ್ನು ರಚಿಸಿ ನಿರ್ದೇಶಿಸಿದ್ದಾರೆ.

ಭಾರ್ಯೆ `ಭಾರ್ಗವಿ' ಒಬ್ಬ ಉತ್ತಮ ರಂಗ ಸಿನಿಮಾ - ಧಾರಾವಾಹಿ ನಟಿ ಅನ್ನಿಸಿಕೊಂಡಿದ್ದಾರೆ ಅವರಿಗೆ `ಪ್ರೊ. ಹುಚ್ಚುರಾಯ' ಸಿನಿಮಾದ ಪಾತ್ರದ ಅಭಿನಯಕ್ಕಾಗಿ ರಾಜ್ಯ ಪ್ರಶಸ್ತಿ ಬಂದಿದೆ ಮನೆಯ ಈ ವಾತಾವರಣದಿಂದಾಗಿ ಮನೆಯ ಹೆಸರು `ಗ್ರೀನ್‌ರೂಂ'.

ಮಕ್ಕಳು ಪ್ರಕಾಶಬೆಳವಾಡಿ, ಪ್ರದೀಪ್ ಬೆಳವಾಡಿ ಬೆಳಕು ಸಂಯೋಜನೆಯಲ್ಲಿ ರಂಗಸಜ್ಜಿಕೆಯಲ್ಲಿ ತಜ್ಞರ ಮಟ್ಟ ಮುಟ್ಟಿದ್ದಾರೆ. ಹೆಣ್ಣು ಮಕ್ಕಳು ಸುಜಾತ ಬೆಳವಾಡಿ, ಸುಧಾ ಬೆಳವಾಡಿ ಪ್ರಸಾಧನ ಮತ್ತು ಅಭಿನಯದಲ್ಲಿ ಹೆಸರುಗಳಿಸಿದ್ದಾರಲ್ಲದೆ ಹಲವಾರು ಪ್ರಶಸ್ತಿ ವಿಜೇತರ ಚಿತ್ರಗಳಲ್ಲಿ ಪಾತ್ರ ಮಾಡಿದ್ದಾರೆ. ಎಲ್ಲರೂ ದೂರದರ್ಶನ ಆಕಾಶವಾಣಿ ಕಲಾವಿದರು.

ಇಂದು ತಮ್ಮ 70ನೇ ವಯಸ್ಸಿನಲ್ಲಿ ಭಾನುವಾರದಂದು ಕಲಾಮಂದಿರದ ಅನಸು ಸ್ಮಾರಕ `ಅಭಿನಯ ತರಂಗ' (ಭಾನುವಾರದ ರಂಗ ಶಾಲೆ)ದ ನಿರ್ದೇಶಕರಾಗಿದ್ದಾರೆ. ಇಷ್ಟೆಲ್ಲವೂ ತಮ್ಮನ್ನು ಪ್ರೀತಿಯಿಂದ ಗೌರವದಿಂದ ಕಾಣುತ್ತಿದ್ದ ಟಿ.ಟಿ.ಕೆ. ಯವರ ಉದಾರ ಮನೋಭಾವದಿಂದ ಸಾಧ್ಯ ಅನ್ನುತ್ತಾರೆ ನಾಣಿ.

ದೇಶಾದ್ಯಂತ ಹಲವಾರು ರೀತಿ ತಿರುಗಾಡಿರುವುದಲ್ಲದೆ ಹಲವಾರು ಪರದೇಶಗಳಿಗೂ ಕಂಪನಿ ವತಿಯಿಂದ ಜನರಲ್ ಮ್ಯಾನೇಜರ್ ಆಗಿ ಹೋಗಿ ಕಂಪನಿಯ ಕೆಲಸಗಳ ಜೊತೆಗೆ ನಮ್ಮ ನಾಟಕಗಳ ಬಗ್ಗೆ ಉಪನ್ಯಾಸ ನೀಡಿದ್ದಾರೆ.

ಮಲೆನಾಡಿನ ಹೆಸರಾಂತ ನಾಟಕ ಶಾಲೆ, ಸಂಸ್ಥೆ `ನೀನಾಸಂ'ಗೆ ಉಪನ್ಯಾಸಕರು ನಾಟಕ ಅಕಾಡೆಮಿ, ರಾಷ್ಟ್ರೀಯ ರಂಗ ಶಾಲೆ ನಡೆಸಿದ ಎಲ್ಲ ರಂಗ ಶಿಬಿರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ.

ಅವರ ಅನುಭವ ಮಾಹಿತಿ ಇವುಗಳು ಸೇರಿದ ಮತ್ತೆ ಮುಖ್ಯವಾಗಿ ಪ್ರಸಾಧನ ಕಲೆಯ ಬಗ್ಗೆ ತಮ್ಮ ಪ್ರಯೋಗಗಳ ವಿವರಗಳನ್ನೊಗೊಂಡ ಒಂದು ಕಿರು ಹೊತ್ತಿಗೆ ಬರೆದು ಸದ್ಯದಲ್ಲೇ ಪ್ರಕಟಿಸಬೇಕೆಂದಿದ್ದಾರೆ. ಈಗ ಪ್ರಕಟಗೊಂಡಿದೆ.

ತಮ್ಮ ಯೌವ್ವನದಲ್ಲಿ ತಮ್ಮ ಮೇಲೆ ಪ್ರಭಾವ ಬೀರಿದ ಡಾ. ಹೆಚ್.ಎನ್. ದಿ. ಸಂಪದ್ಗಿರಿರಾಯರು (ನ್ಯಾಷನಲ್ ಹೈಸ್ಕೂಲ್/ಕಾಲೇಜು), ದಿ. ಗೋಪಾಲಸ್ವಾಮಿ ಐಯ್ಯಂಗಾರ್, ತಾತ ವೆಂಕಟರಮಣಯ್ಯ ಅವರನ್ನಲ್ಲದೆ - ಪ್ರೋತ್ಸಾಹ ನೀಡಿದ ತಂದೆ ನಂಜುಂಡಯ್ಯ ತಾಯಿ ಶಾರದಮ್ಮ ಅವರನ್ನು ವಿನಯದಿಂದ ನಾಣಿ ನೆನೆಯುತ್ತಾರೆ.

ಅಲ್ಲದೆ ಮೊದಲಿನಿಂದಲೂ ತಮಗೆ ಶ್ರದ್ಧೆ, ಶಿಸ್ತು ಕಲಿಸುತ್ತ ಸಹಾಯ ಮಾಡಿದ ನಾಟ್ಯಸಂಘದ ಸಂಸ್ಥಾಪಕರಾದ ಎಸ್. ಜಿ. ರಾಮಚಂದ್ರ ಅವರನ್ನು ಮರೆಯುವುದಿಲ್ಲ.

---

ಗ್ರಂಥ ಋಣ

ಫಿಲ್ಮ್ ಅಂಡ್ ಟೆಲಿವಿಷನ್ ಮೇಕಪ್ - ಹರ್ಮನ್ ಬುಖ್‌ಮನ್

ಮ್ಯಾಕ್ಸ್‌ಫ್ಯಾಕ್ಟರ್ ಹಿಂಟ್ಸ್ ಆನ್ ದಿ ಆರ್ಟ್ಸ್ ಆಫ್ ಮೇಕಪ್ ಮ್ಯಾಕ್ಸ್‌ಫ್ಯಾಕ್ಟರ್ ಮೇಕಪ್ ಸ್ಟುಡಿಯೋ - ಪಿಟ್‌ಮನ್

ದಿ ಆರ್ಟ್ ಆಫ್ ಮೇಕಪ್ ಸರ್ಜಸ್ಟ್ಯೂನ್ಯೋವ್‌ಸ್ಕಿ -ಫ್ರೆಡ್ರಿಕ್ ಮುಲ್ಲರ್

# ಅಧ್ಯಾಯ - I

# 'ಕಲೆಯಾಗಿ ಪ್ರಸಾಧನ'

............ಚರಿತ್ರೆ ಅನ್ನಬಹುದಾದದ್ದು.-

ಹಿಂದೆ, ಬಹು ಹಿಂದೆ, ನಾಟಕಗಳಲ್ಲಿನ ಪ್ರಧಾನ ವಸ್ತುಗಳೆಂದರೆ ದೈವಭಕ್ತಿ, ದೈವಲೀಲೆ, ಮಹಾಮಹಿಮರ ಪವಾಡಗಳು, ಮತಾಚರಣೆ ಭಕ್ತಿ ಪ್ರಧಾನವಾದವು. ಪ್ರದರ್ಶನಗಳು ನಡೆಯುತ್ತಿದ್ದದ್ದಾದರೂ ಸೂರ್ಯನ ಬೆಳಕಿನಲ್ಲಿ ಕೋಟೆಯೊಳಗೆ ಊರಿನ ಒಳಾಂಗಣದಲ್ಲಿ ದೃಶ್ಯಗಳ ಮೆರವಣಿಗೆ ಹೊರಟು (ಇಂದೂ ನಡವಳಿಕೆಯಲ್ಲಿರುವ 'ಕರಗ' ಪ್ರದರ್ಶನದಂತೆ ಅಥವಾ ದಿಲ್ಲಿಯಲ್ಲಿ ವರ್ಷಂಪ್ರತಿ ನಡೆಯುವ ಗಣರಾಜ್ಯೋತ್ಸವದಲ್ಲಿನ ಸ್ತಬ್ಧ ಚಿತ್ರಗಳ ಮೆರವಣಿಗೆಯಂತೆ) ಪ್ರೇಕ್ಷಕರು ಕುಳಿತಿದ್ದ ಬಳಿಗೇ ಬರುತ್ತಿದ್ದ ವಂತೆ.

ಊರಿನ ಜನರೇ ತಮ್ಮ ತಮ್ಮ ಶಕ್ತ್ಯಾನುಸಾರ, ತಮ್ಮ ವೃತ್ತಿ, ಅಂತಸ್ತಿಗೆ ತಕ್ಕಂತೆ ಹರಕೆ ಹೊತ್ತು ಒಂದೊಂದು ಖರ್ಚನ್ನು ಒಂದೇ ವೃತ್ತಿಯ ಗುಂಪಿನವರು ಅಂದರೆ ಚಮ್ಮಾರರು ಕಮ್ಮಾರರು – ರೊಟ್ಟಿ ಬೇಯಿಸುವವರು ಇತ್ಯಾದಿ ಇತ್ಯಾದಿ ಪೂರೈಸುತ್ತಿದ್ದರಂತೆ. ಇಂದಿಗೂ ನಮ್ಮ ಹಳ್ಳಿಗಾಡಿನಲ್ಲಿ 'ಶನಿಮಹಾತ್ಮೆ', 'ಕೋಟಿಚೆನ್ನಯ್ಯ' ಇಂತಹ ಪ್ರಸಂಗ– ನಾಟಕಗಳನ್ನು ಊರಿಗೆ ರೋಗರುಜಿನವಾಗದಿರಲೆಂದೋ ಅಥವಾ ಬಂದ ಅನಿಷ್ಟವನ್ನು ಓಡಿಸಲೆಂದೋ "ಅಮ್ಮ" ಬಂದಾಗ "ಅಮ್ಮ"ನಿಗೆ ಹೆದರಿ ಊರಿಗೆ ಊರೇ ಹರಕೆ ಹೊತ್ತು ನಡೆಸುತ್ತದೆ. ಏಕೆ ತಿರುಪತಿ ವೆಂಕಟ ರಮಣನಿಗೆ ಶಯನೋತ್ಸವನದ ಹರಕೆ–ಇಲ್ಲವೇ ತುಪ್ಪದಾಂಜನೇಯನಿಗೆ ಬಾಳೆಹಣ್ಣು – ವಡೆ ಸೇವೆ – ಇಲ್ಲದಿದ್ದರೆ ಶಾವಂತಿಗೆಯ ಸೇವೆ ಕಲಿತವರೂ ಬಲ್ಲಿದರೂ ಇಂದಿಗೂ – ಈ ಆಧುನಿಕ ದಿನಗಳಲ್ಲಿ ನಡೆಸುವುದಿಲ್ಲವೇ ಹಾಗೆ.

ಕಾಲಕ್ರಮೇಣ–ಮಳೆಗಾಲದಲ್ಲೂ–ಮೋಡ ಮುಚ್ಚಿದಾಗಲೂ ಪ್ರದರ್ಶನಗಳನ್ನು ಮಾಡಬೇಕು. ದೈವಭಕ್ತಿ ಹೆಚ್ಚಿಸಬೇಕೆಂಬ ಹಂಬಲದಿಂದಲೋ ಇಲ್ಲ ಹಿಡಿದು ಕೂಡಿಸಿದಾಗ ಜನ ದೃಶ್ಯಗಳನ್ನು ಮತ್ತಷ್ಟು ಮೆಚ್ಚಬಹುದೆಂಬ ಆಸೆಯಿಂದಲೋ ಪ್ರದರ್ಶನಗಳನ್ನು ನಾಲ್ಕು ಗೋಡೆಗಳ ಮಧ್ಯೆ ಮೇಲ್ಛಾವಣಿ–ಇರುವ ಕಡೆ ಮಾಡತೊಡಗಿದರಂತೆ. ತಲೆಯ ಮೇಲೆ ಮೇಲ್ಛಾವಣಿ ಬಿಸಿಲಿನ ತಾಪ–ಮಳೆಗಾಳಿ ಹೊಡೆತ ಇಲ್ಲದಿರುವಾಗ ಎಷ್ಟೋ ಮೇಲಲ್ಲವೇ? ಕ್ರೈಸ್ತರ ಯಾವುದೇ ಚರ್ಚಿನ ಒಳಾಂಗಣವನ್ನು ನೋಡಿದಾಗ ಅದು ನಾಟಕ ಗೃಹದಂತೆ ವೇದಿಕೆ– ಸಭಾಂಗಣವನ್ನು ಹೊಂದಿದೆ ಎಂಬುದನ್ನು ಕಾಣಬಹುದು.

ಈ ರೀತಿ ಯಾವಾಗ ನಾಟಕ ಪ್ರದರ್ಶನ ಸಭಾಂಗಣದಲ್ಲಿ ಆರಂಭ ವಾಯಿತೋ ಅಂತೆಯೇ ಅದು ಹಲವಾರು ಸಮಸ್ಯೆಗಳನ್ನು ಒಡ್ಡಿರಬೇಕು. ಈ ಸಮಸ್ಯೆಗಳೇ ಪ್ರದರ್ಶನ ಪ್ರಯೋಗಗಳಿಗೂ ಪ್ರಚೋದಕವಾಗಿರಬೇಕು.

## ಬೆಳಕಿನ ಮಹತ್ವ

ಮೊದಲನೇ ಸಮಸ್ಯೆ ಬೆಳಕಿಲ್ಲದಿರುವುದು. ಅದರಿಂದಲೇ ಬೆಳಕಿಗೆ ಹುಡುಕಾಟ. ಕೊಬ್ಬು–ಪಂಜು–ದೀವಟಿಗೆ–ಹಣತೆ–ಮಯಣದ ಬತ್ತಿ ಮುಂದುವರೆದಂತೆ ಚಿಮಣಿ ಎಣ್ಣೆಯ ದೀಪ ಅದಕ್ಕೆ ಗಾಜು–ನಂತರ ಗ್ಯಾಸ್‌ಲೈಟ್ ಬಂದಿರಬೇಕು. ಇಂದಿಗೂ ಹಲವಾರು ಹಳ್ಳಿಗಳ ಕಡೆ ನಾಟಕ ಪ್ರದರ್ಶನಕ್ಕೆ ಗ್ಯಾಸ್‌ಲೈಟೇ ಗತಿ. ಈಚೀಚೆಗೆ ವಿದ್ಯುತ್ ಶಕ್ತಿ ಯಂತ್ರದಿಂದ (Dynamo) ಬೆಳಕು ಹರಿಸುತ್ತಾರೆ (ನಮ್ಮ ದೇವರಿಗೂ.....). ಕಡೆಗೊಮ್ಮೆ ವಿದ್ಯುತ್‌ಶಕ್ತಿಯ ಬೆಳಕು ಮಾನವನಿಗೆ ದೊರೆಯಿತು. ಅದರ ಬಳಕೆಯೂ ಹೆಚ್ಚಾಯಿತು.

ಮೊದಲು ಮಂಕು ಬೆಳಕಿನಿಂದಾಗಿ ಪಾತ್ರಧಾರಿಗಳು ತಮ್ಮ ವೇಷ ಭೂಷಣಗಳನ್ನ "ಅತಿ ಹೆಚ್ಚು" ಅನ್ನುವಂತೆ ಮಾಡಿಕೊಳ್ಳುತ್ತಿದ್ದಿರಬೇಕು. ಪ್ರಸಾಧನ ಕಲೆಯಂತೂ ಕಲಾತ್ಮಕವಾಗಿರದೆ ಬಹು ಹಿಂದುಳಿದಿರಬೇಕು. ದೂರದಲ್ಲಿ ಕುಳಿತ ಪ್ರೇಕ್ಷಕನಿಗೆ ತನ್ನ ಭಾವ ಪ್ರದರ್ಶನ ಕಾಣಲೇಬೇಕೆಂಬ ನಟನ ತೀರ್ಮಾನ ಸರಿಯಾದದ್ದೇ. ಅದಕ್ಕಾಗಿ ಅವನ ಪ್ರಯತ್ನ ಕಪ್ಪಗೆ ದಪ್ಪನಾಗಿ ತಿದ್ದಿದ ಹುಬ್ಬುಗಳು, ತುಟಿಕೆಂಪು–ಕೆನ್ನೆಗೆಂಪು ಈ ವೇಷವನ್ನು ಹತ್ತಿರದಿಂದ ನೋಡಿದರೆ–ಭಯ ಉಂಟಾಗುತ್ತಿತ್ತೇನೋ ಅಥವಾ ಹತ್ತಿರದ ಪ್ರೇಕ್ಷಕನಿಗೆ ಅದು 'ವಿಕಾರ' ಎನಿಸಿದ್ದರೂ ಇದ್ದೀತು.

ಆದರೆ ಅಂದಿನ ನಿಸ್ಪೃಹ ಪ್ರೇಕ್ಷಕನ–ಮುಗ್ಧ ಪ್ರೇಕ್ಷಕನ ಮನಸ್ಸಿನಲ್ಲಿ ರಂಗದ ಮೇಲಿನ ವ್ಯಕ್ತಿಗಳು "ಅತಿಮಾನವರು" ಸಾಮಾನ್ಯರಲ್ಲ. ಈ ಮನೋಭಾವವಿದ್ದದ್ದರಿಂದಲೇ ಆ ಪ್ರೇಕ್ಷಕರ ಈ ವೇಷಗಳಲ್ಲಿ ಯಾವ ದೋಷಗಳನ್ನು ಕಾಣಲಿಲ್ಲ. ಇದರಿಂದಾಗಿ ನಟ ಮುಖಕ್ಕೆ ಬಿಳಿಯ ಬಣ್ಣ ಬಳಿದು–ತುಟಿ ಕೆನ್ನೆಗಳಿಗೆ ಇಂಗಳೀಕ ಹಚ್ಚಿ–ಕಣ್ಣು ಹುಬ್ಬುಗಳಿಗೆ ಕಾಡಿಗೆ ತೀಡಿ–ಹಳದಿ ಬೇಕೆನಿಸಿದಾಗ ಹರಿದಾಳ ಉಪಯೋಗಿಸುತ್ತಿದ್ದನಂತೆ. ಇಷ್ಟೆಲ್ಲ ಮಾಡಿದರೂ ಈ ಪ್ರಸಾಧನ ನಟನ ಝಗಝಗಿಸುವ ಬಟ್ಟೆ ಬರೆ– ವಡವೆ ವೈಢೂರ್ಯಗಳ ಹೊಳಪಿನಿಂದಲೂ–ನಕ್ಕಿ ಚಮಕಿಗಳ ಚಮತ್ಕಾರ ಗಳಿಂದಲೂ ಮುಚ್ಚಿಹೋಗಿ ನಟನ ಧ್ವನಿ ಮತ್ತು ಆಕಾರದಿಂದ–ಅಥವಾ ಆರ್ಭಟದಿಂದ ಪ್ರೇಕ್ಷಕರು ಅಪಾತ್ರಗಳನ್ನು ಅರಿತುಕೊಳ್ಳುತ್ತಿದ್ದರಂತೆ (ಇರಬೇಕು).

ಕ್ಲಾಲಕ್ರಮೇಣ ತಂತ್ರ ಬೆಳದಂತೆ–ಆಧುನಿಕತೆ ಬೆಳೆದಂತೆ ಉಪಕರಣಗಳೂ ಹೆಚ್ಚಿದಂತೆ–ಬೆಳಕಿನ ಉಪಯೋಗದ ಮೇಲೂ ಒಂದು ಹತೋಟಿ ಬಂದು "ಬೆಳಕಿನ ಸಂಯೋಜನೆ" ಪ್ರಾರಂಭ. ಬೆಳಕು ನೆರಳಿನ ಚೆಲ್ಲಾಟ–ಅದರ ಸದುಪಯೋಗ ಕಂಡುಬರುತ್ತದೆ. ನಟನು ಕೈಕಾಲುಗಳನ್ನು ಬೀಸಿ ಆರ್ಭಟದಿಂದ ಮಾತನಾಡುವುದನ್ನು ಕಡಿಮೆಮಾಡುತ್ತ ಬಂದು ನಾವು ನಮ್ಮಂತೆ ಕಾಣುವವಾದರೂ–ನಮ್ಮ ಮುಖದಲ್ಲಿನ ಏರುತಗ್ಗುಗಳ ಮೇಲೆ ಬೀಳುವ ಬೆಳಕಿನಿಂದಾಗಿ–ನೆರಳಿನಿಂದಾಗಿ ಅವೆಲ್ಲವನ್ನೂ ಬೇರೆ ದಿಕ್ಕಿನಿಂದ

ಬೆಳಕು ಚೆಲ್ಲಿ–ತೆಗೆದರೆ ನಮ್ಮ ಮುಖವೇ ಬದಲಾಯಿಸುತ್ತದೆ. ಉದಾಹರಣೆಗೆ ರಂಗಸ್ಥಳದ ಮೇಲಿನ–ಅಧ್ಯಕ್ಷರ ಅಮೃತ ಹಸ್ತದಿಂದ ಪಾರಿತೋಷಕವನ್ನು ಪಡೆಯುವಾಗ ಆ ಸ್ನೇಹಿತ ಛಾಯಾಗ್ರಾಹಕ ಹಳ್ಳದಲ್ಲಿನ ಸಭಾಂಗಣದಲ್ಲಿ ನಿಂತು ನಮ್ಮ 'ತಸಬೀರನ್ನ' ಕ್ಷಣಮಾತ್ರ ಉರಿಯುವ ಅತಿ ಹೆಚ್ಚು ಬೆಳು ಉಪಯೋಗಿಸಿ (Flash–light) ತೆಗೆದು ನಮಗೆ ಪ್ರತಿ ತೋರಿಸಿದಾಗ ಪರಿಣಾಮ ಕಂಡಿದ್ದೀರಿ. ನಮ್ಮ ಮುಖ ಉದ್ದುದ್ದನಾಗಿ ಗಲ್ಲದ ಕೆಳಭಾಗಕ್ಕೆ ಇಲ್ಲದ ಬೆಳಕು ಬಿದ್ದು ಉಬ್ಬಿ–ಹುಬ್ಬಿನ ಕೆಳಭಾಗ ಊದಿಕೊಂಡಂತೆಯೇ ಆಗಿ ಒಟ್ಟಿನಲ್ಲಿ ಫೋಟೋ ಚೆನ್ನಾಗಿ ತೆಗೆದಿಲ್ಲ "ಚೆನ್ನಾಗಿಲ್ಲ" ಅನ್ನುವಷ್ಟು ಮಟ್ಟಕ್ಕೆ ಹೋಗುತ್ತೇವೆ. ಇದಕ್ಕೆ ಕಾರಣ–ಮುಖಕ್ಕೆ ಸಹಜವಲ್ಲದ ಬೇರೇ ದಿಕ್ಕಿನಿಂದ ಬೀರಿದ ಬೆಳಕಿನ ಪ್ರಭಾವ.

ಸಾಮಾನ್ಯವಾಗಿ ನಮ್ಮ ಮುಖದ ಮೇಲೆ ಬೀಳುವ ಬೆಳಕಾದರೂ ಯಾವುದು? "ಆ ಸೂರ್ಯ ದೇವ"ನಿಂದ ನಮ್ಮ ಮುಖಕ್ಕೆ ನೇರವಾದ ಬೆಳಕು ಬೀಳುವುದು ಕಡಿಮೆ. ನಮ್ಮ ಮುಖದ ಮೇಲೆ ಬೀಳುವ ಬೆಳಕು–ಹೆಚ್ಚು ಕಡಿಮೆ ಎಲ್ಲವೂ–ಇಲ್ಲ–ಮೋಡ, ಭೂಮಿ ಮತ್ತು ಇತರ ಪದಾರ್ಥಗಳಿಂದ ಪ್ರತಿಬಿಂಬ ಹೊಂದಿದ್ದದ್ದು. ನಮ್ಮ ಕಣ್ಣಿಗೆ–ಇತರರ ನೋಟಕ್ಕೆ ಇದು ಅಭ್ಯಾಸವಾಗಿಬಿಟ್ಟಿದೆ. ಹೀಗಿರುವಾಗ ರಂಗದ ಮೇಲಿನ ನಟನಿಗೆ ಬೀರುವ ಬೆಳಕಾದರೂ ನೆತ್ತಿಯ ಮೇಲಿನಿಂದ ಮತ್ತೆ ಕಾಲಿನ ಬುಡದಲ್ಲಿ ರಂಗದ ಮುಂಭಾಗದಿಂದ (Top light and foot lights) ಇದರಿಂದಾಗಿ ಅವನ ಮುಖ ವ್ಯತ್ಯಾಸವಾಯ್ತು. ಅಲ್ಲದೆ ಈ ವಿದ್ಯುತ್ ಶಕ್ತಿಯ ನೈಜವಲ್ಲದ ಬೆಳಕಿನಿಂದಾಗಿ–ಸಾಮಾನ್ಯವಾದ ಹಿತಕರವಾದ ಬೆಳಕಿನಿಂದ ಕಳೆಯಿಂದಿದ್ದ ಅವನ ಮುಖ–ಕಳೆಗುಂದುತ್ತದೆ. ಜೊತೆಗೆ ಈ ಕೃತಕ ಬೆಳಕು ನಟನ ಮೈ ಚರ್ಮ, ಕೂದಲು ಕೊನೆಗೆ ಅವನ ಕಣ್ಣಿನ ಬಣ್ಣವನ್ನು ಕೂಡ ಬದಲಾಯಿಸುತ್ತದೆ. ಇದು ನಮ್ಮ 'ಹೆಂಗೆಳೆಯರಿಗೆ' ಗೊತ್ತಿದೆ. ಸಂಜೆಯ ಹೊತ್ತಿನಲ್ಲಿ ಕೃತಕ ಬೆಳಕಿನಲ್ಲಿ ನೈಜವಾಗಿ ಕಾಣಲು–ಕಳೆಕಳೆಯಾಗಿ ಕಾಣಲು–ನವಿರಾಗಿ ಬಣ್ಣ ಬಳಿದು–ಹುಬ್ಬುತಿದ್ದಿ ಕೆನ್ನೆಗೆ ತುಟಿಗೆ ನವಿರಾಗಿ ಕೆಂಪುಹಚ್ಚಿ–ಕಣ್ಣಿಗೆ ಕಾಡಿಗೆ ಹಚ್ಚಿ ಆರತಕ್ಷತೆ–ಪಾರ್ಟಿಗೆ ಹೋಗುವುದಿಲ್ಲವೇ ಅದರಿಂದ ಅವರು ಸುಂದರವಾಗಿ ಕಾಣುವುದಿಲ್ಲವೇ. ಮತ್ತೆ ಸೂರ್ಯನ ಕಿರಣಗಳಲ್ಲಿ ಕೆಂಪು ಮತ್ತು ಬಿಳಿ ಹೆಚ್ಚು. ವಿದ್ಯುತ್‌ಶಕ್ತಿಯ ದೀಪಗಳಲ್ಲಿ ಹಳದಿ ಹೆಚ್ಚು. ಇದರಿಂದಲೂ ಹಲವಾರು ಬದಲಾವಣೆಗಳಾಗುತ್ತದೆ. ಮುಖ್ಯವಾಗಿ ಚರ್ಮ ಕಳೆಗುಂದುತ್ತದೆ (becomes pale). ಕೆನ್ನೆ–ತುಟಿಗಳ ಕೆಂಪು ಕಡಿಮೆಯಾಗುತ್ತದೆ. ಫಳಫಳ ಹೊಳೆಯುತ್ತಿದ್ದ ಕಣ್ಣುಗಳು –ಅವುಗಳ ನೋಟವನ್ನು ಕಳೆದುಕೊಳ್ಳುತ್ತವೆ. ಇವು ಗಳಿಂದಾಗಿಯೇ ನಟ ನಟಿಯರು ಪ್ರಸಾಧನಕ್ಕೆ ಕೈಹಚ್ಚಬೇಕಾಯಿತು. ಜೊತೆಗೆ ಇದನ್ನೊಂದು ಕಲೆಯಾಗಿ ಅಭ್ಯಾಸ ಮಾಡುವ ಪ್ರಯತ್ನವೂ ಶುರುವಾಯಿತು ಎನ್ನಬಹುದು.

## ಪ್ರಸಾಧನದಲ್ಲಿ ಉದ್ದೇಶ-ಅಭ್ಯಾಸ

ಪ್ರಸಾಧನವೆಂದರೆ ಬರೀ ಬಣ್ಣ ಬಳಿದುಕೊಳ್ಳುವ ಸ್ಥಿತಿಯಿಂದ ಇಂದು ಇದನ್ನು ಪ್ರದರ್ಶನ ಕಲೆಯ ಒಂದು ಪ್ರಮುಖ ಅಂಗ ಅನ್ನುವಷ್ಟರವರೆಗೆ ಬಂದಿದೆ. ಇದನ್ನು ಆಳವಾಗಿ ಅಭ್ಯಸಿಸಿ ಸಫಲ ಪ್ರದರ್ಶನಕ್ಕೆ ಸಹಾಯಕಾರಿಯಾಗಿ ಮಾಡುವ ಸತತ ಪ್ರಯತ್ನದಿಂದ ಇದಕ್ಕೊಂದು ಗೌರವ ಸ್ಥಾನ ಸಿಕ್ಕಿದೆ (ಅಥವಾ ಸಿಕ್ಕಿತು?) ಪರದೆ ಸರಿದೊಡನೆ ಅಥವಾ ರಂಗದ ಮೇಲೆ ಬೆಳಕು ಚೆಲ್ಲಿದೊಡನೆ ಪ್ರೇಕ್ಷಕರ ಕಣ್ಣಿಗೆ ನಟ ಬಿದ್ದಾಗ–ಆ ಪಾತ್ರದ ಬಗ್ಗೆ ಪ್ರೇಕ್ಷಕರ ಮನಸ್ಸಿನಲ್ಲಿ ಹಲವಾರು ಪ್ರಶ್ನೆಗಳು ಏಳುತ್ತವೆ. ಈ ಪ್ರಶ್ನೆಗಳಿಗೆ ಊಹೆಗೆ ಆಸ್ಪದ ಕೊಡದಂತೆ (ಮುಖ್ಯವಾದವುಗಳಿಗಾದರೂ) ಉತ್ತರ ಸಿಗುವಂತೆ ಪ್ರಸಾಧನ ಮಾಡಿಕೊಳ್ಳಬೇಕು. ಸಾಮಾನ್ಯವಾಗಿ ಏಳುವ ಪ್ರಶ್ನೆಗಳಾದರೂ ಯಾವುವು: ಉದಾಹರಣೆಗೆ ಈ ಪಾತ್ರ –

೧. ಯಾವ ಬುಡಕಟ್ಟಿನವನು (Race)

೨. ಯಾವ ದೇಶದವನು (Nationality)

೩. ಯಾವ ವಯಸ್ಸಿನವನು (Age)

೪. ಯಾವ ದೇಹದಾರ್ಢ್ಯತೆಯವನು (Health)

೫. ಯಾವ ಮನೋಭಾವದವನು (Temperment)

೬. ಎಷ್ಟು ರೂಪವಂತ ಅಥವಾ ಕುರೂಪಿ (Beauty / ugliness) / Handsome

೭. ಎಷ್ಟು ಗಾತ್ರ (Stout / Thin)

೮. ಇವನ ಚರ್ಮ, ಕೂದಲು ಕಣ್ಣು ಎಂತಹ ಬಣ್ಣದ್ದು (Colour of hair / Skin / eyes)

೯. ಎಷ್ಟು ಕೂದಲಿದೆ (Bald / Profuse hair)

೧೦. ಎಂತಹ ಬುದ್ಧಿ ಮಟ್ಟದವನು (Intellect)

೧೧. ಎಷ್ಟರ ಮನೋಧಾರ್ಢ್ಯತೆ (Will power)

೧೨. ಎಂತಹ ವ್ಯಕ್ತಿತ್ವದವನು (Character)

೧೩. ಎಂಥಹ ಮನಸ್ಸಿನ ಸ್ಥಿತಿಯಲ್ಲಿದ್ದಾನೆ (Moral State or spirit)

೧೪. ಸಮಾಜದಲ್ಲವನ ಸ್ಥಾನ (Social Status, Rich/Poor)

೧೫. ಎಂತಹ ವೃತ್ತಿಯವನು (Profession)

ನಟನೂ ತನ್ನ ಪಾತ್ರಕ್ಕೆ ಪ್ರಸಾಧನ ತೀರ್ಮಾನಿಸುವುದಕ್ಕೆ ಇಂತಹ ಹಲವಾರು ಪ್ರಶ್ನೆಗಳನ್ನು, ಮಾಡಿಕೊಳ್ಳುವುದಕ್ಕೆ ಮುಂಚಿತವಾಗಿ ಹಾಕಿಕೊಂಡಾಗ ಮಾತ್ರ ಪ್ರೇಕ್ಷಕರ ಮನಸ್ಸಿನಲ್ಲೇಳುವ ಪ್ರಶ್ನೆಗಳನ್ನು ಉತ್ತರಿಸಬಹುದು.

ನಾಟಕಕಾರನ ಪಾತ್ರಗಳ ಸೃಷ್ಟಿ, ಕಲ್ಪನೆ–ಚಿತ್ರಣಕ್ಕೆ ತಕ್ಕಂತೆ ಪ್ರಸಾಧನ ಮಾಡಿಕೊಳ್ಳಬೇಕು. ಅಲ್ಲದೆ ಪಾತ್ರಧಾರಿ ತನ್ನ ರಂಗಜೀವನದಲ್ಲಿ ಒಂದೇ ತೆರನಾದ ಪಾತ್ರಗಳನ್ನು ಅಭಿನಯಿಸಲು ಇಚ್ಛಿಸುವುದಿಲ್ಲ–ಮಾಡುವುದಿಲ್ಲ. ದೇವರು–ದಿಂಡರು, ಭೂತ–ಪ್ರೇತ, ಬಡವ–ಬಲ್ಲಿದ, ಕಾರ್ಮಿಕ–ಮುಖಂಡ, ರಾಜ–ಮಂತ್ರಿ, ಯಜಮಾನ–ಸೇವಕ, ವಂಚಕ–ಕಾಮುಕ, ಕ್ರೂರಿ–ಸಂಶಯ ಪಿಶಾಚಿ, ಭಯಗ್ರಸ್ತ–ರೋಗಿಷ್ಠ, ಅತಿಮಾನವ–ಆದಿಮಾನವ ಇತ್ಯಾದಿ ಇತ್ಯಾದಿ. ಈ ವೈವಿಧ್ಯಮಯ ಪಾತ್ರಗಳ ಸೃಷ್ಟಿಯಾಗಿರುವುದೇ ಅವನಿಗೋಸ್ಕರ. ಯಾವುದೇ ಮಾಡಿದರೂ–ಪ್ರಾಸಾಧನ–ವೇಷಭೂಷಣ–ದಿಗ್ದರ್ಶನಕ್ಕೆ ತಕ್ಕಂತೆ–ಅದಕ್ಕೆ ಒಳಪಟ್ಟಂತೆ ಆ ಕಾಲದ–ದೇಶದ–ವೇಳೆಯ, ಸಮಾಜದ–ರಂಗಕ್ರಮ–ನಡವಳಿಕೆಗೆ ಅನುಗುಣವಾಗಿ ಅವುಗಳನ್ನು ಮೀರದಂತಿರಬೇಕು. ಇಲ್ಲದಿದ್ದರೆ ಹೊಂದಾಣಿಕೆ (Harmony) ಇರುವುದಿಲ್ಲ. ಆದರೆ – ಕಲೆಯ ಉದ್ದೇಶ–

ಜೀವನವನ್ನು ಪ್ರತಿಬಿಂಬಿಸುವುದು ಮಾತ್ರವಲ್ಲ–ಹೊಸಬೆಳಕನ್ನು ಬೀರುವುದು–ಪ್ರೇಕ್ಷಕರ ಮನಸ್ಸನ್ನು ವಿಕಸನಗೊಳಿಸುವುದು. ಈ ಉದ್ದೇಶ ಮುಖ್ಯ.

ಇದೆಲ್ಲದರಿಂದಲೇ ಸಾಮಾನ್ಯವಾಗಿ ನಟರಿಗೆ ಪ್ರಸಾಧನ ಕಲೆ ಅತಿ ಕಷ್ಟವೆನ್ನಿಸುತ್ತದೆ–ಆದರೂ ಅದು ಮುಖ್ಯ ಎನ್ನಿಸಿದೆ. ಈ ಕಷ್ಟವನ್ನು ಎದುರಿಸಿ ಇದರ ಬಗ್ಗೆ ತನ್ನ ಜ್ಞಾನವನ್ನು ಬೆಳೆಸಿಕೊಳ್ಳುವ ಬದಲು ಹಲವಾರು (ಇತ್ತೀಚಿನ) ನಟರೂ ದಿಗ್ದರ್ಶಕರೂ ಇದರಿಂದ ಅಡಚಣೆ, ಇದು ಬೇಡವೇ ಬೇಡ–ಇದರ ಉಪಯೋಗವಿಲ್ಲದೆ–ಸಹಾಯವಿಲ್ಲದೆ ನಾನು ಶೋಭಿಸುತ್ತೇನೆ–ನಾನು ಪ್ರಯೋಗ ಮಾಡುತ್ತೇನೆ (ಯಾರ ಮೇಲೆ...?) ಎಂದೆಲ್ಲ ಹೇಳಿಕೊಳ್ಳುತ್ತ–ಪ್ರೇಕ್ಷಕರಿಗೆ ಮನ ಮುಟ್ಟುವಂತೆ ಪ್ರದರ್ಶನ ಮಾಡದೆ–ಏನನ್ನು ಸಾಧಿಸಿಲ್ಲವೆಂದು ಹೇಳಬಹುದು. ಪ್ರಯೋಗಾಂಗಗಳಾದ ರಂಗಸಜ್ಜಿಕೆ, ಬೆಳಕಿನ ಸಂಯೋಜನೆ, ವೇಷಭೂಷಣ, ರಂಗ ಪರಿಕರಗಳು ಪೀಠೋಪಕರಣಗಳು–ಪ್ರಸಾಧನ–ಇಂತಹವು ನಾಟಕವನ್ನು ಪ್ರೇಕ್ಷಕನಿಗೆ ತಲುಪಿಸಲು ಸಹಾಯಕವಾದವು. ಇವುಗಳಲ್ಲಿ ಯಾವುದೇ ಅಂಶವನ್ನು ಕಡಿಮೆ ಮಾಡಿದರೂ ಅಷ್ಟೇ ಪರಿಣಾಮವೂ ಕಡಿಮೆಯಾಗುತ್ತದೆ ಎನ್ನುವುದು ಎಲ್ಲರಿಗೂ ತಿಳಿದ ವಿಷಯ [ಹೇಗಿದ್ದರೂ "ನಾನು ಅಸಾಧ್ಯ" ನಾನು ಮಾಡುವುದೆಲ್ಲಾ ಯಾರೂ ಮಾಡಿರಬಾರದ ಪ್ರಯೋಗಗಳು" ಎಂಬ ಕೆಟ್ಟ ಹಟಮಾರಿತನ, ಡೋಂಗಿಯಿಂದ, ಅವನೊಬ್ಬನಿಗೆ ಸಮಾಧಾನ–ಅವನನ್ನು ಎತ್ತಿಹಿಡಿದು ಹೊಗಳುವ ಹೊಗಳುಭಟ್ಟರಿಗೆ ತೃಪ್ತಿ].

ಖಂಡಿತವಾಗಿಯೂ–ಈ ಪ್ರಯೋಗಾಂಗಗಳಲ್ಲಿ ಯಾವ ಅಂಶ ಅತಿಯಾಗಿ ಎದ್ದು ಕಂಡರೂ ಅದು ತಪ್ಪು, ಹಾಗಾಗಬಾರದು. ಇವೆಲ್ಲವೂ ನಾಟಕ ಪ್ರದರ್ಶನಕ್ಕೆ ಪೂರಕವಾದ ಅಂಶಗಳು, ಕಲೆಗಳು [Additive arts].

ನಾವೆಲ್ಲರೂ ಕುರೂಪಿಗಳಲ್ಲದಿದ್ದರೂ ಸುಂದರರಲ್ಲ. ಮನ್ಮಥ–ರತಿಯರಂತೂ ಅಲ್ಲ. ದಂತದಂತಹ ಹಣೆ, ಕಾಮನಬಿಲ್ಲಿನಂತೆ ಹುಬ್ಬುಗಳು, ಹವಳ ಅಥವಾ ತೊಂಡೆ ಹಣ್ಣಿನಂತಹ ತುಟಿಗಳು; ದಾಳಿಂಬೆ ಸಾಲಿನಂತೆ ನೆಟ್ಟಗೆ ಜೋಡಿಸಿದ ಹಲ್ಲುಗಳು, ಕಮಲದಂತೆ ಅರಳಿರುವ ಮೀನಲೋಚನಗಳು, ಸಂಪಿಗೆಯಂತಹ ನೀಳವಾದ ಅಂದವಾದ ಮೂಗು, ಮಂಡಿಗೆ ಬಡಿಯುವಂತಹ ಜಡೆ–ಇತ್ಯಾದಿ–ಪದ್ಯಗಳಲ್ಲಿ ಕಲ್ಪನೆಗಳಲ್ಲಿ–ಚಿತ್ರಗಳಲ್ಲಿ ಇರಬಹುದು. ಆದರೆ ಇವೆಲ್ಲವೂ ಒಬ್ಬರಲ್ಲೇ ಇರುವುದು ಅಸಾಧ್ಯ. ಎಲ್ಲ ಮುಖಗಳಲ್ಲೂ ಒಂದಲ್ಲ ಒಂದು ಕೊರತೆ ನ್ಯೂನತೆ ಇದ್ದೇ ಇರುತ್ತದೆ. ಅಕಸ್ಮಾತ್ತಾಗಿ "ಪರವಾಗಿಲ್ಲ–ಚೆನ್ನಾಗಿದ್ದಾನೆ. ಆ ಮುಖದ ಭಾಗಗಳೆಲ್ಲ ಅಳತೆಗೆ ತಕ್ಕಂತೆ ಗಾತ್ರ ಆಕಾರದ್ದಾಗಿದೆ" ಅನಿಸುವ ಮುಖ ಇದ್ದ ವ್ಯಕ್ತಿ ಸಿಕ್ಕಿದರೂ ಅವನಿಗೆ ಅಭಿನಯವೇ ಬರದಿದ್ದರೆ–ಏನು ಪ್ರಯೋಜನ?

ಹಾಗೇ ನಟನಾಕೌಶಲ ಅವನಲ್ಲಿದ್ದು, ನಟನಿಗೆ ಬೇಕಾದ ಧ್ವನಿ ಆಕಾರ ಅವನಲ್ಲಿದ್ದು ಅವನ ಮುಖ ಆ ಪಾತ್ರಕ್ಕೆ ತಕ್ಕುದಲ್ಲದಿದ್ದಾಗ ವಿಶೇಷ ಪ್ರಸಾಧನದಿಂದ ಆ ಕೊರತೆಯನ್ನು ತುಂಬಬಹುದು. ಅವನ ಅಭಿನಯಕ್ಕೆ ಸಹಾಯವಾಗಿಯೇ ಆಗುತ್ತದೆ.

ಚಲನ ಚಿತ್ರಗಳಲ್ಲೂ ಪ್ರಸಾಧನ ಅಷ್ಟೇ ಮುಖ್ಯ. ಅಲ್ಲಿಯೂ ಅದರ ಗುರಿಯಾದರೂ ನಾಟಕದಲ್ಲಿದ್ದಂತೆಯೇ. ಆದರೆ ಸಿನಿಮಾ ಪ್ರಪಂಚದಲ್ಲಿರುವ ಹಣ–ಖರ್ಚು–ಬಂಡವಾಳದಿಂದಾಗಿ ಬೇಕಾದ ಒಬ್ಬ ನಟ ಸಿಗದಿದ್ದರೆ ಹಣ ಕೊಟ್ಟು ಮತ್ತೊಬ್ಬನನ್ನು ಕೊಳ್ಳಬಹುದು. ಕರೆತರಬಹುದು. ಬರೀ ಬೋಳು ತಲೆಯವರ ಅಥವಾ ಬಿಳೀ ಕೂದಲಿನವರ ಸೈನ್ಯವನ್ನೇ ದುಡ್ಡು ಕೊಟ್ಟು ಸಿದ್ಧಮಾಡಬಹುದು.

ಆದರೆ ನಾಟಕ ಸಂಸ್ಥೆಗಳಲ್ಲಿ ಇರುವ ನಟರ ಸಂಖ್ಯೆಯೇ ಅದರಲ್ಲೂ ಉತ್ತಮ ನಟನಟಿಯರು ಎನಿಸಿಕೊಳ್ಳುವವರ ಸಂಖ್ಯೆಯೂ ಕಡಿಮೆ. ಅದರಿಂದ ಒಬ್ಬನೇ ನಟ ನಟಿ ಹಲವಾರು ಪಾತ್ರಗಳನ್ನು ಮಾಡಬೇಕಾಗುತ್ತದೆ. ಈ ಎಲ್ಲ ಪಾತ್ರಗಳಿಗೂ ಒಂದೇ ತೆರನಾದ ಪ್ರಸಾಧನ ಸಾಧ್ಯವೆ ?

ಒಬ್ಬರ ಮುಖ ಮತ್ತೊಬ್ಬರ ಮುಖದಂತಿಲ್ಲ, ಹೇಗೆ ಒಬ್ಬರ ದೇಹ ಮತ್ತೊಬ್ಬರ ದೇಹದಿಂದ ಬೇರೆ ರೀತಿಯದಾಗಿರುತ್ತದೋ ಹಾಗೇ.

ಹೊರಗಿನಿಂದ ನೋಡಿದಾಗ ಸುಮ್ಮನಿದ್ದಾಗ ಆ ಮುಖ ಈ ಮುಖ ಎರಡರಲ್ಲೂ ಒಂದೇ ರೀತಿಯ ಹೋಲಿಕೆ ಕಾಣಬಹುದು. ಆದರೆ ಭಾವ ಪ್ರದರ್ಶನ ಮಾಡಲು ಬಂದಾಗ ನಕ್ಕಾಗ, ಅತ್ತಾಗ, ಕೋಪಗೊಂಡಾಗ, ದುಃಖಗೊಂಡಾಗ ಯೋಚಿಸುವಾಗ, ಆಯಾ ಮುಖಗಳ ಸ್ನಾಯುಗಳೂ ಮಾಂಸಖಂಡಗಳೂ–ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಚಲಿಸುತ್ತವೆ, ಆಡುತ್ತವೆ. ಆದ್ದರಿಂದ ನಮ್ಮ ಮುಖದ ಅನುಕೂಲ ಪ್ರತಿಕೂಲಗಳನ್ನು ನಾವು ಅರಿತುಕೊಳ್ಳಬೇಕು. ನಮ್ಮ ಮುಖವನ್ನು ಸೂಕ್ಷ್ಮವಾಗಿ ವಿಧವಿಧವಾದ ಭಂಗಿಗಳಲ್ಲಿ, ಪರಿಸ್ಥಿತಿಗಳ ಬೆಳಕಿನಲ್ಲಿ, ಸನ್ನಿವೇಶಗಳಲ್ಲಿ ಗ್ರಹಿಸಿ ಚೆನ್ನಾಗಿ ಅರಿಯಬೇಕು ಮತ್ತೆ ನಿತ್ಯಜೀವನದಲ್ಲಿ ಹಲವಾರು ಮುಖಗಳನ್ನು ನೋಡಿ ಅವುಗಳ ವಿಶೇಷವಾದ ಆಕಾರ–ರಚನೆ ಇವುಗಳನ್ನು ಛಾಯಾಗ್ರಾಹಕನಂತೆ ಗ್ರಹಿಸಿ, ಮನಸ್ಸಿನ ಕಪಾಟಿನಲ್ಲಿಟ್ಟು, ಬೇಕಾದಾಗ ಹೊರತೆಗೆದು ಉಪಯೋಗಕ್ಕೆ ಪಡೆಯುವಷ್ಟು ಮುಟ್ಟಿಗಾಗಬೇಕು ಒಬ್ಬ ಉತ್ತಮನಟ–ಪ್ರಸಾಧನ ಕಲಾವಿದ.

ನಮ್ಮಲ್ಲಿನ ಕೆಲವು ನಟ ನಟಿಯರು ಒಬ್ಬ ಹೆಸರಾಂತ ಸಿನಿಮಾ ನಟನ ಅಥವಾ ನಟಿಯಂತೆ ಕಾಣಬೇಕೆಂಬ ಕೆಟ್ಟ ಚಟದಿಂದ ಪ್ರಸಾಧನ ಮಾಡಿಕೊಂಡು ಕೆಟ್ಟದಾಗಿ ಕಾಣುತ್ತಾರೆ.

ದಿನದಿನವೂ ಜೀವನದ ಝಂಝಾಟದಿಂದ, ಬಳಲಿದ, ಉದ್ಯೋಗಗಳಿಂದ, ವಯಸ್ಸಿನಿಂದ, ಪರಿಸ್ಥಿತಿಯಿಂದ, ಕ್ಷಣಕ್ಷಣಕ್ಕೂ ಬದಲಾಯಿಸುತ್ತಿರುವ ಮುಖ ನಟ, ನಟಿಯರನ್ನು ಪ್ರಸಾಧನ ಮಾಡಿಕೊಳ್ಳುವಾಗ ಮತ್ತಷ್ಟು ಕಷ್ಟಕ್ಕೆ ಗುರಿಮಾಡುತ್ತದೆ.

## ಬಣ್ಣಗಳ ಅಭ್ಯಾಸ

ಇನ್ನು ಬಣ್ಣಗಳೋ ಹಲವಾರು ವಿಧ–ಅವುಗಳ ಪ್ರಭಾವ–ತೀಕ್ಷ್ಣತೆ ಬೇರೆ ಬೇರೆ ಬೆಳಕಿನಲ್ಲಿ ಅವುಗಳ ಮೇಲಿನ ಪರಿಣಾಮ–ಅವುಗಳನ್ನು ಉಪಯೋಗಿಸುವ ತಂತ್ರ ಮತ್ತು ಕ್ರಮದ ವ್ಯತ್ಯಾಸ. ಹೀಗೆ ಹಲವಾರು ವಿಷಯಗಳ ಜ್ಞಾನ ಇರಬೇಕು. ಪ್ರಸಾಧನವನ್ನು ಕಲೆಯಾಗಿ ಅಭ್ಯಾಸ ಮಾಡುವವನು ರಾಸಾಯನಿಕ ಶಾಸ್ತ್ರ–ಭೌತಿಕ ಶಾಸ್ತ್ರದ ಜ್ಞಾನವನ್ನು

ಪಡೆಯಬೇಕಾಗುತ್ತದೆ. ಬಣ್ಣಗಳ ಬಗ್ಗೆ ಕಲಿಯುವುದು ವಿಜ್ಞಾನವಾದರೆ ಅವುಗಳನ್ನು ಉಪಯೋಗಿಸುವುದು ಕಲೆಯಾಗುತ್ತದೆ.

ಕೊನೆ ಗಳಿಗೆಯಲ್ಲಿ ಬಣ್ಣದ ಮನೆಗೆ ನುಗ್ಗಿ ಕೈಗೆ ಸಿಕ್ಕಿದ ಬಣ್ಣವನ್ನು ಬಳಿದುಕೊಳ್ಳುವ ವಿಲಾಸೀ ನಟನಟಿಯರನ್ನು ಇಂದೂ ಕಾಣುತ್ತೇವೆ. ಇನ್ನು ವೃತ್ತಿ ಸಂಸ್ಥೆಗಳಲ್ಲಿ ಗತಕಾಲದ ರೂಢಿಯನ್ನೇ. ಪರಂಪರೆಯಾಗಿ ಬಂದುದು ಬದಲಾಯಿಸಬಾರದೆಂಬ ನಂಬಿಕೆ–ಇವುಗಳಿಗೆ ಕಟ್ಟುಬಿದ್ದು ಪ್ರಯೋಗಕ್ಕೆ ಹೆದರಿ ಎಲ್ಲಾ ವಿಧದಲ್ಲೂ ರಂಗತಂತ್ರ ಮುಂದುವರೆದ ಈಗಲೂ–ಬಣ್ಣದ ಮನೆಯಲ್ಲಿ ಸರಿಯಾದ ಬೆಳಕಿನ ವ್ಯವಸ್ಥೆ ಕೂಡ ಇಲ್ಲದೆ ಮುಖಕ್ಕೆ ಮುಖವಾಡದಂತೆ ಬಣ್ಣ ಬಳಿದುಕೊಂಡಿರುವುದನ್ನ ನೋಡುತ್ತೇವೆ.

ಮುಖದ ಮುಂಭಾಗ ಮಾತ್ರ ಬಣ್ಣಕಂಡು, ಕತ್ತು–ಕಿವಿ, ಕೈಕಾಲುಗಳಿಗೆ ಬಣ್ಣಕಾಣಿಸದೆ ಮಾಡಿದ ಪ್ರಸಾಧನವನ್ನು ನಾಟಕದಲ್ಲಿ ಏಕೆ ಇಂದಿನ ಸಿನಿಮಾಗಳಲ್ಲೂ ಕಾಣಬಹುದು. ಇದಕ್ಕೆ ಕಾರಣವೇನು? ಇದೆಂಥ ಅಸಡ್ಡೆ ಅಥವಾ ಈ ಪ್ರಸಾಧನಕ್ಕಾಗುವ ಖರ್ಚಿನ ಉಳಿತಾಯವೋ? ಆ ಸೃಷ್ಟಿಕರ್ತನೇ ಬಲ್ಲ.

ಹಾಗಾದರೆ ಪ್ರಸಾಧನದ ಹೊರತು ಪ್ರದರ್ಶನ ಸಾಧ್ಯವಿಲ್ಲವೇ ಎಂದರೆ, ಇದೆ. ಅದು ಸೀಮಿತವಾಗಿ ಪದೇಪದೇ ಪಾತ್ರಧಾರಿ ಅದೇ ಪಾತ್ರ ಮಾಡಿದಾಗ ಪ್ರೇಕ್ಷಕರು ಬಹಳ ಹತ್ತಿರದಲ್ಲಿದ್ದಾಗ ಬೆಳಕಿನ ಸಂಯೋಜನೆ ಬಹು ಉತ್ತಮವಾಗಿದ್ದು ನೈಜವೆನಿಸುವಷ್ಟರಮಟ್ಟಿಗೆ ಇದ್ದಾಗ. ಪಾತ್ರಧಾರಿ ತನ್ನ ಗಡ್ಡ ಮೀಸೆಗಳನ್ನು ಬೆಳೆಸಿದರೆ (ಅದು ಆ ಪಾತ್ರಕ್ಕೆ ಬೇಕಾದ ಹಾಗೆ ಬೆಳೆದರೆ?!) ಮಾತ್ರ. ದೃಶ್ಯದಿಂದ ದೃಶ್ಯಕ್ಕೆ ಒಂದು ರಸ ಘಟ್ಟದಿಂದ ಮತ್ತೊಂದು ರಸಘಟ್ಟಕ್ಕೆ ಅಂಕದಿಂದ ಅಂಕಕ್ಕೆ ಬದಲಾವಣೆ ಬೇಕೆನಿಸಿದಾಗ ರಂಗ ಪ್ರದರ್ಶನದಲ್ಲಿ ಪ್ರಸಾಧನ ಖಂಡಿತವಾಗಿಯೂ ಅನಿವಾರ್ಯ. ಅದನ್ನು ಬಿಟ್ಟವರು ಬಿಡಲಿ, ಅವರಿಷ್ಟ. ಆದರೆ ಅದು ನಿಯಮವಂತೂ ಅಲ್ಲ.

ವೃತ್ತಿ ರಂಗಭೂಮಿಯಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಉತ್ತಮ ಕಲಾಪೂರ್ಣ–ಪ್ರಸಾಧನ ಕಂಡಿದ್ದೇನೆ (ಇಂದಿಗೂ ಎಲ್ಲ ಕಂಪೆನಿಗಳ–ನಾಟಕಗಳನ್ನು ಅವಕಾಶ ಸಿಕ್ಕಿದಾಗಲೆಲ್ಲಾ ಸಹೃದಯತೆಯಿಂದ ನೋಡುವ ಚಟ ನನಗಿದೆ. ಅದರಿಂದ ಉಪಯೋಗವೂ ಇದೆ. ಆದರೆ ನನ್ನ ಕೆಲವು ವಿಲಾಸೀ ಮಿತ್ರರು ವೃತ್ತಿ ರಂಗಭೂಮಿಯನ್ನು ಮೂಸಿ ಕೂಡ ನೋಡುವುದಿಲ್ಲ. ಅದರ ಕಾರಣ ಅವರಿಗೇ ತಿಳಿದಿರಬೇಕು. ಅವಕಾಶ ಸಿಕ್ಕಾಗ ಈ ಕಲಾವಿದರು ಉಪಯೋಗಿಸುವ ಕ್ರಮ–ಪದಾರ್ಥಗಳನ್ನು ನೋಡಲೋಸುಗ ತೆರೆಯ ಹಿಂದಿನ ಬಣ್ಣದ ಮನೆಯಲ್ಲಿ ಹತ್ತಿರದಿಂದ ಅದರ ಹಿಂಬದಿಯಲ್ಲಿ ನಿಂತು ನೋಡಿ–ಕೆಲವು ತಂತ್ರಗಳನ್ನು ಕಲಿತಿದ್ದೇನೆ–ನನ್ನ ತಂತ್ರಗಳನ್ನು ಬದಲಾಯಿಸಿಕೊಂಡಿದ್ದೇನೆ. ಕೆಲವಂ ಬಲ್ಲವರಿಂದ ಕಲ್ತು ಕೆಲವಂ ನೋಡುತಂ.... ತಪ್ಪೇನಿಲ್ಲ.

ಆದರೆ ಅದು ಉತ್ತಮವಾಗಿತ್ತೇ ಹೊರತು ನಾಟಕಕ್ಕಾಗಲೀ ಪಾತ್ರಪೋಷಣೆಗಾಗಲೀ ಪೂರಕವಾಗಿ ಅಥವಾ ಸಹಾಯಕವಾಗಿರಲಿಲ್ಲ. ಏಕೆಂದರೆ ನಾಟಕಕಾರನ ಕಲ್ಪನೆ–ದಿಗ್ದರ್ಶಕನ ಕಲ್ಪನೆ–ಕಲಾವಿದನ ಚಿತ್ರಣ–ಪಾತ್ರಧಾರಿಯ ಅಭಿರುಚಿ ಇವುಗಳಿಗೆ ಒಂದಕ್ಕೊಂದಕ್ಕೆ ಹೊಂದಾಣಿಕೆ (Harmony) ಇರಲಿಲ್ಲ.

## ನಿರ್ದೇಶಕ, ಪ್ರಸಾಧಕ

ಪ್ರದರ್ಶನದಲ್ಲಿ ಎಲ್ಲಾ ಪ್ರಯೋಗಾಂಗಗಳೂ ಸಮತೋಲನದಲ್ಲಿ ಎಷ್ಟು ಬೇಕೋ ಅಷ್ಟು ಇದ್ದರೇನೇ ನೋಡಲು 'ಸುಂದರ'–ಪರಿಣಾಮಕಾರಿ. ಪ್ರಸಾಧನವೇ ಮುಖ್ಯವಾಗಿ–ರಂಗಸಜ್ಜಿಕೆಯೇ ಪ್ರಧಾನವಾಗಿ–ಬೆಳಕಿನ ಚೆಲ್ಲಾಟವೇ ಪ್ರಬುದ್ಧವಾಗಿ ಅಲಂಕಾರವೇ ಅತಿಯಾದಾಗ'ನಾಟಕ' ಎಂಬುದರ ಗತಿಯೇನು? ಹೆಣಕ್ಕೆ ಅಲಂಕಾರ ಮಾಡಿದಂತಿರುತ್ತದೆ. ಉಪ್ಪು–ಖಾರ–ಒಗ್ಗರಣೆ–ಬೇಯಿಸಿರುವ ರೀತಿ ಇತ್ಯಾದಿ ಇತ್ಯಾದಿ ಮತ್ತೆ ಬಡಿಸುವ ರೀತಿ ಇವುಗಳೆಲ್ಲವೂ ಹಿತವಾಗಿ ಹದವಾಗಿ ಸೇರಿದ್ದರೇನೇ ಊಟ–ಸಂತರ್ಪಣೆ ಚೆನ್ನ. ಆದರೆ ಈ ಚೆಂದ ಅನಿಸುವುದಕ್ಕೆ ಕ್ರಮ–ಸಂವಿಧಾನ ಯೋಜನೆ–ಇವೆಲ್ಲವೂ ಬೇಕು.

ಅಂದರೆ, ನಾಟಕವನ್ನು ಪ್ರದರ್ಶನಕ್ಕೆ ತೆಗೆದುಕೊಂಡೊಡನೆ ಅವನ್ನು ಸಂಬಂಧಪಟ್ಟವರೆಲ್ಲರೂ ಹಲವಾರು ಸಲ ಓದಿ 'ಅರ್ಥಮಾಡಿಕೊಂಡು' ಹೊಸ ರೀತಿಯಲ್ಲಿ ಮಾಡಲೇಬೇಕೆಂಬ ಕೆಟ್ಟ ಹಟ ಬಿಟ್ಟು–ನಾಟಕಕಾರನಿಗೆ ಅವನ ಚಿಂತನೆಗೆ ಅನ್ಯಾಯವಾಗದಂತೆ, ಅನ್ಯಾಯ ಮಾಡದೆ ಆಲೋಚಿಸಿ ನಟರನ್ನು ಆರಿಸಿ (ಸ್ನೇಹಿತ–ಸಂಬಂಧಿ–ಒಳ್ಳೆಯವ–ಹೇಳಿದ್ದನ್ನೆಲ್ಲಾ ಕೇಳುತ್ತಾನೆ ಅನ್ನುವುದು ಮುಖ್ಯವಾಗದೆ ಶ್ರದ್ಧೆ ಇದೆ–ಪ್ರಯತ್ನವಿದೆ–ಕಲೆ–ತಲೆ ಇದೆ–ಗಾತ್ರ–ಗಂಭೀರ–ಶಾರೀರವಿದೆ–ಎಂಬ ದೃಷ್ಟಿಯಿಂದ ಆರಿಸಿ) ಪ್ರದರ್ಶನ ರೀತಿಯನ್ನು ನಿರ್ಧರಿಸಿ–ಎಲ್ಲಿ–ಯಾವ ಸಭಾಂಗಣದಲ್ಲಿ ಎಂತಹ ಪ್ರೇಕ್ಷಕರಿಗೆ–ತಗಲುವ ಖರ್ಚು ಎಷ್ಟು ಎಂಬುದರ ತೀರ್ಮಾನಕ್ಕೆ ಬಂದು "ಸಫಲ ಪ್ರದರ್ಶನವೇ" ಆಗಬೇಕು ಎಂಬ ಹಟ–ಗುರಿ–ಗಮನ ಇರಬೇಕು. ಮತ್ತೆ ಸಂಬಂಧಪಟ್ಟ ತಾಂತ್ರಿಕವರ್ಗದವರೊಡನೆ ಚರ್ಚಿಸಿ ಒಂದು ಯೋಜನೆ–ಕ್ರಮಪಟ್ಟಿ–ಅದಕ್ಕೆ ನಿಯಮಿತ ವೇಳಾಪಟ್ಟಿಯನ್ನೂ ಜನ–ಧನ ಸಹಾಯ ಹೊಂದಿಸಿಕೊಂಡು......ಈ ಎಲ್ಲ ಪ್ರಯತ್ನ ವಿಲಾಸಿಗಳಲ್ಲಿ ಎಷ್ಟರಮಟ್ಟಿಗಿದೆ ಎಂಬುದು ಚರ್ಚಾಸ್ಪದ..., ಇದು ಅಸಂಬದ್ಧ ಪ್ರಲಾಪವಲ್ಲ. ತರಬೇತಿ ಪಡೆದವರೆಲ್ಲರ ಕರ್ತವ್ಯ. ಈ ಪಟ್ಟಿಯಲ್ಲೇ ಸೇರಿ ತೆರೆಯ ಹಿಂದೆ–ಕೆಲಸಮಾಡುವವರ ಗುಂಪಿನಲ್ಲಿ(Back stage crew) ಪ್ರಸಾಧನ ಮಾಡುವವನೂ ಇದ್ದಾನೆ. ಯಾವ ಗೌರವಕ್ಕೂ ಚಪ್ಪಾಳೆಗೂ ಪ್ರಶಂಸೆಗೂ ಆಸೆ ಇಲ್ಲದೆ ತಮ್ಮ ಕೆಲಸ ಮಾಡುವವರು ಅನೇಕರು.

ಈ ಕಲಾವಿದನೊಡನೆ, ತನ್ನ ನಟರೆಂತಹವರು, ಅವರ ಲೋಪದೋಷಗಳೇನು–ತನ್ನ ಕಲ್ಪನೆ–ಪಾತ್ರಗಳ ಬಗೆ ಎಂತಹುದು–ನಾಟಕಕಾರನ ವಿಚಾರ ಧೋರಣೆ ಏನು–ಈ ನಟರ ಮೂಲಕ ತಾನೇನು ಹೇಳಲಿಚ್ಛಿಸುತ್ತಿದ್ದೇನೆ, ನನ್ನಿಂದಾಗ ಬೇಕಾದುದೇನು ಎಂದು ಸಮಾಲೋಚಿಸುವ ದಿಗ್ದರ್ಶಕರೆಷ್ಟು ಮಂದಿ? ಪ್ರಸಾಧನವನ್ನು ಕೊನೆಯ ಘಳಿಗೆಯಲ್ಲಿ (ಪ್ರದರ್ಶನದ ಬೆಳಿಗ್ಗೆ ಹೇಳಿದರಾದರೂ ಸಂತೋಷ ಪಡುತ್ತಿದ್ದೆ–ಎಷ್ಟೋ ಬಾರಿ). ಈ ಕಲಾವಿದನ ನೆನಪಾಗಿ–ಪರದೆಗೆ ಬಣ್ಣ ಬಳಿಯುವವನನ್ನೋ–ಇಲ್ಲ ತಾನೇ ಅಂಗಡಿಗೆ ಓಡಿಸಿಯೋ ಓಡಿಯೋ ಹೋಗಿ ಅಥವಾ ಹೆಂಗೆಳೆಯರ ಹತ್ತಿರ ಬೇಡಿಕಾಡಿ ಅವರ ದಿನಬಳಕೆಯ ಕಾಡಿಗೆ ಬಣ್ಣಗಳಿಗೆ ಜೋತುಬಿದ್ದು–ತನ್ನ ಪ್ರಸಾಧನವನ್ನು ತಾನೇ ಮಾಡಿಕೊಂಡೆ ಎಂಬ ಹೆಮ್ಮೆಯಿಂದ ತಿರುಗುವವರನ್ನು ನನ್ನ ಅನುಭವದಲ್ಲಿ ಕಂಡಿದ್ದೇನೆ. ಎಷ್ಟೋ ಸಾರಿ ನಾಟಕ ಪ್ರದರ್ಶನಕ್ಕೆ ಟಿಕೆಟ್ಟು ತೆತ್ತು ಸಭಾಂಗಣದಲ್ಲಿ ಕುಳಿತಿದ್ದಾಗ–ನನ್ನಂತಹ ಸ್ನೇಹಿತರನ್ನು ಕರೆದೊಯ್ದು ಪ್ರದರ್ಶನವೇ ಮುಖ್ಯ ("Show must

go on") ಅನ್ನುವ ದೃಷ್ಟಿಯಿಂದ.... ಮೂರು ಮೊಳ ನೆಯ್ದು ಬಂದಿದ್ದೇನೆ. ಇಂತಹ ಅಸಡ್ಡೆಯಿಂದ ಪ್ರಸಾಧನವನ್ನು ಶ್ರದ್ಧೆಯಿಂದ ಆಳವಾಗಿ ಅಭ್ಯಾಸ ಮಾಡಲು ಪ್ರಯತ್ನಿಸುತ್ತಿರುವರಿಗಾಗಲೀ ಅಥವಾ ಗೊತ್ತಿದ್ದೂ ತಪ್ಪು ಮಾಡಿ-ತಪ್ಪನ್ನೇ ಪ್ರಯೋಗವೆಂದು ಸಾರುತ್ತಿರುವ ಈ ವಿಲಾಸೀ ದಿಗ್ದರ್ಶಕರಿಗಾಗಲೀ ಯಾವ ಸಮಾಧಾನ, ಪ್ರಯೋಜನ?

## ಸಾಮಗ್ರಿ-ಸಲಕರಣೆಗಳು-ಉಪಯೋಗ-ಲೋಪದೋಷಗಳು

ಪ್ರಸಾಧನಕ್ಕೆ ಹಿಂದೆ ಉಪಯೋಗಿಸುತ್ತಿದ್ದ ಬಣ್ಣಗಳಾದರೂ ಹಿಟ್ಟು-ಹೂವು-ಎಲೆಗಳಿಂದ ತೆಗೆದವು. ಇಂಗಲೀಕ-ಹರಿದಾಳ ಮುಂತಾದವು ಪ್ರಸಾಧನದಲ್ಲಿ ಅತಿಯಾಗಿ ಬಳಸುವ ಬಣ್ಣ "ಬಿಳಿ". ಇದಕ್ಕಾಗಿ ಉಪಯೋಗಿಸುವ ಪದಾರ್ಥ 'ಸಫೇದ್' ಎಂದು ಕರೆಸಿಕೊಳ್ಳುವ ದೊರಕುವ ಸೀಸದ ಬಿಳಿ ಆಕ್ಸೈಡ್ (White lead) ಅಥವಾ ಜಿಂಕ್ ಆಕ್ಸೈಡ್ (Zinc oxide). ಮೊದಲನೆಯದು ಅತಿ ಗಟ್ಟಿಯಾದ ಬಣ್ಣ, ಪಾರದರ್ಶಕದಲ್ಲಿ ಅಂದರೆ ಈ ಬಣ್ಣ ಹಚ್ಚಿಕೊಂಡಾಗ ಅದು ಚರ್ಮದ ಬಣ್ಣವನ್ನು ಪೂರ್ತಿಯಾಗಿ ಮುಚ್ಚುತ್ತದೆ. ಆದರೆ ಇದು ಬಹು ಅಪಾಯಕಾರಿ ಪದಾರ್ಥ. ಇದನ್ನು ಸತತವಾಗಿ ಉಪಯೋಗಿಸಿ ಮುಖ ಕೆಡಿಸಿಕೊಂಡವರಿದ್ದಾರೆ. ಇದರ ಬೆಲೆಯೂ ಸುಲಭ. ಹಾಗೇ ಇತರೇ ಬಣ್ಣಗಳಲ್ಲೂ ತುಟಿ-ಕಣ್ಣಿಗೆ ಹಚ್ಚುವ ಬಣ್ಣಗಳಲ್ಲೂ ಅಪಾಯಕಾರಿ ಬಣ್ಣಗಳಿವೆ. ಇವುಗಳನ್ನು ಸರಿಯಾದ ತಿಳುವಳಿಕೆ ಇಲ್ಲದೆ ಉಪಯೋಗಿಸಿದಾಗ ಮುಖವೆಲ್ಲ 'ಕಲೆ' ತುಂಬಿ ಶಾಶ್ವತವಾಗಿ ಕುರೂಪಿಗಳಾಗುವ ಸಂಭವ ಹೆಚ್ಚು.

ಕಾಲಕ್ರಮೇಣ ಪ್ರಸಾಧನಕ್ಕೆ ಉಪಯೋಗಿಸುವ ಪದಾರ್ಥಗಳ ಬಗ್ಗೆ ಪಾಶ್ಚಾತ್ಯ ದೇಶಗಳಲ್ಲಿ ಸಂಶೋಧನೆ ಆರಂಭವಾಗಿ ಮುಖ್ಯವಾಗಿ ಜರ್ಮನಿಯ ಲೈಶ್‌ನರ್ (Leichner) ಎಂಬ ವಿಜ್ಞಾನಿಯ ಪ್ರಯತ್ನದಿಂದ ಇಂದಿನ ಆಧುನಿಕ ಅಲಂಕಾರ ವಸ್ತುಗಳ ತಯಾರಿಕೆಗೆ ಬುನಾದಿ. ಇಂದೂ ಅವನ ಹೆಸರಿನಲ್ಲೇ ತಯಾರಾಗುವ ಪ್ರಸಾಧನ ವಸ್ತುಗಳೂ ಅಲ್ಲದೆ ಮಾಕ್ಸ್‌ಫ್ಯಾಕ್ಟರ್-ಸ್ಟೈನ್ಸ್ ಎಂಬುವರ ವಸ್ತುಗಳೂ ಜಗದಾದ್ಯಂತ ನಟರಿಗೆ ಪ್ರಸಾಧನ ಕಲಾವಿದರಿಗೆ ಪರಿಚಿತ ವಸ್ತುಗಳಾಗಿವೆ. ಇವುಗಳು ಉತ್ತಮವಾದವು, ಹಲವಾರು ವಿಧ. ಆದರೆ ದುಬಾರಿ. ಅಲ್ಲದೆ ಅವುಗಳ ಬಗೆಗೆ ಸಾಕಷ್ಟು ತಿಳುವಳಿಕೆ ಇರಬೇಕು. ಈ ಪದಾರ್ಥಗಳಾವುವೂ ನಮ್ಮಲ್ಲಿ ದೊರೆಯುವುದಿಲ್ಲ. ಬಳಸಲು ಪ್ರಯತ್ನಿಸಿದರೂ ಮೊದಲೇ ಹೇಳಿದಂತೆ ಇದಕ್ಕಾಗಿ ತಗಲುವ ಹಣವನ್ನು ಕೊಡುವವರಾದರೂ ಯಾರು? ಇದರಿಂದಾಗಿ ಅವುಗಳ ಬಳಕೆಯೇ ಕಡಿಮೆ. ಖಂಡಿತವಾಗಿಯೂ ನಮ್ಮಲ್ಲಿರುವ ಎಲ್ಲ ವಸ್ತುಗಳೂ ಕಳಪೆಯಲ್ಲ, ಹಾಗೆಯೇ ಪರದೇಶದಿಂದ ತಂದ-ಬಂದವೆಲ್ಲವೂ ನಮಗೆ ಸಂಪೂರ್ಣ ಉಪಯೋಗಕ್ಕೆ ಬರಲಾರವು. ಆದರೆ ಪರದೇಶದಿಂದ ತಂದ ಸಕಲ ವಸ್ತುಗಳೂ ಬಹು ಉತ್ತಮ ಎಂಬ ಈ ಭಾವನೆಯಿಂದಾಗಿ ನಮ್ಮ ನಿತ್ಯ ಬಳಕೆಯ ವಸ್ತುಗಳಿಗೂ ಈ ಭಾವನೆ ಹರಡಿರುವಂತೆಯೇ ಪ್ರಸಾಧನ ಸಾಮಗ್ರಿಗಳಿಗೂ ಈ 'ಫಾರಿನ್ ಮಾಲಿನ' ಭಾವನೆ ಬಂದಿದೆ. ಹೀಗಾಗಿ ಮೇಲೆ ಹೇಳಿದ ಸಂಸ್ಥೆಗಳ ಖಾಲಿ ಡಬ್ಬದಲ್ಲಿ ನಮ್ಮಲ್ಲೇ ತಯಾರಿಸಿದ ಪದಾರ್ಥಗಳನ್ನು ತುಂಬಿದ್ದನ್ನ ಕೊಂಡರೂ ಸಮಾಧಾನ. ಆ ಪದಾರ್ಥಗಳ ಹೆಸರನ್ನಾದರೂ ಮಧ್ಯೆ ಮಧ್ಯೆ ಹೇಳುವ ಚಟ ಬೇರೆ. ನಾನು ಆ ಪದಾರ್ಥಗಳನ್ನು ಉಪಯೋಗಿಸಿಲ್ಲ. ಉಪಯೋಗಿಸಬಾರದೆಂಬ ಹಟವೇನಿಲ್ಲ. ಆದರೆ ಕಲಾತ್ಮಕವಾಗಿ ಸೃಷ್ಟಿಸುವುದಕ್ಕೆ ಪದಾರ್ಥಗಳು ಮುಖ್ಯವಲ್ಲ. ಕಲೆ ಮುಖ್ಯ ಎಂಬ ನಂಬಿಕೆ. ಈ ಪರದೇಶದ ಪದಾರ್ಥಗಳು ಅವು ಎಷ್ಟೇ ಉತ್ತಮ ಅನಿಸಿದರೂ ನಮ್ಮ ವಾತಾವರಣದ ವೈವಿಧ್ಯಮಯ. ಬಣ್ಣದ ಚರ್ಮ-ಮುಖಗಳಿಗಂದಾಗಿ ಪೂರ್ಣ ಉಪಯೋಗಕ್ಕೆ ಬರಲಾರವು. ಹಾಗೇ ಅದನ್ನು ಉಪಯೋಗಿಸಬೇಕಾದರೆ ಹಲವಾರು ತೆರನಾದ ಬಣ್ಣಗಳನ್ನು-ಅವನ್ನು ಉಪಯೋಗಿಸುವ ಕ್ರಮ-ಮತ್ತೆ ಬೆರೆಸಿ ಬೇರೆ ವಿಧ ವಾದ ವರ್ಣವನ್ನೂ ತಯಾರಿಸುವಷ್ಟು ಮಟ್ಟಿಗೆ ಅನುಭವ ಇದ್ದಾಗ ಮಾತ್ರ ಸಾಧ್ಯ. ಹೆಂಗಸರ ನಿತ್ಯ ಬಳಕೆಯ-ಪ್ರಸಾಧನ ಸಾಮಗ್ರಿಗಳಲ್ಲಿ ಹಲವಾರು ಇದ್ದರೂ ಹೇಗೆ ರಂಗ ಪ್ರಸಾಧನಕ್ಕೆ ಉಪಯೋಗಕ್ಕೆ ಬರುವುದಿಲ್ಲವೋ ಹಾಗೆ.

ಅವುಗಳ ಬೆಲೆ ದುಬಾರಿ ಎಂದು ಮೊದಲೇ ಹೇಳಿದ್ದೇನೆ-ಸಿಗುವುದೂ ಕಷ್ಟ : ಹಿಮಾಲಯದಿಂದ ಕನ್ಯಾಕುಮಾರಿಯವರೆಗೂ ಮತ್ತೆ ಗುಜರಾತಿನಿಂದ ಮಣಿಪುರದವರೆಗೂ ಹರಡಿರುವ ನಮ್ಮ ದೇಶದಲ್ಲಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ನಾವು ಚಲಿಸಿದಾಗ ಹಿಮ ತುಂಬಿದ ಗುಡ್ಡಗಾಡಿನಿಂದ ಬಿಸಿಲು ಮಳೆ ತುಂಬಿದ ಬಯಲು ಪ್ರದೇಶಕ್ಕೆ ಸರಿದಂತೆ ನಾವು ಕಾಣುವುದಾದರೂ ಮೈಕಟ್ಟಿನಲ್ಲಿ-ಮುಖದ ಲಕ್ಷಣಗಳಲ್ಲಿ-ಚರ್ಮದ ಬಣ್ಣದಲ್ಲಿ ಸಾಕಷ್ಟು ವ್ಯತ್ಯಾಸ. ಛಳಿದೇಶದ ನಿವಾಸಿಗಳಿಗೂ ಹಾಗೇ ದಿಲ್ಲಿಯಲ್ಲಿ ಹುಟ್ಟಿ ಬೆಳೆದವರಲ್ಲೂ ಮಧ್ಯಪ್ರದೇಶದ ಜನರಲ್ಲೂ ನಂತರ ಮಹಾರಾಷ್ಟ್ರ-ತಮಿಳುನಾಡು-ಕರ್ನಾಟಕದ ಕರಾವಳಿಯರಲ್ಲೂ ಕೇರಳೀಯರಲ್ಲೂ ಕಾಣುವ ವ್ಯತ್ಯಾಸವೆಷ್ಟು ? ಅವರೆಲ್ಲರಿಗೂ ಒಂದೇ ತೆರನಾದ ಬಣ್ಣ ಹೇಗೆ ಸಾಧ್ಯ?

ಒಂದು ಸಂಸ್ಥೆಯ ನಟ ನಟಿಯರೋ ಹಲವಾರು ಅಥವಾ ನಾಟಕದ ಪಾತ್ರಗಳೋ ಹಲವಾರು. ಹೀಗಿರುವಾಗ ಅವರೆಲ್ಲರಿಗೂ ಒಂದೇ ತೆರನಾದ ಬಣ್ಣದಿಂದ ಪ್ರಸಾಧನ ಮಾಡಿದಾಗ-ಅವರೆಷ್ಟು ನೈಜವಾಗಿ ಕಾಣುತ್ತಾರೆ ? ಹಾಗೆ ಮಾಡಿದಾಗ ಎಲ್ಲರು ಗುಲಾಬಿ ಬಣ್ಣದವರಾಗಿ (ಜವಾನ-ಯಜಮಾನ-ಮನೆಯಾಕೆ-ಚಿಕ್ಕಮಗು ಖಾಯಿಲೆಯಿಂದ ನರಳುವವನು-ಇತ್ಯಾದಿ ಇತ್ಯಾದಿ) ಎಲ್ಲರೂ ಒಂದೇ ಪಡಿಯಚ್ಚಿನಿಂದ ತೆಗೆದ ಸೆಲ್ಯೂಲಾಯಡ್ ಬೊಂಬೆಗಳಂತೆ ಕಾಣುತ್ತಾರೆ. ಕೆಲವರ ಮೈಬಣ್ಣ ಕಂದು, ಕೆಲವರು ಬಿಳಿ, ಕೆಲವರು ಗೋಧಿ ಬಣ್ಣದವರು ಮತ್ತೆ ಕೆಲವರು ಸಂಪಿಗೆಯಂತೆ. ಹೊರಗೆ ಬಿಸಿಲಿನಲ್ಲಿ ಕಷ್ಟಪಟ್ಟು ದುಡಿಯುವ ರೈತ-ಕಷ್ಟಜೀವಿ-ಮಳೆ ಗಾಳಿಗಳ ಹೊಡೆತಕ್ಕೆ ಸಿಕ್ಕಿ ಬಗ್ಗಿರುವ ಅವನ ಮೈಮುಖಗಳ ಬಣ್ಣವೇ ಬೇರೆ. ಸದಾ ಕಾಲ ಕಛೇರಿಯಲ್ಲಿ 'ವಾತಾನುಕೂಲ' [Air-conditioned] ದಲ್ಲಿ ಬಿಸಲನ್ನೇ ಕಾಣದಿರುವ ಯಜಮಾನನ ಮೈಬಣ್ಣವೇ ಬೇರೆ. ಇಂಥಹವನು ಸಂಜೆ ಕಲಾಕ್ಷೇತ್ರದ ರಂಗದ ಮೇಲೆ ಆ ಕಷ್ಟಜೀವಿಯ ಪಾತ್ರ ವಹಿಸಬೇಕಾದಾಗ ಆ ಪಾತ್ರಕ್ಕೆ ಹೊಂದುವಂತೆ ಪ್ರಸಾಧನ ಮಾಡಬೇಕಲ್ಲವೆ?

ಆದರೆ ಹೀಗಾಗದೆ ಇಂದೂ ನಮ್ಮ ಸಿನಿಮಾ-ನಾಟಕಗಳಲ್ಲಿ ನಮ್ಮ 'ಹೆಸರಾಂತ' ನಟನಟಿಯರು ಕಷ್ಟಜೀವಿಗಳ ಪಾತ್ರ ನಿರ್ವಹಣೆ ಮಾಡುವಾಗ ಅವರ ಮುಖ-ಕೈ-ಕಾಲು ಎಷ್ಟೊಂದು ಅಂದವಾಗಿ ಅವರು ಕಷ್ಟವೇ ಕಾಣದ ವ್ಯಕ್ತಿಗಳಂತೆ ಕಾಣುವುದು ಸಾಮಾನ್ಯ ಆಭಾಸ. ಪಾತ್ರಕ್ಕೆ ತಕ್ಕಂತೆ-ನೆರೆ-ಗೆರೆ ಕಾಣದ ಮುದುಕು-ಮುದುಕಿಯರನ್ನ ಮಧ್ಯ ವಯಸ್ಕರನ್ನ ನಾನು

ಕಂಡಿದ್ದೇನೆ. ಇದಕ್ಕೆ ಕಾರಣ–ತಾನು ಚೆನ್ನಾಗಿ ಕಾಣಬೇಕೆಂಬ ನಟನಟಿಯ ಹಂಬಲದ ತಪ್ಪು ಮಾತ್ರವಲ್ಲ. ಆ ದಿಗ್ದರ್ಶಕನು ಪಾತ್ರಧಾರಿಗಳನ್ನೂ–ಪಾತ್ರಗಳನ್ನೂ ಹಿಡಿತದಲ್ಲಿ ಹಿಡಿಯದೇ–ಈ ಧೋರಣೆ ಬಂದಿದೆಯಲ್ಲದೆ ನಟನಟಿಯರ ಮನಸ್ಸಿನಲ್ಲಿ–ಈ ಪದಾರ್ಥಗಳ ಉಪಯೋಗ ಅಪಾಯಕಾರಿ ಎಂಬ ಭಯ ಇರುವುದರಿಂದಲೂ ಈ ಪದಾರ್ಥಗಳ–ಅವುಗಳ ರಾಸಾಯನಿಕಗುಣ–ಅವುಗಳ ಉಪಯೋಗದ ಪರಿಣಾಮ–ಅವುಗಳ ಬಗ್ಗೆ ತಿಳುವಳಿಕೆಗೆ ನೀಡುವ ಶಿಕ್ಷಣ ಎಲ್ಲಿ ? ಸಂಶೋಧನೆಗೆ ಅವಕಾಶವೆಲ್ಲಿ ?

ಪ್ರಸಾಧನಕ್ಕೆ ಕೈ ಹಚ್ಚುವವನು ಬಣ್ಣಗಳ ಬಗ್ಗೆ ಸಂಪೂರ್ಣ ಪರಿಶ್ರಮ ಪಡೆದವನಾಗಿರಬೇಕು. ಬಣ್ಣಗಳ ಪ್ರಭಾವ–ಬಣ್ಣಗಳ ಮೇಲೆ ಬಣ್ಣ ಬಣ್ಣದ ಬೆಳಕಿನ ಪ್ರಭಾವ. ಇತರ ಕಲೆಗಳ ಬಗ್ಗೆ ಅಂದರೆ–ರೇಖಾಚಿತ್ರ. ಜಲ ವರ್ಣಚಿತ್ರಗಳ ಹೆಸರಾಂತ ಕಲಾವಿದರು ಉಪಯೋಗಿಸುತ್ತಿದ್ದ ಸಾಮಗ್ರಿಗಳ–ತಂತ್ರ–ಕ್ರಮಗಳ ಬಗ್ಗೆ ಪರಿಚಯ ಅವರ ಕೃತಿಗಳ ಅಭ್ಯಾಸ–ಇವುಗಳನ್ನು ಶ್ರದ್ಧೆಯಿಂದ ಮಾಡಬೇಕು. (ಇದು ಅತಿ ಕಷ್ಟದ ಕೆಲಸ ಹೌದು!) ವಸ್ತು ಸಂಗ್ರಹಾಲಯಗಳಿಗೆ ಆಗಾಗ್ಗೆ ಭೇಟಿ ನೀಡಬೇಕು–ಕಲಾ ಪ್ರದರ್ಶನಗಳನ್ನು ತಪ್ಪಿಸಿಕೊಳ್ಳಬಾರದು–ಶಿಲ್ಪ ಕಲಾಕೃತಿಗಳನ್ನ ಉತ್ತಮ ಚಿತ್ರಗಳನ್ನ (ದೇಶ–ಪರದೇಶದವುಗಳನ್ನ) ಸಿನೆಮಾಗಳನ್ನ–ನಾಟಕಗಳನ್ನು ಮತ್ತೆ ತಾನು ಏನು ತಪ್ಪು ಮಾಡಬಾರದೆಂಬುದನ್ನು ತಿಳಿಯುವುದಕ್ಕಾದರೂ ಇತರರ ನಾಟಕ ಪ್ರದರ್ಶನಗಳನ್ನ ನೋಡುವ ಹವ್ಯಾಸ ಬೆಳೆಸಿಕೊಳ್ಳಬೇಕು.

ಇದರ ಬಗ್ಗೆ ತಿಳುವಳಿಕೆ ಬರಿಯ ಪುಸ್ತಕಗಳ ಪುಟಗಳನ್ನ ತಿರುಗಿಸಿದರೆ ಬರಲು ಅಸಾಧ್ಯ. ಇರುವ ಪುಸ್ತಕಗಳೆಲ್ಲವೂ ಪರದೇಶದ ಪದ್ಧತಿಯವು ಇಂಗ್ಲೀಷಿನಲ್ಲಿವೆ ; ನಮ್ಮ ದಿಗ್ರಂಥ ಭರತನ ನಾಟ್ಯ ಶಾಸ್ತ್ರವೋ ಸಂಸ್ಕೃತದಲ್ಲಿದೆ. ಅದರ ಭಾಷಾಂತರಗಳೂ ವಿರಳ. ಹಲವಾರು ಬಾರಿ ಇವು ಆ ಲೇಖಕನ ಸ್ವಂತ ಅನಿಸಿಕೆಗಳನ್ನು, ಅರ್ಥವನ್ನು ಕೊಡುವಂಥವು. ಇಷ್ಟು ಕಷ್ಟವಾದರೂ ಅವುಗಳನ್ನು ಓದಿ–ಅರ್ಥಮಾಡಿಕೊಂಡರೂ–ಅಭ್ಯಾಸಕ್ಕೆ ತರಲು ಹೋದಾಗ ಮೇಲೆ ಹೇಳಿದ ಹಲವಾರು ಕಾರಣದಿಂದಾಗಿ ಕೊರತೆಗಳಿಂದಾಗಿ ಅಸಾಧ್ಯ. ಆ ಅಂಗ್ರೇಜಿ ಪುಸ್ತಕಗಳನ್ನು ಓದಿದಾಗ ಕ್ರಮ ಅರ್ಥವಾದರೂ ಅದರಲ್ಲಿ ಬಳಸುವ ಪದಾರ್ಥಗಳಾವುವೂ ನಮ್ಮಲ್ಲಿ ದೊರಕುವವಲ್ಲ. ಆ ಪದಾರ್ಥಗಳನ್ನ ಆ ಜನ ವೈಜ್ಞಾನಿಕವಾಗಿ ತಯಾರಿಸಿ–ಅವುಗಳ ಗುಣಮಟ್ಟವನ್ನು ನಿರ್ಧರಿಸಿ ಶುದ್ಧವಾಗಿ ತಯಾರಿಸಿ–ಅಪಾಯಕ್ಕೆ ಎಡೆಗೊಡದೆ–ನಿರ್ಮಿಸಿ ಆಧುನಿಕ ಪಾಶ್ಚಾತ್ಯ ರಂಗಭೂಮಿಯಲ್ಲಿ ಮಾತ್ರ ಏಕೆ ಪ್ರಪಂಚದ ನಾಟಕರಂಗಗಳಲ್ಲೂ ಬಳಕೆಗೆ ಬರುವಂತೆ ಮಾಡಿದ್ದಾರೆ. ನಮಗೆ ಅದೃಷ್ಟವೆಲ್ಲಿ? ತನ್ನ ರಂಗ ಭೂಮಿಯ ಬಗ್ಗೆ–ಗೌರವವಿರುವ ಪ್ರತಿಯೊಂದು ದೇಶವೂ ತನ್ನದೇ ಆದ ಪದಾರ್ಥಗಳನ್ನೂ (ಹೆಸರಾಂತವುಗಳನ್ನ 'ಕಾಪಿ' ಮಾಡಿಯಾದರೂ) ಸುಲಭ ಬೆಲೆಗೆ ದೊರಕುವಂತೆ ಮಾಡಿಕೊಂಡಿದೆ, ಮಾಡುತ್ತಿದೆ. ನಾವಂತೂ "ಹಿಂದುಳಿದ" ಜನ.

ಇತ್ತೀಚೆಗೆ ಅಲ್ಲೊಂದು ಇಲ್ಲೊಂದು ಪ್ರಸಾಧನಾ ತಯಾರಿಕಾ ಸಂಸ್ಥೆಗಳು ಹುಟ್ಟಿಕೊಂಡಿವೆ. 'ಪರವಾಗಿಲ್ಲ' ಅನ್ನುವಷ್ಟರ ಮಟ್ಟಿಗೆ ಪದಾರ್ಥಗಳನ್ನು ತಯಾರಿಸಿದರೂ ಒಮ್ಮೆ ಕೊಂಡ ಪದಾರ್ಥದ ಗುಣಮಟ್ಟ–ಮತ್ತೊಮ್ಮೆ ಕೊಂಡಾಗ ಇರುವುದಿಲ್ಲ. ಇದರ ಬಗ್ಗೆ ಅವರು ತಾನೇ ಆಸಕ್ತಿ ಏಕೆ ತಾಳಬೇಕು ? ಪ್ರಸಾಧನವೇ ಬೇಡ ಎಂಬ "ಆಧುನಿಕತೆ" ಹೆಚ್ಚಾಗುತ್ತಿರುವಾಗ, ಪ್ರೋತ್ಸಾಹ–ಉತ್ತೇಜನ–ಬುದ್ಧಿವಂತಿಕೆಯ ತೋರಿಕೆಗಿಂತ "ಉಪಯುಕ್ತ ಟೀಕೆ"–ಇವು ಇದ್ದರಲ್ಲವೇ ಬೆಳವಣಿಗೆ ಸಾಧ್ಯ.

ಈ ಕಲೆಯ ಬಗ್ಗೆ ಶಿಕ್ಷಣ ಅಗತ್ಯವೇ ಇಲ್ಲವೇ ? ಹಾಗೆ ನೋಡಿದರೆ ನನ್ನ ಹುಚ್ಚಿನಿಂದ–ಚಟದಿಂದಾಗಿ ಕೆಲವರು ತರುಣರನ್ನು ಪ್ರಯೋಗಾಂಗಗಳ ಬಗ್ಗೆ ಆಸಕ್ತರನ್ನಾಗಿ ಮಾಡಿದ್ದೂ ಉಂಟು. ನನ್ನ ಈ ೫೦ ವರ್ಷಗಳ ಅನುಭವದಲ್ಲಿ ಕಂಡದ್ದಾದರೂ ಏನು? ತನಗೆ ತಿಳಿದದ್ದನ್ನು ಮತ್ತೊಬ್ಬರಿಗೆ ಹೇಳಿಕೊಡುವ ಸೌಜನ್ಯ ವಿರಳ ಎಂಬುದನ್ನು. ಬೇಡ ಇಡೀ ರಾಷ್ಟ್ರಕ್ಕೆ 'ಒಂದೇ' ಎನ್ನಿಸಿಕೊಳ್ಳುತ್ತಿರುವ ರಾಷ್ಟ್ರೀಯ ನಾಟಕ ಶಾಲೆಯಲ್ಲಾದರೂ ಇದಕ್ಕೆ–ಅಭ್ಯಾಸಕ್ಕೆ, ಕ್ರಮಬದ್ಧ ಶಿಕ್ಷಣಕ್ಕೆ ಅವಕಾಶ–ಸಂಶೋಧನಾಲಯ ಇದೆಯೇ ? ಅನುಮಾನ? ಅಥವಾ ಹೆಸರಿಗೆ ಮಾತ್ರ ಇದೆಯೋ ನನಗೆ ಗೊತ್ತಿಲ್ಲ. ಕ್ಷೌರಿಕ ವೃತ್ತಿಯನ್ನು ಮಾಡುವವರಲ್ಲಿ ಹೇಗೆ ? ಪರಂಪರಾನುಗತವಾಗಿ "ಕತ್ತಿ ಮಸೆದು ನೆತ್ತಿಯ ಚರ್ಮವನ್ನು ಕೆತ್ತದೆ ತಲೆ ಬೋಳಿಸುವ ಕಲೆ" ಉಳಿದು ಬಂದಂತೆ ಈ ಕಲೆಯೂ ಆಗಿದೆ. ಕ್ಷೌರಿಕರಾದರೂ–ಗಿರಾಕಿಯ ತಲೆಯ ಮೇಲೆ ಕತ್ತಿ ಆಡಿಸುವ ಮೊದಲು ಹಸಿ ಮಡಕೆಯ ಮೇಲೆ ನವಿರಾಗಿ ತೆಳುವಾಗಿ ಬಳಿದ ಗಂಧವನ್ನು ಕೆರೆಯುವುದನ್ನು "ಅಭ್ಯಾಸ" ಮಾಡಿಸುತ್ತಾರೆಂದು ಕೇಳಿದ್ದೇನೆ.

## ಶಿಕ್ಷಣ ಸಂಘಟನೆ

ಆದರೆ ಈ ಕಲೆಯಲ್ಲಾದರೋ ಶಿಕ್ಷಣಕ್ಕೆ ಅವಕಾಶವಿಲ್ಲದೆ ಗತಕಾಲದಲ್ಲಿ ಮಾಡುತ್ತಿದ್ದ ತಪ್ಪನ್ನೇ ಆ ಗುರುವಿನಿಂದ ಕಲಿತ ಶಿಷ್ಯ ಮಾಡುತ್ತಿದ್ದಾನೆ. ೧೯೬೦ರಿಂದ ಈಚೆಗೆ ನಮ್ಮ ಅದೃಷ್ಟದಿಂದಲೋ ದುರಾದೃಷ್ಟದಿಂದಲೋ ಆಗಾಗ್ಗೆ ನಮ್ಮ ನಾಟಕ ಅಕಾಡಮಿಯವರಿಗೆ ಹೊರಹೊಮ್ಮುವ ಹುಮ್ಮಸ್ಸಿನಿಂದಲೋ ನಡೆಯುತ್ತಿದ್ದ ರಂಗ ತರಬೇತಿ ಶಿಬಿರಗಳಲ್ಲಿ ಈ ಕಲೆಯ ಬಗ್ಗೆ ಸ್ವಲ್ಪ ಗಮನ ಹರಿದಿತ್ತು. ಈ ಪರಿಸ್ಥಿತಿ ಕಾರಣ ಏಕೆ ? ಯಾರು ?

ವೈಯಕ್ತಿಕವಾಗಿ ನಾನು ('ನಾನು' ಎಂದು ಹೇಳಲೇಬೇಕಾಗಿದೆ) ಕೆಲವರನ್ನಾದರೂ ಈ ಕಲೆಯನ್ನು ಶ್ರದ್ಧೆಯಿಂದ ಕಲಿಯುವಂತೆ ಮಾಡಿದ್ದೇನೆಂಬುದೇ ಸಮಾಧಾನದ ವಿಷಯ. ಅವರೇ ಇಂದೂ ಎಲ್ಲ ನಾಟಕಗಳಿಗೂ ಏಕೆ ನವ್ಯ ಸಿನಿಮಾಗಳಿಗೂ ತೆರೆಯ ಮರೆಯಲ್ಲಿ ಕೆಲಸಮಾಡುತ್ತಿದ್ದಾರೆ. ಕೆಲವರು ಅದನ್ನೇ ವೃತ್ತಿಯಾಗಿಯೂ ತೆಗೆದುಕೊಂಡಿದ್ದಾರೆ? ಆದರೆ ನಮ್ಮ ಹೆಸರಾಂತ ದಿಗ್ದರ್ಶಕರಿಂದಲೇ ಅನ್ಯಾಯವಾದಾಗ ಈ ಕಲೆಯ ಜೀವನವನ್ನೇ (ಜಿಗುಪ್ಸೆಯಿಂದ !) ಬಿಟ್ಟುಬಿಡಬೇಕೆಂಬ ತೀರ್ಮಾನಕ್ಕೂ ಬಂದಿದ್ದಾರೆ. ಇಂತಹ ತೀರ್ಮಾನಕ್ಕೆ ಹಲವಾರು ಕಾರಣಗಳಿರಬೇಕು.

ಸಂತೆಯ ಹೊತ್ತಿಗೆ ಮೂರು ಮೊಳ ನೇಯುವ ದಿಗ್ದರ್ಶಕ ತಾವೇ ಮುಖ್ಯ ಎಂಬ ನಟನಟಿಯರ ತಂಡ–ವ್ಯವಸ್ಥೆ–ಈ ಕಲಾವಿದರ ಬಗ್ಗೆ ಇರುವ ಅಸಡ್ಡೆಯ ಮನೋಭಾವ–ಇದನ್ನು ಕಲೆಯೇ ಅಲ್ಲ ಅನ್ನುವ ನಿಕೃಷ್ಟ ಮನೋಭಾವ ಮತ್ತೆ ನಾಟಕಾರನನ್ನೂ ಮೀರಿ ತಾನೇ ಪ್ರಮುಖ ಎಂಬ ದಿಗ್ದರ್ಶಕ–ಇವರೆಲ್ಲರಿಗೆ ಮಾತ್ರ ಸಲ್ಲುವ ಪ್ರಶಂಸೆ–ಪ್ರಶಸ್ತಿ–ಪದವಿ–ಹೂವಿನಹಾರ–ಸನ್ಮಾನ ಎಲ್ಲವೂ. ತೆರೆಮರೆಯಲ್ಲಿ ಅಗೋಚರವಾಗಿ ಮೂಕಪ್ರಾಣಿಯಂತೆ ಕೆಲಸ ಮಾಡುವ 'ಪ್ರಸಾಧನ' ಕಲಾವಿದರದೂ ತಪ್ಪಿದೆ. ಇವರು ಸಂಘಟಿತರಾಗದಿರುವುದು ತಮಗೆ ನ್ಯಾಯವಾಗಿ ಸಲ್ಲಬೇಕಾದ

ಸ್ಥಾನ–ಗೌರವ–ಖರ್ಚಿನ ಪೂರ್ಕೆಕೆ ಇವುಗಳಿಗೆಲ್ಲ ಒಂದು ನಿರ್ದಿಷ್ಟ ತೀರ್ಮಾನ–ನಿಬಂಧನೆಗಳನ್ನು ಮಾಡಿಕೊಳ್ಳದಿರುವುದು. ಇಂದು ಒಂದು ನಾಟಕ ಪ್ರದರ್ಶನಕ್ಕೆ ಸುಮಾರು ೧೨ ರಿಂದ ೧೮ ಸಹಸ್ರ ರೂಪಾಯಿಗಳನ್ನು ವೆಚ್ಚ ಮಾಡುವವರು ಈ ಕಲಾವಿದನಿಗೆ ಇವನ ಪ್ರಯಾಣದ ಖರ್ಚನ್ನೂ ಕೊಡದೆ ಗೌರವದಿಂದ ಕಾಣದಿರುವುದರ ಅರ್ಥವೇನು? ರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ಪಡೆದವರೂ(?!) ನಾಟಕರಂಗದಲ್ಲಿ ಪರಿಶ್ರಮ ಪಡೆದವರೂ ಪ್ರಶಸ್ತಿ–ಪದವಿ–ಸ್ಥಾನ ಗಳಿಸಿದಂತಹವರೇ. ಈ ರೀತಿ ವರ್ತಿಸುತ್ತಿದ್ದಾರೆ ಎಂಬುದಂತೂ ಅತಿ ವಿಷಾದನೀಯ.

ರಂಗಸಜ್ಜಿಕೆ ಮಾಡಿದವ ತನ್ನ ಪರದೆ, ದೃಶ್ಯಗಳನ್ನು ಹಿಂತೆಗೆದುಕೊಳ್ಳ ಬಹುದು, ದೀಪದವರು ತಂದ ದೀಪಗಳ ಬಾಡಿಗೆ ಪಡೆದು ಹಿಂತೆಗೆದುಕೊಳ್ಳಬಹುದು, ಧ್ವನಿವರ್ಧಕದವರು ತಮ್ಮ ಉಪಕರಣಗಳನ್ನು ತೆಗೆದುಕೊಂಡು ಹೋಗಬಹುದು. ಹೀಗೆ ಕುರ್ಚಿ, ಸೋಫಾ, ಜಮಖಾನದವರೆಗೂ ಎಲ್ಲ ಪದಾರ್ಥಗಳೂ ಹಿಂತಿರುಗಿಸಲ್ಪಡುತ್ತದೆ. ಅವುಗಳ ಖರ್ಚೂ ತೂಗಿಸಲ್ಪಡುತ್ತದೆ. ಆದರೆ ಮುಖಕ್ಕೆ ಬಳಿದ ಬಣ್ಣ ಮಾಡಿದ ಪ್ರಸಾಧನವನ್ನು ಮಾಡಿದ ನೆನಪು ಮಾತ್ರವೇ ಈ ಕಲಾವಿದನಿಗೆ ಉಳಿಯುವುದು. ತಲೆಗೆ ಹಾಕುವ ಟೋಪನ್ 'ಪ್ರಸಾಧನದಲ್ಲಿ' ಸೇರಿಲ್ಲ ಎಂಬುದು ಹಲವಾರು ದಿಗ್ದರ್ಶಕರಿಗೆ, ನಿರ್ಮಾಪಕರಿಗೆ ಗೊತ್ತಿಲ್ಲ! ಅದು ಉಡುಪಿನ ಪಟ್ಟಿಯಲ್ಲಿ ಸೇರುತ್ತದೆ. ಎಷ್ಟೋ ಬಾರಿ ಅವುಗಳನ್ನು ತನ್ನ ದುಡ್ಡನ್ನಿತ್ತು ಬಾಡಿಗೆಗೆ ತಂದಿರುತ್ತಾನೆ ಈತ . ಏಕೆಂದರೆ ಅವುಗಳ ಬೆಲೆಯೇ ವಿಪರೀತ. ತನ್ನ ಖರ್ಚಿನಲ್ಲೇ ರಂಗಮಂದಿರಕ್ಕೆ ಬಂದು, ಯಾವೊಂದು ಸೌಕರ್ಯವಿಲ್ಲದೆ ಮೂಲೆಯಲ್ಲಿ ಘಂಟೆಗಳ ಕಾಲ ನಿಂತು ಕೆಲಸ ಮಾಡಿ ರಂಗಮಂದಿರ ಖಾಲಿಯಾದ ಮೇಲೆ ಒಬ್ಬನೇ ನಡೆದು ಹಿಂತಿರುಗುತ್ತಾನೆ ಹಿಂದೆ ಎಷ್ಟೋ ಭಾರಿ "ನಾನು" ಹಿಂತಿರುಗಿದ್ದೇನೆ. ಇದು ನಾಟಕ ತಿಳಿಯದವರ ಪ್ರದರ್ಶನಗಳಲ್ಲಿ ಆಗಿದ್ದರೆ"ಗೊತ್ತಿಲ್ಲಪಾಪ" ಎನ್ನಬಹುದು. ಆದರೆ ಇಂತಹ ಪರಿಸ್ಥಿತಿ ಹಲವಾರು ಸಲ ತಿಳಿದವರ–ತಜ್ಞರ–ಹೆಸರಾಂತ ದಿಗ್ದರ್ಶಕರ ಸಂಸ್ಥೆಗಳಲ್ಲಿ ಆಗಿದೆ.

ಇನ್ನು ಸಿನಿಮಾ ಪ್ರಪಂಚದಲ್ಲೋ–ಆ ತಯಾರಕರು ನಟನಟಿಯರಿಗೆ ತಲೆಗೆ ಹಚ್ಚುವ ಎಣ್ಣೆ ಸೋಪಿನಿಂದ ಹಿಡಿದು–ಚಪ್ಪಲಿ ಬೂಟಿನ ಲೇಸಿನ ತನಕ ಖರ್ಚು ತೂಗಿಸಿ ಲಕ್ಷಾಂತರ ರೂಪಾಯಿ ಖರ್ಚುಮಾಡುವವರೂ ನಮ್ಮ ಎಂದು ಹೇಳಿಕೊಂಡು ತಿರುಗುವ ಇತ್ತೀಚಿನವರೂ ಪ್ರಸಾಧನ ಕಲಾವಿದರಿಗೆ ಕೊಡಬೇಕಾದ ಹಣದ ಬಾಕಿ ಇಟ್ಟುಕೊಂಡಿದ್ದಾರೆ ಎಂದು ಕೇಳಿದ್ದೇನೆ.

ಇದು ನಾವು ನಡೆದು ಬಂದ ದಾರಿ. ನಡೆಯುತ್ತಿರುವ ದಾರಿ ಪ್ರಾರಂಭದಲ್ಲಿ ನಾನು ಇದನ್ನ ವೃತ್ತಿಯಾಗೇ ತೆಗೆದುಕೊಳ್ಳಬೇಕೆಂಬ ಹಂಬಲವಿತ್ತಾದರೂ ಕೆಲವೇ ವರ್ಷಗಳಲ್ಲಿ ಅದರ ಬಗ್ಗೆ ತೀರ್ಮಾನ ಬದಲಿಸಬೇಕಾಯ್ತು. ಅದಕ್ಕಾಗಿಯೇ ನನ್ನಂಥವರಲ್ಲೂ ಇದು ಹವ್ಯಾಸವಾಗೇ ಉಳಿದಿದೆ.

## ಕ್ರಮ

ನಾಟಕಗಳ ತಂತ್ರದ ಬಗ್ಗೆ, ದೇಶವಿದೇಶಗಳ ಬಗ್ಗೆ, ಆಯಾ ಕಾಲದ ಸಮಾಜದ ನಡವಳಿಕೆಯ ಬಗ್ಗೆ ನಾಟಕಕಾರನಿಗೆ ನಿರ್ದೇಶಕನಿಗೆ ಜ್ಞಾನ ಎಷ್ಟು ಅಗತ್ಯ ಎಂಬುದು ನಿರ್ವಿವಾದ. ಅಂತೆಯೇ ಪ್ರಯೋಗಾಂಗಗಳ ಪರಿಣತರಿಗೂ ಈ ಜ್ಞಾನ ಇಲ್ಲದಿದ್ದರೆ ಆಗುವುದೆಲ್ಲ ಆಭಾಸ.

ಇಲ್ಲಿ ಎಲ್ಲವೂ ಕಲ್ಪನೆಯಿಂದಲೇ ಸೃಷ್ಟಿಸಬೇಕಾಗುತ್ತದೆ. (Either it should be authentic or it should be artistic enough to create the right atmosphere).

ಪ್ರಸಾಧನಕ್ಕೆ ಮುಂಚೆ ನಾಟಕವನ್ನು ಓದಿ ಅರ್ಥಮಾಡಿಕೊಳ್ಳಬೇಕೆಂದು ಮೊದಲೇ ಹೇಳಿದ್ದೇನೆ. ಅನುಮಾನ ಬಂದಾಗ, ಸಂದೇಹ ಬಂದಾಗ, ಕೂಲಂಕಷವಾಗಿ ಚರ್ಚಿಸಿ ಒಂದು ನಿರ್ದಿಷ್ಟ ನಿರ್ಧಾರಕ್ಕೆ ಬರಬೇಕು, ಪಾತ್ರಗಳ ಬಗ್ಗೆ ಟಿಪ್ಪಣಿಗಳನ್ನು ಮಾಡಿಕೊಳ್ಳಬೇಕು.

### ಕೆಲವು ಉದಾಹರಣೆಗಳು

ಶೇಕ್ಸ್‌ಪಿಯರನ ಜ್ಯೂಲಿಯಸ್ ಸೀಸರ್ ನಾಟಕದಲ್ಲಿ "Cassius hath a lean and hungry look" ಅನ್ನುವ ಮಾತಿನಿಂದ ಆಕ್ಯಾಸಿಯಸ್ ಪಾತ್ರ ಹೀಗಿರ ಬೇಕೆನಿಸುವುದಿಲ್ಲವೇ. ಎಡ್ಮಂಡ್ ರಾಸ್ಟಾಂಡ್ (Cyrano) ಸಿರಾನೋ ನಾಟಕದಲ್ಲಿ ನಾಯಕನ ವಿಲಕ್ಷಣ ಮೂಗಿನ ಬಗ್ಗೆ ಸಾಕಷ್ಟು ವಿವರಣೆ ಇದೆ. ಆ ಮೂಗೇ ನಾಟಕದಲ್ಲಿ ಪ್ರಧಾನ.

ಕೈಲಾಸಂರ 'ಹೋಂ ರೂಲ್'ನಲ್ಲಿ ರಾಮಣ್ಣನ ಪಾತ್ರದ ಬಗ್ಗೆ ವೆಂಕಮ್ಮನ "ಮೀಸೇ ನೆರದವನಿಗೆ ಮದವಣಗಿತ್ತಿಯಾಗಬೇಕು " ಎಂಬ ಮಾತಿನಿಂದ ತಿಳಿಯುತ್ತದೆ. ಇನ್ನು ಸುಬ್ಬಮ್ಮನ ಪಾತ್ರದ ಬಗ್ಗೆ ವೆಂಕಮ್ಮ

"ಹಲ್ಲು ಬಿದ್ದ ಹದ್ದು" ಎಂದು ಹೇಳಿದಾಗ ತಿಳಿಯುತ್ತದೆ ಆ ಮುದುಕಿಯ ವಯಸ್ಸು.

ಕೈಲಾಸಂ 'ಹುತ್ತದಲ್ಲಿ ಹುತ್ತ' ದಲ್ಲಿ ಸರೋಜ:–

"ನೀವು ನಿಮ್ಮ ತಂದೆ ಹಾಗೆ ಕೆಂಪು ಅಲ್ಲದಿದ್ದರೂ ಕಪ್ಪೇನಲ್ಲ" ಅಂದಾಗ ತಂದೆ ಮಗ ಇಬ್ಬರ ವರ್ಣದ ಬಗ್ಗೆ ತಿಳಿಯುತ್ತದೆ. 'ಬಂಡ್ವಾಳವಿಲ್ಲದ ಬಡಾಯಿ'ಯಲ್ಲಿ 'ಮುದ್ದಣ', ತನ್ನ ಮಗನನ್ನ ಅಹೋಬ್ಲು "All Ink and no Paper" ಉದ್ದಿನ ಮಣಿ" ಎಂದೆಲ್ಲ ಕರೆದಾಗ ಅವನ ವರ್ಣದ ಬಗ್ಗೆ ಸ್ವಲ್ಪವಾದರೂ ತಿಳಯುವುದಿಲ್ಲವೇ ?

ಪರ್ವತವಾಣಿ ಅವರ 'ವಾರ್ಷಿಕೋತ್ಸವ' ನಾಟಕದ ಗುಮಾಸ್ತೆ 'ರಂಗಣ್ಣ' ರೇಗಿಕೊಂಡು "ವಯಸ್ಸು ಅರವತ್ತಾದರೂ ಹುಟ್ಟಿದ್ದು ಆರನೇ ತಿಂಗಳಲ್ಲಿ" ಅನ್ನುವಾಗ ಆ ಪಾತ್ರದ ವಯಸ್ಸು ಸ್ವಭಾವ ಗೊತ್ತಾಗುತ್ತಲ್ಲವೇ?

ಗಿರೀಶ್ ಕಾರ್ನಾಡರ "ತೊಘಲಖ್" ನಾಟಕದಲ್ಲಿ ಮುಹಮ್ಮದ ಕೋಟೆಯ ಮೇಲೆ ಪಹರೆ ತಿರುಗುತ್ತಿರುವ ಸೈನಿಕನ ವಯಸ್ಸು ಕೇಳುತ್ತಾನೆ. ಆಗ ಅವನು "ಹತ್ತೊಂಬತ್ತು" ಅಂದಾಗ "ಹ್ಞೂಂ ಕನಸು ಕಾಣುವ ವಯಸ್ಸು" ಎನ್ನುತ್ತಾನೆ.

ಅವರದೇ 'ಹಿಟ್ಟಿನ ಹುಂಜ' ದಲ್ಲಿ ಆನೆಯ ಕಾಲಿನಲ್ಲಿ ತುಳಿಸಿಕೊಂಡು ಮುಖ ವಿಕಾರವಾಗಿರುವ ಪಾತ್ರವಿದೆ.

ಶ್ರೀರಂಗರ ನಾಟಕಗಳಲ್ಲಂತೂ ಅವರು ಹಿಂದಿನ ಚಾರಿತ್ರಿಕ ಪೌರಾಣಿಕ ವ್ಯಕ್ತಿಗಳನ್ನು ನಮ್ಮ ಸಮಕಾಲೀನ ಪ್ರಪಂಚದ ವ್ಯಕ್ತಿಗಳಾಗಿ ಮತ್ತೆ ತೋರಿಸಿದಾಗ ಒಂದು ಹೊಸ ಅರ್ಥ ಕಲ್ಪಿಸಿ ನಮ್ಮ ಮನಸ್ಸಿನ ಮೇಲೆ ಪರಿಣಾಮ ಉಂಟು ಮಾಡುವಾಗ ಆ ವ್ಯಕ್ತಿಗಳ ಗುಣಗಳನ್ನು ಲಕ್ಷಣಗಳನ್ನು ಸೂಚ್ಯವಾಗಿಯಾದರೂ ಸಾಂಕೇತಿಕವಾಗಿಯಾದರೂ ತೋರಿಸಬೇಕಲ್ಲವೇ. ಅಷ್ಟೇ ಅಲ್ಲದೆ ತಮ್ಮ ನಾಟಕಗಳಲ್ಲಿ ಶ್ರೀರಂಗರು ಪ್ರತಿಯೊಬ್ಬ ತಂತ್ರಜ್ಞನಿಗೂ ತನ್ನ ಕಲಾ ಪ್ರತಿಭೆಯನ್ನು ತೋರಲು ಅವಕಾಶವಿತ್ತಿದ್ದಾರೆ. ಇದು ನನ್ನ ಅನುಭವ. ಅವರ ನಾಟಕಗಳು ಹಲವಾರು ಪ್ರಥಮ ಪ್ರದರ್ಶನ ಕಂಡಾಗ ಪ್ರಸಾಧನವನ್ನು ಸೃಷ್ಟಿಮಾಡಿದ್ದೇನೆ (ಅವರಿಗೂ ಸಮಾಧಾನವಾಗು ವಂತೆ). ಇನ್ನು ಅಸಂಗತ ನಾಟಕಗಳಲ್ಲೂ ಅಷ್ಟೇ ಪಾತ್ರದ ವಿಶೇಷ ಗುಣವನ್ನು ಸೂಚ್ಯವಾಗಿಯಾದರೂ ತೋರಿಸಲೇಬೇಕು. ಪ್ರಸಾಧನ ಮುಖವಾಡದಂತಿರಬಹುದು (ಹಯವದನ ನಾಟಕದಲ್ಲಿ ಮಾಡಿದೆ) ಸಾಂಕೇತಿಕವಾಗಿರಬಹುದು, ಕಲ್ಪನೆಯದಾಗಿರಬಹುದು. ಯಾವುದೇ ಆದರೂ ಪ್ರೇಕ್ಷಕನಿಗೆ ಆ ಪಾತ್ರದ ಬಗ್ಗೆ ತಪ್ಪು ತಿಳುವಳಿಕೆ ಕೊಡಬಾರದು.

ಎಷ್ಟೋ ಬಾರಿ ಪೌರಾಣಿಕ ಪಾತ್ರಗಳಿಗೆ ಕೆಟ್ಟದಾಗಿ ಪ್ರಸಾಧನ ಮಾಡಿದುದನ್ನು ಕಂಡಿದ್ದೇನೆ. ಮುಖ್ಯವಾಗಿ ಆ ಪಾತ್ರಗಳ ವಯಸ್ಸು ಕುಲ ಗೋತ್ರ ಇಂಥವುಗಳನ್ನು ನಿರ್ಧರಿಸುವುದೇ ಕಷ್ಟ. ಅವುಗಳ ಹಣೆಯ ಬರಹ ತ್ರಿಪುಂಡ್ರವೇ, ನಾಮವೇ, ತಿಲಕವೇ? ಪಾಂಡವರು, ಕೌರವರು, ವಿಶ್ವಾಮಿತ್ರ, ಮೇನಕೆ, ಅಶ್ವತ್ಥಾಮ ಹೇಗೆ. ಅಶ್ವತ್ಥಾಮ ಎಷ್ಟು ಚಿರಂಜೀವಿ? ಗಡ್ಡ ಮೀಸೆ ಬೆಳೆಯುತ್ತಿರಲಿಲ್ಲವೇ? ಇವುಗಳ ಪ್ರಸಾಧನ ಕಲಾತ್ಮಕವಾಗಿದ್ದರೆ ಸಾಕು. "ಕಸ್ತೂರೀ ತಿಲಕಂ ಲಲಾಟ ಫಲಕೇ ವಕ್ಷಸ್ಥಳೇ ಕೌಸ್ತುಭಂ" ಅಂತ ಸಂಸ್ಕೃತ ಶ್ಲೋಕ ಹೇಳಿದಾಗಲಾದರೂ "ಹಣೆಗೆ ಕಸ್ತೂರಿ ತಿಲಕ" ವಿದೆ ಎಂಬುದು ತಿಳಿಯುತ್ತದೆ. ಇದು ಯಾವ ಕವಿಯ ಚಿತ್ರಣ – ಕಲ್ಪನೆಯಾದರೇನು ಆ ಅಲಂಕಾರ ಚೆನ್ನ ಅಲ್ಲವೇ ?

ರನ್ನನ ಗಧಾಯುದ್ಧದ 'ಅಶ್ವತ್ಥಾಮ'ನಿಗೂ ಬಿ. ಎಂ. ಶ್ರೀ 'ಅಶ್ವತ್ಥಾಮನ್' ನಿಗೂ ವ್ಯತ್ಯಾಸ ಇಲ್ಲವೇ?

'ಯಮಧರ್ಮರಾಯ', 'ಕುವೆಂಪು' ಅವರ 'ಯಮನ ಸೋಲಿನಲ್ಲಿ' ಧರ್ಮರಾಯನಾಗಿಲ್ಲವೇ? ಹಾಗಿದ್ದಲ್ಲಿ ಅವನನ್ನೇಕೆ ವಿಕಾರ ಗೊಳಿಸುವುದು?

ಹೀಗೆ ಹಲವಾರು ಬಾರಿ ನಾಟಕವನ್ನು ಓದಿದಾಗ ಪ್ರೇಕ್ಷಕರ ಮನಸ್ಸಿನ ಮೇಲೆ, ಸಹಾಯಕನಾಗಿ, ಪರಿಣಾಮಕಾರಿಯಾಗಿ, ಪಾತ್ರ ಚಿತ್ರಣಕ್ಕೆ ಅನ್ಯಾಯವಾಗದಂತೆ ಪ್ರಸಾಧನ ಮಾಡಬಹುದು.

ನಮ್ಮದೇ ಆದ ಯಕ್ಷಗಾನ–ಬಯಲಾಟ–ಅಟ್ಟದಾಟದ ಪ್ರಸಾಧನದ ಹುಟ್ಟು, ಬೆಳವಣಿಗೆ, ಪ್ರಯೋಗಗಳ ಬಗ್ಗೆ ಸಂಶೋಧನೆ ಆಗಿದೆಯೇ ಅವಕಾಶವಿದೆಯೇ–ಈ ಕೆಲಸ ನಾಟಕ ಅಕಾಡೆಮಿ, ವಿಶ್ವವಿದ್ಯಾನಿಲಯ ಇಂತಹ ಸಂಸ್ಥೆಗಳದ್ದಲ್ಲವೇ?

ಅಥವಾ ಇಂತಹ ಪ್ರಯೋಗಗಳ ಬಗ್ಗೆ ಕೈಪಿಡಿಗಳು, ಪುಸ್ತಕಗಳ ಪ್ರಕಟಣೆ ಕನ್ನಡದಲ್ಲಿ ಸಾಧ್ಯವಿಲ್ಲವೇ? ಈ ಕೆಲಸ ಸಾಹಿತ್ಯ ಪರಿಷತ್ತನ್ನೂ ಸೇರಿ ಮೇಲೆ ಹೇಳಿದ ಸಂಸ್ಥೆಗಳದ್ದಲ್ಲವೇ? ಗತಕಾಲದಲ್ಲಿ ಉಪಯೋಗಿಸುತ್ತಿದ್ದ ಪದಾರ್ಥಗಳ, ಕ್ರಮಗಳ ವಸ್ತುಸಂಗ್ರಹಣೆ ಸಾಧ್ಯವಿಲ್ಲವೇ? ಇನ್ನೂ ಇಂಗ್ಲಿಷ್ ಪದಗಳನ್ನೇ ರಂಗತಂತ್ರ ನಿರ್ದೇಶನದಲ್ಲಿ ಬಳಸುತ್ತಿರುವ ನಾವು ಕನ್ನಡದಲ್ಲಿ ಇವುಗಳಿಗೆ ಹೊಂದುವ ಪದಗಳನ್ನು ಹುಡುಕಲಾರೆವೆ ಅಥವಾ ನಿರ್ಮಿಸಿ ಬಳಕೆಗೆ ತರಲಾರವೇ? "ಬದುಕಿದ್ದಾಗಲೇ ಚರಿತ್ರೆಗೆ ಸೇರಿ ಹೋಗುವ ಸ್ಥಿತಿ ಏಕೆ?" ಈ ಹಳೆದು–ಹೊಸತು ಎಂಬುದು ಬೇರೆ. ಇಂದಿನ ಹೊಸದು ನಾಳೆಗೆ ಹಳೆಯದಾಗುವುದಿಲ್ಲವೆ? ಈ ಕೆಟ್ಟ ರಾಜಕೀಯ ಸ್ವಾರ್ಥ ಇವುಗಳಿಗೆ ಕೊನೆ ಎಂದು?

ಸಾದೃಶ್ಯ ಚರಿತ್ರೆ ಪರಂಪರೆಯ ಬಗ್ಗೆ ಟಿಪ್ಪಣಿ ನಿಜವಾದ ಪರಿಣಿತರ ಅನುಭವಗಳು, ಲೇಖನಗಳು, ಪ್ರಕಟಣೆಗಳು ಶತಮಾನ ಕಳೆದರೂ ಇಲ್ಲದಿರುವುದು ಶೋಚನೀಯವಲ್ಲವೆ?

ಕನ್ನಡ ನಾಟಕ ರಂಗದ ರಂಗಭೂಮಿಯ (ವ್ಯಕ್ತಿ ಮತ್ತು ವಿಲಾಸೀ) ಕಲಾತ್ಮಕತೆ, ಆಗುಹೋಗುಗಳು, ಬೆಳವಣಿಗೆ, ಕುಂದುಕೊರತೆ, ಸಾಧ್ಯಾಸಾಧ್ಯತೆಗಳು ಅವುಗಳಿಗೆ ಒಂದು ಯೋಜನೆ, ಜಾರಿಗೆ ತರುವ ಕ್ರಮ –ಇವುಗಳ ಬಗ್ಗೆ ಆಸಕ್ತರೆಲ್ಲರೂ ಸಮಾಧಾನಚಿತ್ತರಾಗಿ ಪ್ರಾಮಾಣಿಕವಾಗಿ ಯೋಚಿಸುವುದೆಂದು? ಹಿಂದೊಮ್ಮೆ ಹೀಗೆ ಬರೆದಿದ್ದೆ

**ಈಗ..........**

"ಒಬ್ಬ ಕಲಾವಿದ ಎಷ್ಟೇ ಬುದ್ಧಿವಂತ ಮತ್ತು ಪ್ರತಿಭಾವಂತನಾಗಿದ್ದರೂ ಸಹ, ಪ್ರಸಾಧನ ಮತ್ತು ವೇಷಭೂಷಣಗಳಿಗೆ ತಮ್ಮದೇ ಆದ ಪ್ರಾಮುಖ್ಯತೆ ಇದೆ ಮತ್ತು ಅದರ ಅರ್ಥವಂತಿಕೆಯ ಉಪಯೋಗದಿಂದ ಅರ್ಧ ಯಶಸ್ಸನ್ನು ಸಾಧಿಸಿದ ಹಾಗೆ "

– ಎಂದಿದ್ದಾನೆ. ಸ್ಟ್ಯಾನಿಸ್ಲಾವ್‌ಸ್ಕಿ, ರಶಿಯಾದ ಮಹಾನ್ ರಂಗನಿರ್ದೇಶಕ ಮತ್ತು ನಟ.

1. ರಂಗದ ಮೇಲೆ ಕಲಾತ್ಮಕ ನಿರೂಪಣೆಗಾಗಿ,
2. ಕೃತಿಕಾರನ ಕಲ್ಪನೆಗೆ ಅನುಗುಣವಾಗಿ,
3. ರಂಗಭೂಮಿಯ ಕೆಲವು ನಿಯಮಗಳಿಗನುಸಾರವಾಗಿ,
4. ಕಲಾವಿದನ ಮುಖದ ಭಾವನೆಗೆ ಮತ್ತು ಅವನ ದೈಹಿಕ ನಿಲುವಿಗೆ ಹೊಂದಾಣಿಕೆಯಾಗಿ,
5. ವಿಶೇಷ ಬಣ್ಣಗಳ ಮತ್ತು ಗಡ್ಡ, ಮೀಸೆ ಮುಂತಾದವುಗಳ ಜೋಡಣೆಯಿಂದ.

ಕಲಾವಿದನ ವ್ಯಕ್ತಿತ್ವವನ್ನು ಆತನು ನಿರ್ವಹಿಸುತ್ತಿರುವ ಪಾತ್ರದ ವ್ಯಕ್ತಿತ್ವಕ್ಕೆ ರೂಪಾಂತರಿಸುವುದೇ 'ರಂಗ ಪ್ರಸಾಧನ'.

ಕಲಾವಿದನ ಮುಖಕ್ಕೆ ಮಾತ್ರ ಸೀಮಿತಗೊಳಿಸದೆ ಅವನ ಕತ್ತು, ಕೈಗಳು ಮುಂತಾದ ಅಂಗಗಳಿಗೂ ಸಹ ಪ್ರಸಾಧನ ಮಾಡಬೇಕು.

ದಶಕಗಳ ಹಿಂದೆ, ತಮ್ಮ ವ್ಯಕ್ತಿತ್ವದಲ್ಲಿ ಬದಲಾವಣೆ ಮಾಡಿಕೊಳ್ಳದೇ ಕೆಲವು ಮೂಲಭೂತವಾದ ಪುಡಿ ಮತ್ತು ಕೆನ್ನೆಕೆಂಪುಗಳನ್ನು ಹಚ್ಚಿಕೊಂಡು ಕಲಾವಿದರು ಹ್ಯಾಮ್ಲೆಟ್, ರೋಮಿಯೋ ಅಥವಾ ಮ್ಯಾಕ್‌ಬೆತ್ ಪಾತ್ರಗಳನ್ನು ನಿರ್ವಹಿಸುತ್ತಿದ್ದರೂ ಸಹ, ಆ ದಿನಗಳ ಅತಿ ಭಾವುಕತೆಯ ಪ್ರೇಕ್ಷಕರು ಇಂತಹದನ್ನೆಲ್ಲ ಸ್ವೀಕರಿಸುತ್ತಿದ್ದರು. ಆದರೆ ಈ ದಿನಗಳ ಪ್ರೇಕ್ಷಕರು ತಮ್ಮ ಕಲಾತ್ಮಕ ಬೇಡಿಕೆಗಳ ಬಗ್ಗೆ ಅತ್ಯಂತ

ಕರಾರುವಾಕ್ಕಾಗಿದ್ದಾರೆ–ಕಲಾವಿದರ ಪ್ರಸಾಧನಕ್ಕೂ ಕೃತಿಕಾರನ ಪಾತ್ರಕ್ಕೂ ಸಂಭಂಧವಿರಬೇಕೆಂದು ಆಶಿಸುತ್ತಾರೆ ಮತ್ತು ಕಲಾವಿದರ ಈ 'ಹೊರಗಿ'ನ ರೂಪಾಂತರಕ್ಕೆ ಪ್ರಾಮುಖ್ಯತೆ ಕೊಡುವ ಹಾಗೆ ದೃಶ್ಯಗಳ ಒಳಗಿನ ಬಂಧಗಳಿಗೂ ಬೇಡಿಕೆ ಇಡುತ್ತಾರೆ.

ಇದು ಪುನರುಕ್ತಿ ಅನಿಸಿದರೂ–

ಕಲಾವಿದನ ಪ್ರಸಾಧನ ನೈಜವಾಗಿರಬೇಕಾದರೆ, ಕೆಳಗಿನ ಪ್ರಶ್ನೆಗಳಿಗೆ ಸಾಧ್ಯವಾದಷ್ಟು ಸಮರ್ಪಕ ಉತ್ತರ ಕಂಡುಕೊಳ್ಳಬೇಕು.

1. ಕಲಾವಿದ ನಿರ್ವಹಿಸುತ್ತಿರುವ ಪಾತ್ರ ಯಾವ ಜನಾಂಗಕ್ಕೆ ಸೇರಿದ್ದು?
2. ಪಾತ್ರದ ರಾಷ್ಟ್ರೀಯತೆ
3. ಪಾತ್ರದ ವಯಸ್ಸು — ಉದಾ: ರೋಮಿಯೋ–ಯುವಕ, ಕಿಂಗ್‌ಲಿಯರ್–ವಯಸ್ಸಾದವ
4. ಪಾತ್ರದ ಆರೋಗ್ಯ — ಆರೋಗ್ಯವಂತ ಮಹಿಳೆ/ಹಲವು ರೋಗಗಳಿಂದ ನೊಂದಿರುವವಳು
5. ಪಾತ್ರದ ಸ್ವಭಾವ — ದುಃಖಿ/ಹರ್ಷಚಿತ್ತ
6. ರೂಪ — ಸುಂದರ/ಕುರೂಪ
7. ಪಾತ್ರದ ದೈಹಿಕ ಚೌಕಟ್ಟು — ಧಡೂತಿ/ತೆಳು
8. ಚರ್ಮ/ಕೂದಲಿನ ಬಣ್ಣ — ಸೂರ್ಯನ ಕಿರಣದಿಂದ ಮಸುಕಾದ/ಕೆಂಪು ಗಡ್ಡ (ಉದಾ:ನೀರೋ)
9. ಕೂದಲು — ಕೇಶಹೀನ–ಸಾಕ್ರಟಿಸ್
10. ಬುದ್ಧಿಶಕ್ತಿ — ಬುದ್ಧಿವಂತ/ದಡ್ಡ
11. ಇಚ್ಛಾಶಕ್ತಿ — ಸಬಲವಾದ ಇಚ್ಛಾಶಕ್ತಿ/ ಗಟ್ಟಿಯಲ್ಲದ ಇಚ್ಛಾಶಕ್ತಿ/ಉತ್ಸಾಹ
12. ಪಾತ್ರದ ಪ್ರಬಲ ಗುಣಗಳು — ಹೊಟ್ಟೆಯುರಿ/ಆಶೆ
13. ಪಾತ್ರದ ಆರ್ಥಿಕ ಸ್ಥಿತಿ — ಹಣವಂತ/ಬಡವ
14. ಸಮಾಜದಲ್ಲಿ ಪಾತ್ರದ ಸ್ಥಾನಮಾನ /ಪಾತ್ರದ ವೃತ್ತಿ — ವಿಜ್ಞಾನಿ/ಸೈನಿಕ

ಪ್ರಸಾಧನಕ್ಕೆ ಕೂರುವ ಮೊದಲು, ತಾನು ನಿರ್ವಹಿಸುತ್ತಿರುವ ಪಾತ್ರಕ್ಕೆ. ನ್ಯಾಯ ಸಲ್ಲಿಸಲು ಪ್ರತಿಯೊಬ್ಬ ಕಲಾವಿದನು ಮೇಲಿನ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ಕಂಡುಕೊಳ್ಳುವುದು ಅತ್ಯಂತ ಮುಖ್ಯವಾಗುತ್ತದೆ.

ಆದ್ದರಿಂದ ಕಲಾವಿದನಿಗೆ ಮಾನಸಶಾಸ್ತ್ರ, ಮುಖಲಕ್ಷಣಶಾಸ್ತ್ರ, ಚರಿತ್ರೆ ಮುಂತಾದವುಗಳ ಜ್ಞಾನ ಅವಶ್ಯಕವಾಗಿ ಬೇಕಾಗುತ್ತದೆ. ವಿವಿಧ ಜನರ ದಿನನಿತ್ಯದ ಹವ್ಯಾಸಗಳನ್ನು ಪ್ರತಿಯೊಬ್ಬ ಕಲಾವಿದನು ಅಭ್ಯಾಸ ಮಾಡಬೇಕಾಗುತ್ತದೆ. ಆದರೆ ಕರಾರುವಾಕ್ಕಾದ ಪ್ರಸಾಧನದತ್ತ ತುಯ್ಯುವ ಕಲಾವಿದನಿಗೆ ಈ ಜ್ಞಾನವಷ್ಟೆ ಸಾಲುವುದಿಲ್ಲ.

ಪ್ರಕೃತಿಯ ನೇರ ಅನುಕರಣೆ ಕಲೆಯ ಗುರಿಯಲ್ಲ. ಕಲಾವಿದನ ಸೃಜನಾತ್ಮಕತೆಗೆ ಮತ್ತು ಅವನು ಪಾತ್ರದೊಳಗೆ ಹೊಕ್ಕಲು ಮಾತ್ರ, ಅನುಕರಣೆ ಸಹಾಯ ಮಾಡುತ್ತದೆ. ಆದ್ದರಿಂದ ನೈಜವಾಗಿ ಮತ್ತು ವೈಜ್ಞಾನಿಕವಾಗಿ ಅಭ್ಯಾಸ ಮಾಡಿದಾಗ ಮಾತ್ರ ಕಲಾವಿದನಿಗೆ ಕರಾರುವಾಕ್ಕಾದ ಪ್ರಸಾಧನದ ಹೊಸ ಗೋಚರವಾಗುತ್ತದೆ.

ಆದ್ದರಿಂದ ಪ್ರಸಾಧನದ ಸಮಸ್ಯೆಗಳು ಕಲಾವಿದನಿಗೆ ಕಬ್ಬಿಣದ ಕಡಲೆಯಾಗುತ್ತದೆ. ಪ್ರಸಾಧನದ ತಾಂತ್ರಿಕ ವೈಪರೀತ್ಯಗಳಿಂದ ಮಾತ್ರವಲ್ಲದೇ ಬೆಳಕು, ದೃಷ್ಟಿಯ ಭ್ರಮೆಗಳು ಮತ್ತು ಹಚ್ಚುವ ಬಣ್ಣದ ವಿಶೇಷ ಗುಣಗಳಿಂದಲೂ ಸಹ, ಪ್ರಸಾಧನದ ಸಮಸ್ಯೆಗಳು ಅಧಿಕವಾಗುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ ಕಲಾವಿದನ ಚಿರಂತನವಾಗಿ ಚಲಿಸುವ ಅವನ ಸ್ವಂತ ಮುಖ. ಆದ್ದರಿಂದ ಪ್ರಸಾಧನ ಕಲೆಯನ್ನು ಅಭ್ಯಾಸ ಮಾಡಲೇ ಬೇಕು.

ರಂಗಕಲೆಗಳಿಗೆ ತನ್ನನ್ನೇ ತಾನು ಒಡ್ಡಿಕೊಳ್ಳಲು ಬಯಸುವ ಪ್ರತಿಯೊಬ್ಬ ವ್ಯಕ್ತಿಯು ಪ್ರಸಾಧನ ಕಲೆಯನ್ನು ಅಭ್ಯಾಸ ಮಾಡಲೇಬೇಕು. ಏಕೆಂದರೆ, ಪ್ರಸಾಧನ ಕಲೆಯು ಕಲಾವಿದರ ಸೃಜನಾತ್ಮಕ ಬೆಳವಣಿಗೆಯ ಹಂತದಲ್ಲಿ ಮುಖ್ಯ ಪಾತ್ರ ವಹಿಸುತ್ತದೆ.

ಸಾಮಾನ್ಯವಾಗಿ ಹೇಳುವುದಾದರೆ ಹೆಚ್ಚುವರಿ ಕಲಾವಿದರು ಪ್ರಸಾಧನ ವಿಷಯದಲ್ಲಿ ತಮ್ಮೊಂದಿಗೆ ಅಭಿನಯಿಸುತ್ತಿರುವ ಅನುಭವಿ ಕಲಾವಿದರನ್ನು ಅನುಕರಣೆ ಮಾಡುತ್ತಾರೆ. ಇಂತಹ ಅಂಧಾನುಕರಣೆಯಿಂದ ಸುಂದರ ರೂಪಿನ ಕಲಾವಿದ/ದೆಯರು ಕುರೂಪಿಗಳಾಗಲ್ಲದಿದ್ದರೂ, ರಂಗದ ಮೇಲೆ ಅನಾಕರ್ಷವಾಗಿ ಕಾಣುತ್ತಾರೆ. ಪ್ರಸಾಧನ ಕಲೆ, ಸ್ವಂತ ಕಲ್ಪನೆ ಮತ್ತು ಪರಿಶ್ರಮದಿಂದ ಹುರಿಗಟ್ಟುವಂತಹದ್ದು.

ವಯಸ್ಸಾದಂತೆ ಮನುಷ್ಯನ ಮುಖ ತನ್ನ ಕರಾರುವಾಕ್ಕತೆಯನ್ನು ಕಳೆದುಕೊಂಡು ಕಳಾಹೀನವಾಗಲು ತೊಡಗುತ್ತದೆ. ಸಾಮಾನ್ಯವಾಗಿ ರಂಗಭೂಮಿ ಬೇಡುವ ಖಚಿತವಾದ ಮತ್ತು ಸುಂದರವಾದ ರೂಪವನ್ನು ಹೊಂದಿರುವವರು ಸಮಾಜದಲ್ಲಿ ವಿರಳವಾಗಿ ಕಾಣಬರುತ್ತಾರೆ. ಪ್ರಸಾಧನ, ತನ್ನ ವಿಸ್ತಾರವಾದ ಕೃತಕ ವಸ್ತುಗಳಿಂದ ನಮ್ಮೆಲ್ಲರ ಮುಖದ ಕುಂದುಕೊರತೆಗಳನ್ನು ಮೀರಲು ಮತ್ತು ಅದನ್ನು ಸರಿಪಡಿಸಿಕೊಳ್ಳಲು ಸಹಾಯ ಮಾಡುತ್ತದೆ. ಬಣ್ಣಗಳ ಜಿಡ್ಡು (grease) ತಮ್ಮ ಚರ್ಮಕ್ಕೆ ಹಾನಿಯುಂಟು ಮಾಡಬಹುದೆಂಬ ಭಯದಿಂದ, ರಂಗಭೂಮಿಯಲ್ಲಿ ದುಡಿಯುತ್ತಿರುವ ಬಹಳಷ್ಟು ಯುವಜನಾಂಗ ಅದರಲ್ಲೂ ವಿಶೇಷವಾಗಿ ನಟಿಯರು ಪ್ರಸಾಧನ ಕಲೆಯ ಬಗ್ಗೆ ನಿರ್ಲಕ್ಷ್ಯ ತಾಳುತ್ತಾರೆ. ಆದರೆ, ನನ್ನ ರಂಗಜೀವನದುದ್ದಕ್ಕೂ ರಂಗಪ್ರಸಾಧನದ ಉಪಯೋಗದಿಂದ ಅಹಿತಕರವಾದ ಒಂದೇ ಒಂದು ಘಟನೆಯ ನನ್ನ ಗಮನಕ್ಕೆ ಬಂದಿಲ್ಲ. ಆದರೂ ಸಹ, ಉಪಯೋಗಿಸುವ ಪ್ರಸಾಧನದ ವಸ್ತು ಉತ್ತಮ ದರ್ಜೆಯದ್ದಾಗಿರಬೇಕು. ಶುಚಿಯ ಬಗ್ಗೆ ಅಷ್ಟೊಂದು ಗಮನ ಕೊಡದೇ ಇರುವುದು ಮತ್ತು ಕಡಿಮೆ ಬೆಲೆಯ ಒಣಗಿದ ಬಣ್ಣಗಳ ಲೇಪನದಿಂದ ಚರ್ಮದಲ್ಲಿ ಅಲ್ಪಸ್ವಲ್ಪ ತುರಿಕೆ ಉಂಟಾಗಬಹುದು.

ಲೀಚನರ್, ಸ್ಟೀನ್, ಮ್ಯಾಕ್ಸ್‌ಫ್ಯಾಕ್ಟರ್ ಮುಂತಾದ ಉತ್ಪಾದಕರ ಪ್ರಸಾಧನ ವಸ್ತುಗಳು ಶುಚಿಯಾಗಿರುತ್ತವೆ ಮತ್ತು ಅವುಗಳ ಬಳಕೆಯಿಂದ ಚರ್ಮಕ್ಕೆ ಹಾನಿಯಾಗುವುದಿಲ್ಲ.

ಕಲಾವಿದರ ವಿಶಿಷ್ಟಗಳ ಭಾವನೆಗಳು ಪ್ರಕಟವಾಗುವುದಕ್ಕೆ ಪ್ರಸಾಧನ ಅಡ್ಡಿಯುಂಟು ಮಾಡುತ್ತದೆ ಎಂದು ಈ ಕಲೆಯನ್ನು ವಿರೋಧಿಸುವ ಜನರು ತಮ್ಮ ವಾದ ಮುಂದಿಡುತ್ತಾರೆ. ಖಂಡಿತವಾಗಿಯೂ ಗೋಜಲು ಗೋಜಲಾದ ಮತ್ತು ಸಂಕೀರ್ಣವಾದ ಪ್ರಸಾಧನದ ಮುಖದ ಚಲನವಲನಗಳ ಸ್ವಾತಂತ್ರ್ಯತೆಯನ್ನು ಹತ್ತಿಕ್ಕುತ್ತದೆ. ಆದರೆ, ತನ್ನ ಮುಖದ ಬಗ್ಗೆ ಸಂಪೂರ್ಣ ತಿಳುವಳಿಕೆಯಿಂದ ಕಲಾವಿದ, ತನ್ನ ಪ್ರಸಾಧನ ಕಲೆಯಿಂದ ಎಂದೂ ತೊಂದರೆಗೆ ಸಿಕ್ಕಿಕೊಳ್ಳಲಾರ. ತೀವ್ರವಾದ ನಾಟಕೀಯ ಸನ್ನಿವೇಶಗಳಲ್ಲಿ ಗಡ್ಡ ಅಥವಾ ಮೀಸೆ ಇಲ್ಲದಿರುವುದು ಮುಂತಾದ ಅಹಿತಕರ ಸಂಗತಿಗಳನ್ನು ನಾವು ನೋಡಬಹುದಾಗಿದೆ. ಇವೆಲ್ಲ ಅನನುಭವಿ ಕಲಾವಿದನಿಂದ ಉಂಟಾಗಬಹುದಾದ ಅಚಾತುರ್ಯಗಳು ಮಾತ್ರ.

ಆದರೆ ಪರಿಶ್ರಮತೆ ಇಲ್ಲದಿರುವುದೇ ಕಲೆಯನ್ನು ನಿಂದಿಸಲು ಕಾರಣವಾಗಬಾರದು.

ಹಲವು ಸಂಧರ್ಭಗಳಲ್ಲಿ ಕಲಾವಿದ ಕ್ಲಿಷ್ಟವಾದ ಪ್ರಸಾಧನ ಕಲೆಯತ್ತ ಮೊರೆ ಹೋಗಲೇ ಬೇಕಾಗುತ್ತದೆ. ಉದಾಹರಣೆಗೆ ಸಿರಾನೋ ಡಿ ಬರ್ಜೆರ‍್ಯಾಕ್ (Cyrano de Bergerae) ಪಾತ್ರ ಈ ಪಾತ್ರವನ್ನು ವಹಿಸುವ ಕಲಾವಿದನ ಮೂಗನ್ನು ಉದ್ದ ಮಾಡದೇ, ಪಾತ್ರದ ಭ್ರಮೆಯನ್ನು ರಂಗದ ಮೇಲೆ ತರಲು ಸಾಧ್ಯವೇ ಇಲ್ಲ. ಇದೇ ರೀತಿ ಬೇಕಾದಷ್ಟು ಚಾರಿತ್ರಿಕ ಪಾತ್ರಗಳಲ್ಲಿ ಗುಣ, ಆರೋಗ್ಯ, ರಾಷ್ಟ್ರೀಯತೆ, ಮುಂತಾದ ವಿಷಯಗಳಲ್ಲಿ ನಾವು ವೈವಿಧ್ಯ ಕಾಣುತ್ತೇವೆ. ಆದ್ದರಿಂದ, ಪ್ರತಿಯೊಬ್ಬ ಕಲಾವಿದನು ರಂಗಪ್ರಸಾಧನದ ಬಗ್ಗೆ ಅಭ್ಯಾಸ ಮಾಡಲೇಬೇಕಾಗುತ್ತದೆ.

ಪ್ರಸಾಧನ ಕಲೆಯನ್ನು ಕಲಿಯುವ ಪ್ರಾರಂಭಿಕ ಹಂತದಲ್ಲಿ, ಕಲಾವಿದ, ಒಬ್ಬ ವಿಗ್ ತಯಾರಿಸುವವ ಅಥವಾ ಅಪರಿಚಿತನನ್ನು ಅವಲಂಬಿಸುವುದು ಸಹಜ. ಆದರೆ ಈ ಅವಲಂಬನೆ ಅಷ್ಟೊಂದು ಆರೋಗ್ಯಕರವಾದ ಲಕ್ಷಣವಲ್ಲ.

## ಪ್ರಸಾಧನಕ್ಕೆ ಒಗ್ಗುವ ಮತ್ತು ಒಗ್ಗದಿರುವ ಮುಖ ಲಕ್ಷಣಗಳು :

ಯಾರ ಮುಖವು ಪ್ರಮಾಣ ಬದ್ಧವಾಗಿರುತ್ತದೋ ಅಂತಹವರ ಮುಖವು ಪ್ರಸಾಧನವನ್ನು ಹಚ್ಚಲು ಅತ್ಯಂತ ಯೋಗ್ಯವಾಗಿರುತ್ತದೆ. ಚರ್ಮದ ಬಣ್ಣ, ಕೆನ್ನೆ ಮತ್ತು ತುಟಿಯ ಕೆಂಪು, ಕೂದಲಿನ ಆರೋಗ್ಯ ಮತ್ತು ಅದರ ಪ್ರಮಾಣ–ಇವಷ್ಟೇ ಅಂಶಗಳು ರಂಗಪ್ರಸಾಧನಕ್ಕೆ ಯೋಗ್ಯವಾದ ಮುಖಲಕ್ಷಣಗಳೆಂದು ಹೇಳಲು ಬರುವುದಿಲ್ಲ. ಏಕೆಂದರೆ, ಇವೆಲ್ಲವನ್ನು ಬಣ್ಣ ಮತ್ತು ವಿಗ್‌ಗಳನ್ನು ಉಪಯೋಗಿಸಿ ಇನ್ನೂ ಉತ್ತಮ ಪಡಿಸಬಹುದು ಅಥವಾ ಸ್ವತಃ ನಿರ್ಮಿಸಲೂಬಹುದು. ಮುಖದ ಬೇರೆ ಬೇರೆ ಭಾಗಗಳು ಮತ್ತು ಅವುಗಳಲ್ಲಿನ ಒಳಸಂಬಂಧಗಳೇ ಅತ್ಯಂತ ಮುಖ್ಯ ಅಂಶಗಳು. ಈ ಮುಖ್ಯವಾದ ಅಂಶಗಳಿಂದಲೇ ಪ್ರಾಸಾಧನಕ್ಕೆ ಒಗ್ಗುವ ಅಥವಾ ಒಗ್ಗದಿರುವ ಮುಖಗಳನ್ನು ನಿರ್ಧರಿಸಬೇಕಾಗುತ್ತದೆ.

ಸಾಮಾನ್ಯ ನೈಸರ್ಗಿಕ ಮುಖಲಕ್ಷಣಗಳಿಗಿಂತ ಭಿನ್ನತೆಯನ್ನು ಹೊಂದಿರುವ ಮುಖ, ವೈವಿಧ್ಯವನ್ನು ತರಲು ಅಡ್ಡಿಯುಂಟು ಮಾಡುತ್ತದೆ. ತುಂಬಾ ಉದ್ದವಾದ, ತುಂಬಾ ತೆಳುವಾದ, ತುಂಬಾ ದೊಡ್ಡದಾದ, ತುಂಬಾ ಗುಂಡಾಗಿರುವ, ತುಂಬಾ ಚಪ್ಪಟೆಯಾಗಿರುವ, ತುಂಬಾ ಚೂಪಾದ, ಮುಂತಾದ ಮುಖ ಲಕ್ಷಣಗಳು ವೈವಿಧ್ಯತೆಯನ್ನು ರೂಪಿಸಲು ಅಡ್ಡಿಯುಂಟು ಮಾಡುತ್ತದೆ. ಇದೇ ರೀತಿ, ಪುಟ್ಟ ಪುಟ್ಟದಾದ ಅಂಗಗಳನ್ನು ಹೊಂದಿರುವ ಮುಖಗಳು ಮತ್ತು ವಿರೂಪಗೊಂಡ ಮುಖಗಳು ಸಹ ಪ್ರಸಾಧನಕ್ಕೆ ಒಗ್ಗುವುದಿಲ್ಲ. ಉದಾಹರಣೆಗೆ ಎರಡು ರೀತಿಯ ಮುಖಗಳನ್ನು ಅವಲೋಕಿಸೋಣ. ಮೊದಲನೆಯದಾಗಿ, ಒಂದು ಸುಂದರ ಮುಖ–ಆದರೆ ಆ ಮುಖದಲ್ಲಿ ಪುಟ್ಟ ಪುಟ್ಟದಾದ ಅಂಗಗಳು. ಇನ್ನೊಂದು, ಹೆಚ್ಚು ಆಕರ್ಷಕವಾಗಿಲ್ಲದಿದ್ದರೂ, ವಿಸ್ತಾರವಾಗಿ, ಅಂಗಗಳ ಜೋಡನೆಯನ್ನು ಹೊಂದಿರುವ ಮುಖ, ಇಲ್ಲಿ ಎರಡನೆಯ ರೀತಿಯ ಮುಖ ಪ್ರಸಾಧನಕ್ಕೆ ಹೆಚ್ಚು ಒಗ್ಗುತ್ತದೆ–ಏಕೆಂದರೆ, ರೂಪಾಂತರಗೊಳಿಸುವ ಕ್ರಿಯೆಯಲ್ಲಿ ಅಂದರೆ ಕುಸುರಿ ಕೆಲಸ ಮಾಡಲು ಕಲಾವಿದನಿಗೆ ಹೆಚ್ಚು ಸ್ವಾತಂತ್ರ್ಯ ನೀಡುತ್ತದೆ.

ಪ್ರಮಾಣಬದ್ಧವಾಗಿಲ್ಲದ ಮುಖಗಳನ್ನು ತಿದ್ದುವುದು ಅಥವಾ ಕರಾರುವಾಕ್ಕಾಗುವಂತೆ ಮಾಡುವುದು ತುಂಬ ಕಷ್ಟಕರವಾದದ್ದಾಗಿದೆ. ಉದಾಹರಣೆಗೆ, ಗುಳಿ ಬಿದ್ದ ಹಣೆ ಅಥವಾ ಉಬ್ಬಿದ ಹಣೆ, ತುಂಬಾ ದೊಡ್ಡದಾದ ಅಥವಾ ಬಹಳ ಚಿಕ್ಕದಾದ ಮೂಗು, ಕಣ್ಣುಗಳು–ಒಂದಕ್ಕೊಂದು ತೀರ ಹತ್ತಿರ ಅಥವಾ ಬಹಳ ದೂರ, ಮುಂತಾದ ಮುಖಲಕ್ಷಣಗಳು. ಆದರೆ, ಬಣ್ಣಗಳ ಜಾಣ್ಮೆಯ ಉಪಯೋಗದಿಂದ, ಮತ್ತು ವೈಭವೀಕರಿಸುವ ತಂತ್ರಗಳ ನೈಪುಣ್ಯತೆಯಿಂದ, ಕೊಂಚ ಏರುಪೇರಾಗಿರುವ ಮುಖಲಕ್ಷಣಗಳನ್ನು ಸಂಪೂರ್ಣವಾಗಿ ತಿದ್ದಬಹುದು.

ಪ್ರಸಾಧನ ಕಲೆಯನ್ನು ಯಾರು ಬೇಕಾದರೂ ಕಲಿಯಬಹುದು. ಆದರೆ ಅತ್ಯುತ್ತಮ ಫಲಿತಾಂಶಗಳನ್ನು ಪಡೆಯಬೇಕಿದ್ದರೆ, ಪ್ರತಿಭೆ ಅತ್ಯಂತ ಅವಶ್ಯಕವಾಗಿ ಇರಲೇಬೇಕು.

# ಅಧ್ಯಾಯ – II

# ಪ್ರಸಾಧನದಲ್ಲಿನ ಸೃಜನಾತ್ಮಕ ಹಂತ:

## 1. ಪ್ರಸಾಧನದ ಕಲ್ಪನೆ :

ಮೊದಲನೆಯದಾಗಿ, ಕಲಾವಿದ ನಾಟಕಕ್ಕೆ ತನ್ನನ್ನೇ ತಾನು ತೊಡಗಿಸಿಕೊಳ್ಳುವ ಹಂತದಲ್ಲೇ, ಅವನ ಮನಸ್ಸಿನಲ್ಲಿ ಪಾತ್ರದ ಗೋಜಲು ಗೋಜಲಾದ ಚಿತ್ರ ಮೂಡತೊಡಗುತ್ತದೆ. ನಂತರ, ಈ ಗೊಂದಲಮಯ ವಾದ ಚಿತ್ರ ತನ್ನ ಮುಸುಕನ್ನು ತೂರೆದು ನೈಜವಾಗಿ ರೂಪಾಂತರಗೊಳ್ಳ ತೊಡಗುತ್ತದೆ. ಈ ಹಂತದಲ್ಲೇ ನಟ ಗೊಂದಲಕ್ಕೊಳಗಾಗಿ ವಿಚಲಿತನಾಗುತ್ತಾನೆ ಮತ್ತು ಅವನ ಮನಸ್ಸಿನಲ್ಲಿ ಪಾತ್ರದ ಹಲವು ಅಂಗಗಳು ಮೂಡತೊಡಗುತ್ತದೆ. ಉದಾಹರಣೆಗೆ ಪಾತ್ರದ ಹಣೆ, ಕಣ್ಣಿನ ರೆಪ್ಪೆ, ಮೂಗು ಮುಂತಾದವುಗಳು. ಈ ಹಂತದಲ್ಲಿ, ಕಲಾವಿದ, ಈ ಎಲ್ಲ ವಿಚಿತ್ರ ಅನ್ನಿಸಿಕೆಗಳನ್ನು ಅವು ಎಷ್ಟೇ ಚಿಕ್ಕ ಅಂಶಗಳಾದರೂ, ಖಂಡಿತ ನಿರ್ಲಕ್ಷಿಸಬಾರದು. ಏಕೆಂದರೆ, ಈ ಚಿಕ್ಕ ಅಂಶಗಳೇ, ಪಾತ್ರದ ಸಂಪೂರ್ಣ ಬಿಂಬವನ್ನು ನಿರ್ಮಿಸುವತ್ತ ಬಹಳ ಸಹಾಯ ಮಾಡುತ್ತವೆ. ನಂತರ, ಕಲಾವಿದ ಹಿಂದೆ ತಿಳಿಸಿದ ಪ್ರಶ್ನೆಗಳನ್ನು ತನಗೆ ತಾನೇ ಹಾಕಿಕೊಳ್ಳುತ್ತ ಹೋಗಬೇಕು. ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡ ಮೇಲೆ ತಾನು ಆಂತರಿಕವಾಗಿ ಕಲ್ಪಿಸಿಕೊಂಡ ಚಿತ್ರಕ್ಕೂ ಮತ್ತು ಸಂಶೋಧನೆಯಿಂದ ದಕ್ಕಿಸಿಕೊಂಡ ಉತ್ತರಗಳಿಗೂ ತಾಳೆಯಾಗುತ್ತಿದೆಯೋ ಇಲ್ಲವೇ ಎಂಬುದನ್ನು ಪರೀಕ್ಷಿಸಬೇಕು. ತಾಳೆಯಾದರೆ, ಪಾತ್ರದ ಕಲ್ಪನೆಯ ಸಮಸ್ಯೆ ಬಗೆಹರಿದಂತೆ. ತಾಳೆಯಾಗದಿದ್ದರೆ, ಏಕೆ ತಾಳೆಯಾಗುತ್ತಿಲ್ಲ ಎನ್ನುವದಕ್ಕೆ ಕಾರಣಗಳನ್ನು ಕಂಡುಹಿಡಿದು, ಈ ಗೊಂದಲದಿಂದ ಹೊರಗೆ ಬರಲು ದಾರಿ ಕಂಡುಕೊಳ್ಳಬೇಕು. ಅವನ ಅಂತರ್ಗತ ಕಲ್ಪನೆಯು ಪಾತ್ರವನ್ನು ನಿರ್ಮಿಸುವತ್ತ ಸಹಾಯ ಮಾಡದಿದ್ದರೆ, ಸಮಾಜದಲ್ಲಿ ಕಾಣಬರುವ ಸೂಕ್ತವಾದ ಮಾದರಿ ವ್ಯಕ್ತಿಗಳನ್ನು ಹುಡುಕತೊಡಗಬೇಕು. ಅಥವಾ ಚಿತ್ರಕಾರರಿಂದ ರಚಿಸಲ್ಪಟ್ಟ ರೇಖಾಚಿತ್ರಗಳು, ವ್ಯಕ್ತಿಚಿತ್ರಗಳು ಮುಂತಾದವುಗಳನ್ನು ಅಭ್ಯಾಸ ಮಾಡಬೇಕು. ಆದರೂ ಸಹ, ಈ ಮಾದರಿ ವ್ಯಕ್ತಿಗಳನ್ನು ಮತ್ತು ತನ್ನ ಸಹಚರರ ಪ್ರಸಾಧನವನ್ನು, ನಟ ಅಂಧಾನುಕರಣೆ ಮಾಡಬಾರದು. ಅಂತಿಮವಾಗಿ ಪಾತ್ರದ ಕಲ್ಪನೆ ಮಾಡಿದ ಮೇಲೆ, ನಟ, ಅದರ ವ್ಯಕ್ತಿತ್ವವನ್ನು ಚಿತ್ರಿಸಲು ಯತ್ನಿಸಬೇಕು.

## 2. ಪ್ರಸಾಧನದ ಸಾಕಾರ:

ಈ ಹಂತ ಮೊದಲನೆಯ ಹಂತಕ್ಕಿಂತ ಕುತೂಹಲಕಾರಿಯಾಗಿದ್ದರೂ, ಹೆಚ್ಚು ಕಠಿಣವಾದ ಮತ್ತು ಜವಾಬ್ದಾರಿಯ ಹಂತ. ನಟ, ತನ್ನ ಪಾತ್ರವನ್ನು ಸಾಕಾರಗೊಳಿಸಲು ಪ್ರಾರಂಭ ಮಾಡತೊಡಗಿದಾಗ ಅಧೀರನಾಗತೊಡಗುತ್ತಾನೆ. ಇದು ಸಹಜ. ಏಕೆಂದರೆ, ಇಲ್ಲಿ ಲೇಖಕ ಮತ್ತು ನಟನ ಕಲ್ಪನೆ ಹಾಗೂ ಸಾಕಾರಗೊಳ್ಳುತ್ತಿರುವ ಪಾತ್ರ–ಇವು ಹದವಾಗಿ ನಿರ್ಮಾಣವಾಗಬೇಕು, ಅದೂ ಕಡಿಮೆ ಅವಧಿಯ ಅಂತರದಲ್ಲಿ.

ಪಾತ್ರ ಸಾಕಾರಗೊಳ್ಳುವಾಗಿನ ಹಂತದಲ್ಲಿ ನಟ, ಒಂದು ಅವಸ್ಥೆಯಿಂದ ಮತ್ತೊಂದು ಅವಸ್ಥೆಗೆ ರೂಪಾಂತರ ಹೊಂದುತ್ತ ಹೋಗುತ್ತಾನೆ. ಅಂದರೆ, ತನ್ನನ್ನೇ ತಾನು ಕಳಚಿಕೊಂಡು ಹೊಸ ಜೀವಿಯ ನಿರ್ಮಾಣದತ್ತ ಸಾಗುತ್ತಾನೆ. ಅವನು ಕನ್ನಡಿ ಮುಂದೆ ಪ್ರಸಾಧನ ಹಚ್ಚಿಕೊಳ್ಳಲು ಕುಳಿತಾಗ, ಹಚ್ಚುವ ಬಣ್ಣದ ಒಂದೊಂದು ಸಣ್ಣ ಎಳೆಯೂ ಅವನ ಅಸಹನೆಯನ್ನು ಹೆಚ್ಚಿಸುತ್ತ ಹೋಗುತ್ತದೆ. ನಿರ್ಮಾಣವಾಗುತ್ತಿರುವ ತನ್ನ ಹೊಸ ಅವಸ್ಥೆ ಬಗ್ಗೆ ಸಹ ಅವನಿಗೆ ಪ್ರತಿಕ್ರಿಯಸಲಾಗುವುದಿಲ್ಲ. ಹಲವು ಬಾರಿ ನಟನಿಗೆ, ತನ್ನ ರೂಪಾಂತರಗೊಂಡ ಪೂರ್ಣ ಅವಸ್ಥೆಯನ್ನು ನೋಡುವ ತನಕ ತನ್ನ ಪಾತ್ರಕ್ಕೆ ಜೀವ ತುಂಬಲು ಸಾಧ್ಯವಾಗುವುದೇ ಇಲ್ಲ. ಇಂತಹ ಸಂದರ್ಭಗಳಲ್ಲಿ 'ಹೊರಗಿನ' ರೂಪಾಂತರ 'ಅಂತರಂಗ'ದ ರೂಪಾಂತರಕ್ಕೆ ಸಹಾಯ ಮಾಡುತ್ತ ಹೋಗುತ್ತದೆ. ಹಾಗೇನೇ 'ಅಂತರಂಗ' ರೂಪಾಂತರ 'ಹೊರಗಿನ' ರೂಪಾಂತರಕ್ಕೆ ತನ್ನ ಸಹಕಾರ ನೀಡುತ್ತ ಹೋಗುತ್ತದೆ. ತಾಲೀಮಿನ ಸಂದರ್ಭಗಳಲ್ಲಿ ಪಾತ್ರವನ್ನು 'ಜೀವಂತ'ವಾಗಿಸುವ ನಟ, ಈ ರೂಪಾಂತರ ಹಂತದಲ್ಲಿ ಅಧೀರನಾಗತೊಡಗುತ್ತಾನೆ. ತನ್ನ ಚಿಪ್ಪಿನಲ್ಲಿ ತಾನೇ ಹುದುಗಿಕೊಳ್ಳುತ್ತ, ಹಾಸ್ಯ ಸನ್ನಿವೇಶಗಳಲ್ಲಿ ಸಪ್ಪೆಯಾಗತೊಡಗುತ್ತಾನೆ. ನಟನ ದೈಹಿಕ ವಾಸ್ತವತೆಗೂ ಮತ್ತು ಅವನ ಕಲ್ಪನೆಯ ಚಿತ್ರಕ್ಕೂ ನಡುವೆ ನಡೆಯುವ ಈ ಹೋರಾಟವನ್ನು ನಿಜಕ್ಕೂ, ಈ ರೂಪಾಂತರದ ಹಂತ ನಾಟಕೀಯವಾಗಿ ನಿರ್ಮಿಸುತ್ತದೆ. ಆದರೆ ಈ ಎಲ್ಲ ಅಧೀರತೆಯ ಸಂದರ್ಭಗಳಲ್ಲಿ ಪ್ರಸಾಧನದ ಬಗ್ಗೆ ಇರುವ 'ಜ್ಞಾನ', ತನ್ನ ರಕ್ಷಣೆಯನ್ನು ನೀಡುತ್ತದೆ.

**ಪ್ರಸಾಧನ ಸಾಕಾರಕ್ಕೆ ಉಪಯುಕ್ತವಾಗುವ ಹಲವು ಕಿವಿಮಾತುಗಳು :**

1. ಬಣ್ಣ ಹಚ್ಚುವ ಮೊದಲು, 'ಬಹಿರಂಗ' ರೂಪಾಂತರಕ್ಕೆ ಎಷ್ಟು ನ್ಯಾಯ ಒದಗಿಸಲು ಸಾಧ್ಯ ಎಂಬುದರ ಬಗ್ಗೆ ನಟನಿಗೆ ತನ್ನದೇ ಆದ ಒಂದು ಖಚಿತವಾದ ಕಲ್ಪನೆ ಇರಬೇಕು.

2. ವಿಗ್, ಗಡ್ಡ ಮತ್ತು ಮೀಸೆ ಇವುಗಳನ್ನು ಉಪಯೋಗಿಸಿ, ನಿಮ್ಮ ಮುಖದಲ್ಲಿ ನಿಮ್ಮ ಮುಖ್ಯವಾದ ಭಾವನೆಗಳನ್ನು ರೂಪಿಸುತ್ತ ಹೋಗಿ.

3. ನಂತರ, ಒಂದೊಂದಾಗಿ ಪ್ರಸಾಧನ ಹೆಜ್ಜೆಗಳನ್ನು ಇಡುತ್ತ ಹೋಗಿ– ಅಂದರೆ, ಕ್ರೀಮ್, ಗ್ರೀಸ್ ಬಣ್ಣಗಳು, ಬಣ್ಣದ ಗೆರೆಗಳು ಮುಂತಾದವುಗಳ ಲೇಪನ ಹಚ್ಚಲು ಪ್ರಾರಂಭಿಸಿ. ಇಲ್ಲಿ ಸಾಮಾನ್ಯವಾದ ಮತ್ತು ಅತ್ಯಂತ ಮುಖ್ಯವಾದ ಲಕ್ಷಣಗಳಿಗೆ ಮೊದಲು ಒತ್ತುಕೊಟ್ಟು ನಂತರ ವಿವರವಾದ ಕುಸುರಿ ಕೆಲಸಕ್ಕೆ ಕೈಹಾಕಿರಿ.

4. ಮುಖ್ಯವಾದ ಭಾವನೆಗಳಿಗೂ ಮತ್ತು ಪ್ರಸಾಧನಕ್ಕೂ ಹೊಂದಾಣಿಕೆಯಾಗುತ್ತಿದೆಯೋ ಎಂಬುದರ ಬಗ್ಗೆ ಆಗಾಗ ಪರೀಕ್ಷಿಸಿಕೊಳ್ಳಿ.

5. ಪಾತ್ರಕ್ಕೆ ಭಾರವಾದ ಮತ್ತು ಅನಗತ್ಯವಾದ ವಿವರಗಳು ಮನಸ್ಸಿನೊಳಗೆ ನುಸುಳುವ ಮೊದಲೇ, ಸರಿಯಾದ ಸಮಯದಲ್ಲಿ ಪ್ರಸಾಧನ ನಿಲ್ಲಿಸಿ.

6. ಕಡಿಮೆ ಖರ್ಚಿನಲ್ಲಿ, ಗರಿಷ್ಠವಾದ ಭಾವತರಂಗಗಳನ್ನು ರೂಪಿಸುವುದೇ ಉತ್ತಮ ಪ್ರಸಾಧನ ಎಂಬುದನ್ನು ನೆನಪಿನಲ್ಲಿಡಿ.

7. ಬಣ್ಣಗಳನ್ನು ಧೀರ್ಘಕಾಲ ವೀಕ್ಷಿಸುವುದರಿಂದ ಕಣ್ಣಿನ ನರಗಳು ದುರ್ಬಲವಾಗುತ್ತವೆ. ಪೂರಕ ಬಣ್ಣಗಳ ಭ್ರಮೆ ಮೂಡಬಹುದು. ಆದ್ದರಿಂದ ಆಗಾಗ ಕಣ್ಣುಗಳನ್ನು ಮುಚ್ಚಿ ಕಣ್ಣುಗಳಿಗೆ ವಿಶ್ರಾಂತಿ ಕೊಡಿ. ಅಥವಾ ಕನ್ನಡಿಯಿಂದ ಬೇರೆ ಕಡೆ ದೃಷ್ಟಿ ಹರಿಸಿ; ನಂತರ, ಕನ್ನಡಿಯಿಂದ ಸ್ವಲ್ಪ ದೂರ ನಿಂತು ನಿಮ್ಮನ್ನೇ ನೀವು ವೀಕ್ಷಿಸಿಕೊಳ್ಳಿ.

8. ಉರಿ, ಕೆರೆತ, ಮುಂತಾದವುಕ್ಕೆ ಶಮನ ನೀಡುವ ದ್ರಾವಣಗಳನ್ನು ನೀವು ಉಪಯೋಗಿಸಬೇಕೆಂದಿದ್ದರೆ, ಅದನ್ನು ಪ್ರಾರಂಭದಲ್ಲೇ ಹಚ್ಚಿ. ವಿವರವಾಗಿ ಪ್ರಸಾಧನ ಪ್ರಾರಂಭಿಸುವ ಮೊದಲು, ವಿಗ್ ಮತ್ತು ಗಡ್ಡಗಳನ್ನು ಹಾಕಿಕೊಂಡು ನೋಡಿ.


9. ಪ್ರಸಾಧನ ಕಾರ್ಯ ಸಂಪೂರ್ಣವಾಗಿ ಮುಗಿದ ನಂತರವೇ (ಅಂದರೆ ಹೊಸ ರೂಪಾಂತರಕ್ಕೆ ಯಾವುದೇ ತಿದ್ದುಪಡಿ ಬೇಡವೆನಿಸಿದಾಗ) ಮತ್ತೊಮ್ಮೆ ತೆಳುವಾಗಿ ಪೌಡರ್ ಲೇಪಿಸಿಕೊಳ್ಳಿ, ನಂತರ ವಿಗ್ ಕೂಡಿಸಿಕೊಳ್ಳಿ ಮತ್ತೆ ಗಡ್ಡ–ಮೀಸೆಗಳನ್ನು ಸರಿಯಾಗಿ ಅಂಟಿಸಿಕೊಳ್ಳಿ.

10. ನಿಮ್ಮ ಪ್ರಸಾಧನ ನಿಮಗೆ ಸಂಪೂರ್ಣ ತೃಪ್ತಿಕೊಟ್ಟ ನಂತರವೇ, ಅದನ್ನು ಭಾವಶೀಘ್ರತೆಯ ಪ್ರದರ್ಶನದೊಂದಿಗೆ ನಿಮ್ಮ ಸಹಚರರಿಗೆ ಅಥವಾ ನಿರ್ಮಾಪಕರಿಗೆ (ನಿರ್ದೇಶಕರಿಗೆ) ತೋರಿಸಿ.

ರಂಗದ ಮೇಲೆ ನೀವು ನೀಡುವ ಪ್ರದರ್ಶನದುದ್ದಕ್ಕೂ ನಿಮ್ಮ ಪ್ರಸಾಧನ ಅಚ್ಚುಕಟ್ಟಾಗಿರಲಿ. ಆತುರದ ಚಟುವಟಿಕೆಗಳನ್ನು ಆದಷ್ಟು ಕಡಿಮೆ ಮಾಡಿ. ನಿಮ್ಮ ಕೇಶಶೈಲಿ, ವಿಗ್, ಗಡ್ಡ, ಮೀಸೆ ಮುಂತಾದವುಗಳ ಬಗ್ಗೆ ಎಚ್ಚರದಿಂದಿರಿ. ಆಗಾಗ ಕನ್ನಡಿಯಲ್ಲಿ ನಿಮ್ಮ ಪ್ರಸಾಧನವನ್ನು ವೀಕ್ಷಿಸುತ್ತಿರಿ. ನಿಮ್ಮ ಪ್ರಸಾಧನದಲ್ಲಿ ಬದಲಾವಣೆಗಳು ಬೇಕೆನಿಸಿದರೆ ಬೆಳಕಿನ ವಿನ್ಯಾಸದೊಂದಿಗೆ ಹೊಂದಿಕೆಯಾಗುವಂತೆ ಬದಲಾಯಿಸಿಕೊಳ್ಳ ಬೇಕೆಂಬುದನ್ನು ಯಾವಾಗಲೂ ನೆನಪಿನಲ್ಲಿಡಿ.

# ಅಧ್ಯಾಯ - III

## ಬಣ್ಣಗಳು




### ಬಣ್ಣಗಳ ಅಭ್ಯಾಸ (Study of Colours)

ಬಣ್ಣಗಳ ಬಗ್ಗೆ ನಟ ಕೆಳಗಿನ ಕೆಲವು ಅಂಶಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು–

1. ಸೂರ್ಯನ ಬೆಳಕಿನ ವರ್ಣ ಪಂಕ್ತಿಯಲ್ಲಿ ಏಳು ಬಣ್ಣಗಳಿವೆ.

| V | I | B | G | Y | O | R |
|---|---|---|---|---|---|---|
| Violet | Indigo | Blue | Green | Yellow | Orange | Red |
| ನೇರಳೆ | ಕಡುನೀಲಿ | ನೀಲಿ | ಹಸಿರು | ಹಳದಿ | ಕಿತ್ತಳೆ | ಕೆಂಪು |

2. ಪ್ರಾಥಮಿಕ ಬಣ್ಣಗಳು ಮೂರು (Primary colours)

ಅವು ಕೆಂಪು, ಹಳದಿ ಮತ್ತು ನೀಲಿ.

ಈ ಬಣ್ಣಗಳು ಒಂದಕ್ಕೊಂದು ಕೂಡಿದಾಗ ಬೇರೆ ಬಣ್ಣಗಳು ರೂಪ ತಾಳುತ್ತವೆ.

ಉದಾಹರಣೆಗೆ ಕೆಂಪು ಮತ್ತು ಹಳದಿ ಮಿಶ್ರಣದಿಂದ ಕಿತ್ತಳೆ ಬಣ್ಣ ರೂಪತಾಳುತ್ತವೆ.

ನೀಲಿ ಮತ್ತು ಹಳದಿ ಸೇರಿದಾಗ ಹಸಿರು ಬಣ್ಣ ದೊರೆಯುತ್ತದೆ.

ನೀಲಿ ಮತ್ತು ಕೆಂಪು ಮಿಶ್ರಣ ನಿಮಗೆ ನೇರಳೆ ಬಣ್ಣ ನೀಡುತ್ತದೆ.

3. ವಾಸ್ತವಿಕವಾಗಿ ಕಪ್ಪು ಮತ್ತು ಬಿಳಿ ಬಣ್ಣಗಳ ಲಭ್ಯವಿಲ್ಲ.

ಎಲ್ಲ ಬಣ್ಣಗಳ ಕೂಡಿಕೆಯಿಂದ ಬಿಳಿಯ ಬಣ್ಣ ರೂಪತಾಳುತ್ತದೆ.

4. ಬಣ್ಣಗಳನ್ನು ಮೂರು ಗುಂಪುಗಳಾಗಿ ವರ್ಗೀಕರಿಸಲಾಗಿದೆ.

(i) ಬೆಚ್ಚನೆ ಬಣ್ಣಗಳು (Warm colours) : ಕೆಂಪು, ಕಿತ್ತಳೆ, ಹಳದಿ ಮತ್ತು ಇವುಗಳಲ್ಲಿ ಯಾವುದೇ ಒಂದು ಪ್ರಬಲವಾಗಿರುವ ಮಿಶ್ರಣ

(ii) ತಣ್ಣಗಿನ ಬಣ್ಣಗಳು (Cold colours) : ನೀಲಿ, ಕಡುನೀಲಿ, ನೇರಳೆ ಮತ್ತು ಇವುಗಳಲ್ಲಿನ ಯಾವುದೇ ಒಂದು ಬಣ್ಣ ಪ್ರಬಲವಾಗಿರುವ ಮಿಶ್ರಣ

(iii) ತಟಸ್ಥ ಬಣ್ಣಗಳು (Neutral colours) : ಹಸಿರು, ಕಪ್ಪು, ಬಿಳಿ ಇವುಗಳಲ್ಲಿನ ಯಾವುದೇ ಒಂದು ಬಣ್ಣ ಪ್ರಬಲವಾಗಿರುವ ಮಿಶ್ರಣ

5. ಪೂರಕ ಬಣ್ಣಗಳು (Complementary colours) : ಈ ಬಣ್ಣಗಳ ಮಿಶ್ರಣ ಮಾಡಿದಾಗ ಬಿಳಿ ಅಥವಾ ಬಿಳಿಯ – ಹತ್ತಿರದ ಬಣ್ಣ ರೂಪಗೊಳ್ಳುತ್ತದೆ – ಇವುಗಳು ಯಾವುದೆಂದರೆ.

ಕೆಂಪು ಮತ್ತು ನೀಲಿ ಮಿಶ್ರಿತ ಹಸಿರು
ಕಿತ್ತಳೆ ಮತ್ತು ನೀಲಿ
ಹಳದಿ ಮತ್ತು ನೇರಳೆ

ಎರಡು ಪೂರಕ ಬಣ್ಣಗಳನ್ನು ಬೆರೆಸಿದಾಗ ನಮಗೆ ಯಾವ ಬಣ್ಣವೇ ದೊರಕುವ ಸಂಭವವಿಲ್ಲ ಮೇಲ್ಕಂಡ ಬಣ್ಣಗಳ ಮಿಶ್ರಣದಿಂದ ಪ್ರಸಾಧನಕ್ಕೆ ಬೇಕಾದ ಛಾಯೆಗಳನ್ನು ಪಡೆಯಬಹುದು. ಕೆಳಕಂಡ ಪಟ್ಟಿ ಗಮನಿಸಿ ನೋಡಿ.

| | 1 | 2 | 3 | 4 | 5 | 6 | 7 |
|---|---|---|---|---|---|---|---|
| | ನೇರಳೆ (Violet) | ಕಡಲ ನೀಲಿ (Ultra marine) | ಪ್ರಶ್ಯನ್ ಬ್ಲೂ (Prussian Blue) | ನೀಲಿ ಮಿಶ್ರಿತ ಹಸಿರು (Blue green) | ಹಸಿರು (Green) | ಹಳದಿ ಮಿಶ್ರಿತ ಹಸಿರು (Yellowish green) | ಹಳದಿ (Yellow) |
| ಕೆಂಪು (Red) | ಕೆನ್ನೀಲಿ (Purple) | ಕಡುಗುಲಾಬಿ (Dark Pink) | ತೆಳು ಗುಲಾಬಿ (Light Pink) | ಬಿಳಿ (White) | ಚಿನ್ನದ ಹಳದಿ (Golden yellow) | ಚಿನ್ನದ ಹಳದಿ (Golden yellow) | ಕಿತ್ತಳೆ (Orange) |
| ಕಿತ್ತಳೆ (Orange) | ಕಡುಗುಲಾಬಿ (Dark pink) | ತೆಳುಗುಲಾಬಿ (Light pink) | ಬಿಳಿ (White) | ತೆಳುಹಳದಿ (Light yellow) | ಹಳದಿ (Yellow) | ಹಳದಿ (Yellow) | |
| ಹಳದಿ ಮಿಶ್ರಿತ ಹಸಿರು Yellow green | ಬಿಳಿ White | ತೆಳುಹಸಿರು Light green | ತೆಳುಹಸಿರು Light green | ಹಸಿರು Green | | | |
| ನೀಲಿ ಮಿಶ್ರಿತ ಹಸಿರು Blue green | ನೀಲಿ ಮಿಶ್ರಿತ ಹಸಿರು (ಕಡು ನೀರ ಹಸಿರು) Aqua Marine | ನೀಲಿ ಮಿಶ್ರಿತ ಹಸಿರು (ಕಡು ನೀರ ಹಸಿರು) Aqua Marine | | | | | |
| ನೀಲಿ Blue | ಉಗ್ರ ಕಡು ನೀಲಿ Ultra Marine | | | | | | |

## ಪ್ರಸಾಧನದ ಮೇಲೆ ಬಣ್ಣದ ಬೆಳಕಿನಿಂದಾಗುವ ಪರಿಣಾಮ (Effect of Coloured Light on Make-up)

### I. ಒಣಗಿದ ಹುಲ್ಲುಕಡ್ಡಿಯ ಹಳದಿ ವರ್ಣದ ಬೆಳಕು (Straw yellow light)

ಈ ಬೆಳಕು ತೀವ್ರವಾಗಿದ್ದಾಗ 'ಮೂಲ' ವರ್ಣವನ್ನು ತೀವ್ರ ಹಳದಿಯಾಗಿಸುತ್ತದೆ ಮತ್ತು ಚರ್ಮದ ಸ್ವಾಭಾವಿಕ ಬಣ್ಣವನ್ನು ಇಲ್ಲವಾಗಿಸುತ್ತದೆ. ಈ ಬೆಳಕಿನಲ್ಲಿ–

1. ಕೆನ್ನೆ ಕೆಂಪು ಪೇಲವವಾಗುತ್ತದೆ ಮತ್ತು ಕಿತ್ತಲೆ ಬಣ್ಣಕ್ಕೆ ತಿರುಗುತ್ತದೆ.
2. ಕಂದು ಮತ್ತು ಕೆಂಪು ಮಿಶ್ರಿತ ಬಣ್ಣಗಳು ತಮ್ಮ ಛಾಯೆಯಲ್ಲಿ ಪೇಲವವಾಗುತ್ತವೆ.
3. ತೆಳುನೀಲಿ ಬಣ್ಣ ಹಸಿರು ಬಣ್ಣವಾಗುತ್ತದೆ, ಗಾಢನೀಲಿ–ಹಸಿರು ಬಣ್ಣವಾಗುತ್ತದೆ.
4. ಬೂದಿ ಬಣ್ಣ ಮತ್ತು ನೀಲಿ ಮಿಶ್ರಿತ ಬೂದಿ ಬಣ್ಣ ಸ್ಲೇಟ್ ಬಣ್ಣವಾಗುತ್ತದೆ.

ಆದ್ದರಿಂದ ಈ ಬೆಳಕನ್ನು ಉಪಯೋಗಿಸುವಾಗ ಹಚ್ಚುವ ಮೂಲ ಬಣ್ಣ (Foundation) ದಟ್ಟವಾಗಿರಬೇಕು. ಕೆನ್ನೆಕೆಂಪು ಢಾಳಾಗಿ ಮತ್ತು ಛಾಯೆಗಳು ಆಳವಾಗಿ ರೂಪಿತವಾಗಬೇಕು ನೀಲಿ ಹಸಿರು ಮತ್ತು ಬೂದಿ ಬಣ್ಣಗಳನ್ನು ಉಪಯೋಗಿಸುವಾಗ ಎಚ್ಚರದಿಂದಿರಬೇಕು.

### II. ಕೆಂಪು ವರ್ಣದ ಬೆಳಕು.

ಇದು ಚರ್ಮದ ಗುಲಾಬಿ ಬಣ್ಣವನ್ನು ತನ್ನತ್ತ ಸೆಳೆದುಕೊಳ್ಳುತ್ತದೆ ಮತ್ತು ಅದನ್ನು ಪೇಲವವಾಗಿಸುತ್ತದೆ. ಕೆನ್ನೆ ಕೆಂಪು ಮತ್ತು ತುಟಿಯ ಕೆಂಪಿನ ಬಣ್ಣವನ್ನು ಮಸುಕು ಮಾಡುತ್ತವೆ. ತೀವ್ರವಾದ ಕೆಂಪು ಬೆಳಕನ್ನು ಉಪಯೋಗಿಸಿದಾಗ ತುಟಿ ಕೆನ್ನೆಗಳ ಬಣ್ಣ ಸಂಪೂರ್ಣವಾಗಿ ಕಾಣೆಯಾಗುವುದು. ಮೂಲ (Foundation) ಬಣ್ಣ ಪೇಲವವಾದ ಕಿತ್ತಳೆ ಬಣ್ಣಕ್ಕೆ ತಿರುಗುತ್ತದೆ.

ಇತರೇ ಬಣ್ಣಗಳ ಮೇಲೆ ಇದರ ಪರಿಣಾಮ :

1. ನೀಲಿ, ನೀಲಿಮಿಶ್ರಿತ ಬೂದು ಬಣ್ಣಗಳು ನೇರಳೆ ಬಣ್ಣವಾಗುತ್ತದೆ.
2. ತೆಳುಹಸಿರು ಬಣ್ಣ ಮಾಯವಾಗುತ್ತದೆ.
3. ಗಾಢಹಸಿರು ಹಳದಿ ಬಣ್ಣವಾಗುತ್ತದೆ
4. ಕಂದು ಬಣ್ಣ ಗಾಢವಾಗಿ ಹೆಚ್ಚುಕಮ್ಮಿ ಕಪ್ಪು ಬಣ್ಣಕ್ಕೆ ತಿರುಗುತ್ತದೆ.

ಆದ್ದರಿಂದ ಪಾತ್ರಧಾರಿ ದಟ್ಟವಾದ ಗುಲಾಬಿ ಮತ್ತು ಕೆನ್ನೆ ಕೆಂಪನ್ನು ಉಪಯೋಗಿಸಬೇಕಾಗುತ್ತದೆ ಮತ್ತೆ ಹಸಿರು ಮತ್ತು ತಿಳಿಕಂದು ಬಣ್ಣಗಳ ಉಪಯೋಗ ಸಾಧ್ಯವಿಲ್ಲ.

### III. ನೀಲಿ ಬಣ್ಣದ ಬೆಳಕು

1. ನೀಲಿ ತನ್ನ ಬಣ್ಣವನ್ನು ತಾನೇ ಸೆಳೆದುಕೊಳ್ಳುತ್ತದೆ ಮತ್ತು ಬೂದಿ ಬಣ್ಣ ಪೇಲವವಾಗುತ್ತದೆ.
2. ತೆಳುವಾದ ಕೆನ್ನ ಕೆಂಪು ಗಾಢವಾದ ನೇರಳೆ ಬಣ್ಣಕ್ಕೆ ತಿರುಗುತ್ತದೆ.
3. ಗಾಢ ಕೆನ್ನೆಕೆಂಪು ಬಣ್ಣ ಕಪ್ಪು ಮಿಶ್ರಿತ ಕೆನ್ನೆಗಳ ಮೇಲೆ ವಿರೂಪ ಕಲೆಗಳು ಕಾಣಬರುತ್ತದೆ.

ಆದ್ದರಿಂದ ಈ ಬೆಳಕಿನಲ್ಲಿ ಗುಲಾಬಿ ಬಣ್ಣವನ್ನು ಹೆಚ್ಚು ಉಪಯೋಗಿಸಬಾರದು ಅಲ್ಲದೆ ತುಟಿ, ಕೆನ್ನೆಗಳಿಗೆ ವಿಶೇಷ ಕೆಂಪು ಉಪಯೋಗಿಸಬಾರದು.

IV. ಹಸಿರು ಬಣ್ಣದ ಬೆಳಕು

ಈ ಬೆಳಕು ಪ್ರಸಾಧನದ ಮೇಲೆ ತೀವ್ರ ಪರಿಣಾಮ ಮಾಡುತ್ತದೆ. ಮೂಲದಲ್ಲಿ ಉಪಯೋಗಿಸಿದ ಬಣ್ಣಗಳು ತೀವ್ರವಾದ ಹಸಿರು ಬಣ್ಣಕ್ಕೆ ತಿರುಗುತ್ತದೆ. ಕೆಂಪು ಕಂದು ಬಣ್ಣವಾಗುತ್ತದೆ.

V. ಪ್ರಸಾಧನಕ್ಕೆ ಉತ್ತಮ ಬಣ್ಣಗಳು

ಗುಲಾಬಿ ಬಣ್ಣ, ನೇರಳೆ ಬಣ್ಣ, ಹಗಲು ನೀಲಿ ಬಣ್ಣ ಈ ಬಣ್ಣಗಳು ಉತ್ತಮ ವಿಶೇಶವಾಗಿ ತಿಳಿನೇರಳೆ ಬಣ್ಣ ಪ್ರಸಾಧನಕ್ಕೆ ಅತ್ಯುತ್ತಮ.

## ಪ್ರಸಾಧನದ ಅಭ್ಯಾಸ

ಪ್ರಸಾಧನದ ಕಲೆಗೆ ನಿರ್ದಿಷ್ಟವಾದ ಅಥವಾ ಗೊತ್ತುಪಡಿಸಿದ ಕ್ರಮಗಳು ಇದುವರೆಗೂ ಇಲ್ಲ. ತಮ್ಮ ಸ್ವಂತ ವಿಶೇಷ ಗುಣಗಳಿಗನುಗುಣವಾಗಿ ಪ್ರತಿಯೊಂದು ಮುಖವೂ ರೂಪಿತವಾಗಿರುತ್ತದೆ. ಸಾಮಾನ್ಯವಾಗಿ ಒಂದು ಮುಖಕ್ಕೆ ಹೊಂದಿಕೊಂಡು ಸರಿ ಅನಿಸಿದ ಪ್ರಸಾಧನ ಮತ್ತೊಂದು ಮುಖಕ್ಕೆ ಹೊಂದುವುದಿಲ್ಲ. ಆದ್ದರಿಂದ ಮುಖ ಲಕ್ಷಣಗಳಿಗೆ ಅನುಗುಣವಾಗಿ, ಪ್ರಸಾಧನದ ಬಣ್ಣಗಳನ್ನು ಮತ್ತು ಪದಾರ್ಥಗಳನ್ನು ಬದಲಾಯಿಸುತ್ತ ಹೋಗಬೇಕು. ಆಳವಾದ ರಂಗ ಅನುಭವವನ್ನು ಗಳಿಸಿದ ಮೇಲೆ ಪ್ರಸಾಧನದ ಬಗ್ಗೆ ಸಂಪೂರ್ಣ-ಸಮಾಧನಕರ ಜ್ಞಾನವನನ್ನು ಪಡೆಯಲು ಶಕ್ಯ.

## ಪ್ರಸಾಧನಕ್ಕೆ ಬೇಕಾದ ಸಾಮಗ್ರಿ-ಸಲಕರಣೆಗಳು

ಪ್ರಸಾಧನಕ್ಕೆ ಹಿಂದೆ ಬಳಸುತ್ತಿದ್ದ ಬಣ್ಣಗಳಾದರೂ ಹಿಟ್ಟು, ಹೂವು, ಎಲೆ ಮುಂತಾದವುಗಳಿಂದ ತೆಗೆದವು. ಇಂಗಲೀಕ-ಹರಿದಾಳ ವಿಶೇಷವಾಗಿ ಉಪಯೋಗಿಸುವ ಬಣ್ಣಗಳು 'ಬಿಳಿ' ಇದಕ್ಕೆ ಉಪಯೋಗಿಸುತ್ತಿದ್ದ ಪದಾರ್ಥ ಸೀಸದ ಬಿಳಿ ಆಕ್ಸೈಡ್. ಇದು ಅಪಾಯಕಾರಿ ನಂತರ ತವರದ ಆಕ್ಸೈಡ್ (Zinc oxide) ಉಪಯೋಗದ ಪ್ರಾರಂಭ. ಮೊದಲನೆಯ ಬಣ್ಣ ಬಹಳ ಗಾಢವಾದ ಬಿಳಿಯಾದರೂ ಇದರ ಉಪಯೋಗದಿಂದ ಮುಖ ಕೆಡುವ ಸಾಧ್ಯತೆ ಹೆಚ್ಚು. ಕಾಲಕ್ರಮೇಣ ಪ್ರಸಾಧನಕ್ಕೆ ಉಪಯೋಗಿಸುವ ಪದಾರ್ಥಗಳ ಬಗ್ಗೆ ಪಾಶ್ಚಾತ್ಯ ದೇಶಗಳಲ್ಲಿ ಸಂಶೋಧನೆ ಆರಂಭವಾಗಿ ಮುಖ್ಯವಾಗಿ ಲ್ರೀಶ್‌ನರ್ ಎಂಬ ಜರ್ಮನ್ ವಿಜ್ಞಾನಿಯ ಪ್ರಯತ್ನದಿಂದ ಉತ್ತಮ ಆಧುನಿಕ ಅಲಂಕಾರ ವಸ್ತುಗಳ ತಯಾರಿಕೆ ಪ್ರಾರಂಭವಾಯ್ತು. ಇಂದೂ ಅವನ ಹೆಸರಿನಲ್ಲೇ ತಯಾರಿಸಲ್ಪಡುವ ವಸ್ತುಗಳಲ್ಲದೆ ಹೆಸರಾಂತ ಮ್ಯಾಕ್ಸ್‌ಫ್ಯಾಕ್ಟರ್, ಸ್ಟೈನ್ಸ್, ಲಾಕ್ ವುಡ್, ಕ್ರೈಲಿನ್ ಮುಂತಾದ ಸಂಸ್ಥೆಗಳು ತಯಾರಿಸಿದ ವಸ್ತುಗಳೂ ಜಗದಾದ್ಯಂತ ಪ್ರಸಾಧನ ಕಲಾವಿದರಿಗೆ ಪರಿಚಿತ ವಸ್ತುಗಳಾಗಿವೆ. ಆದರೆ ಬೆಲೆ ಮಾತ್ರ ದುಬಾರಿ. ಆದರೆ ಸೃಜನಾತ್ಮಕ-ಕಲಾತ್ಮಕ ಪ್ರಸಾಧನಕ್ಕೆ ವಸ್ತುಗಳೇ ಮುಖ್ಯವಲ್ಲ ಕಲೆಮುಖ್ಯ ಅಲ್ಲದೆ ನಮ್ಮ ದೇಶದ ವಾತಾವರಣದಿಂದ ಪರ್ವತಶ್ರೇಣಿಯಲ್ಲಿರುವ ಜನರ ಮುಖ ಚರ್ಮದ ಬಣ್ಣವೇ ಬೇರೆ-ಹಾಗೇ ಬಯಲುಸೀಮೆ ಮತ್ತು ಸಮುದ್ರ ತೀರದ ಪ್ರದೇಶಗಳ ಜನರ ಮುಖ ಛಾಯೆ ಮೈಬಣ್ಣವೇ ಬೇರೆ. ಹೀಗಿರುವಾಗ ಒಂದೇ ತರಹದ ಬಣ್ಣದ ಉಪಯೋಗ ಸಾಧ್ಯವಿಲ್ಲ. ಪರದೇಶದ ಎಲ್ಲ ಬಣ್ಣಗಳೂ ದೊರಕುವುದಿಲ್ಲ ಆದರೂ ನಮ್ಮ ದೇಶದಲ್ಲೇ ದೊರಕುವ-ಅನಪಾಯಕಾರಿ ವಸ್ತುಗಳನ್ನು ಬಳಸಿ ಕಲಾತ್ಮಕ ಪ್ರಸಾಧನವನ್ನು ಮಾಡಬಹುದು.

## ಪದಾರ್ಥಗಳು

ವಿವಿಧ ತಯಾರಕರೂ ನಮ್ಮ ದೇಶದಲ್ಲಿ ಕೂಡ ತಯಾರಿಕೆ ಪ್ರಾರಂಭಿಸಿದ್ದಾರೆ ಈ ಪದಾರ್ಥಗಳೂ ಅಂಥಾ 'ಕೆಟ್ಟದೇನಲ್ಲ'. ಇನ್ನು ಸುಧಾರಣೆ ಆಗ ಬೇಕು ನಿಜ, ಕಾಲಾ ಬಜಾರ್-ಕಳ್ಳಸಂತೆಯಲ್ಲೂ ಸಿಗುವ ಪದಾರ್ಥಗಳನ್ನು ನಂಬುವದಕ್ಕಿಂತ ಇವುಗಳ ಉಪಯೋಗ ಎಷ್ಟೋ ವಾಸಿ.

ಪರದೇಶದ ದುಬಾರಿ ವಸ್ತುಗಳು ಮತ್ತು ಉಪಕರಣಗಳು ಮಾರುಕಟ್ಟೆಯಲ್ಲಿ ದಂಡಿಯಾಗಿ ದೊರೆತರೂ ಮೂಲ ಭೂತವಾಗಿ ಅತ್ಯವಶ್ಯಕವಾದ ಪದಾರ್ಥಗಳು ನಿಮ್ಮ ಪೆಟ್ಟಿಗೆಯಲ್ಲಿರಲಿ. ಸಾಕಷ್ಟು ಅನುಭವ ಗಳಿಸಿದ ಮೇಲೆ ಬೇಕಿದ್ದಲ್ಲಿ-ನಿಮ್ಮ ಅವಶ್ಯತೆಗೆ ಅನುಗುಣವಾಗಿ ಪದಾರ್ಥಗಳನ್ನು ಸಂಕಲಿಸುತ್ತ ಹೋಗಬಹುದು.

ಬಣ್ಣಗಳಲ್ಲಿ ತೇವವನ್ನು ಸೇರಿಸಿ ಉಪಯೋಗಿಸುವವು ಮತ್ತೆ ಗ್ರೀಸ್ ಬಣ್ಣಗಳು ಈ ರೀತಿ ಸಿಗುತ್ತವೆ. ಇವು ಹೆಚ್ಚು ಪ್ರಯೋಜಕ ಮತ್ತು ಕಡಿಮೆ ಹಾನಿಕರ.

ಈ ಪದಾರ್ಥಗಳ ಆಯ್ಕೆ ನಿಮ್ಮ ಸ್ವಂತ ಅನುಭವ ಮತ್ತು ಅಭಿಪ್ರಾಯಕ್ಕೆ ಬಿಟ್ಟಿದ್ದು.

## ಪೈಂಟ್ಸ್-ಬಣ್ಣಗಳು

ಇವುಗಳಲ್ಲಿ ಎರಡು ವಿಧ-

1. ಮೂಲ ಭೂತ ಬಣ್ಣಗಳು (Fundamental paints)
2. ಅಂತರಾಚ್ಛಾದನ ಬಣ್ಣಗಳು (Lining colours)

ಈ ಎರಡು ಬಣ್ಣಗಳನ್ನೂ ವಿವಿಧ ವರ್ಣ, ದ್ರವ್ಯಗಳು, ಮೇಣ ಮತ್ತು ಗ್ರೀಸ್‌ನಿಂದ ತಯಾರಿಸಿರುತ್ತಾರೆ. ಆದರೆ ಇವೆರಡರ ಬಳಕೆಯಲ್ಲಿ ವ್ಯತ್ಯಾಸವಿದೆ. ಮೂಲಭೂತ ಬಣ್ಣಗಳನ್ನು 'ಅಡಿಪಾಯದಂತೆ' (Foundation)' ಮೊದಲ ಬಣ್ಣದಂತೆ ಉಪಯೋಗಿಸುತ್ತೇವೆ.

ಅಂತರಾಚ್ಛಾದನ (Lining colours) ಬಣ್ಣಗಳನ್ನು ಛಾಯೆ (Shadow) ವೈಭವೀಕರಣ (High lighting)ಕ್ಕಾಗಿ ಉಪಯೋಗಿಸುತ್ತೇವೆ.

ಮೂಲಭೂತ ಬಣ್ಣಗಳು ದಪ್ಪನಾದ ಕಡ್ಡಿಗಳ ರೂಪದಲ್ಲೂ, ದುಂಡಗಿನ ಡಬ್ಬಿಗಳಲ್ಲೂ ಇಲ್ಲ ಟೂತ್ ಪೇಸ್ಟ್‌ನಂತೆ ಇರುವ ನಳಿಕೆ (Tube) ನಲ್ಲಿ ಆಕಾರದಲ್ಲೂ ದೊರೆಯುತ್ತವೆ. ಲೈನಿಂಗ್ ಬಣ್ಣಗಳು ಸೀಸದ ಕಡ್ಡಿಯಷ್ಟೇ ದಪ್ಪನಾಗಿರುತ್ತವೆ.

'ಲೀಷ್‌ನರ್' ಕಂಪೆನಿಯವರು ಸುಮಾರು 70 ವಿವಿಧ ಬಣ್ಣಗಳ ಛಾಯೆ (Shades) ಯನ್ನು ತಯಾರಿಸುತ್ತಾರೆ.

ಆದರೆ ಇವೆಲ್ಲವೂ ನಮ್ಮ ಬಣ್ಣದ ಪೆಟ್ಟಿಗೆಯಲ್ಲಿರಬೇಕಾಗಿಲ್ಲ.

ಮೊದಲೇ ಹೇಳಿದಂತೆ

ಮೂಲ ಭೂತ ಬಣ್ಣ/ವರ್ಣಗಳನ್ನು ಉಪಯೋಗಿಸಿ ಎಲ್ಲಾ ತರಹದ ವರ್ಣದ ಛಾಯೆಗಳನ್ನು ತಯಾರಿಸುವ ಛಾತಿ ಇದ್ದರೆ ಸಾಕು.

ಆರಂಭದಲ್ಲಿ ಕಲಿಯುವವರಿಗೆ ಬಿಳಿ, ಹಳದಿ, ಕೆಂಪು, ನೀಲಿ, ಕಂದು ಮತ್ತು ಕಪ್ಪು ಬಣ್ಣಗಳಿದ್ದರೆ ಅಷ್ಟೇ ಸಾಕು.

ಈಗ ಪೆಟ್ಟಿಗೆಯಲ್ಲಿರಬೇಕಾದ ಬಣ್ಣಗಳ ವಿವರದ ಕಡೆ ಗಮನ ನೀಡೋಣ

**1. ಮೂಲಭೂತ ಬಣ್ಣ (Foundation)**

(a) ಗ್ರೀಸ್ ಪ್ಯೆಂಟ್ (Grease paint) ಛಾಯೆ ನಂ.25 ಲೈಷ್‌ನರ್ ನಂ.2, ನಂ.3, ಯುವತಿಯರಿಗೆ ಹಾಗೂ ಮಧ್ಯ ವಯಸ್ಕ ಗಂಡಸರಿಗೆ ಹೀಗಿದ್ದರೂ ಒಬ್ಬೊಬ್ಬರ ಚರ್ಮದ ಬಣ್ಣದಲ್ಲಿ ವ್ಯತ್ಯಾಸ ಇರುವುದರಿಂದ ಇದರೊಡನೆ ನಮಗೆ ಬೇಕಾದ ಹಳದಿ, ಕಂದು, ಬಿಳಿ, ಬಣ್ಣದ ಪ್ರದೇಶಗಳನ್ನು ಸೇರಿಸಿಕೊಳ್ಳಬಹುದು.

(b) ಪ್ಯಾನ್‌ಕೇಕ್ (Pan cake)

| | |
|---|---|
| ಛಾಯೆ (Shade) | ನಂ.26 ಯುವಕ/ಯುವತಿಯರಿಗೆ |
| | ನಂ.27 |
| | ನಂ.28 ಮಧ್ಯಮ ವಯಸ್ಕರಿಗೆ |

(c) ದ್ರವಸ್ವರೂಪದ ಬಣ್ಣ (Liquid foundation)

1. ಛಾಯೆ (Shade) – 'ನೈಜ' (Natural)

2. ಛಾಯೆ ರ್‍ಯಾಷೆಲ್ (Rachel) ಮೇಲಿನದಕಿಂತ ಕೊಂಚ ಕೆಂಬು ಬಣ್ಣದ್ದು.

(d) ಈಜಿಪ್ಷಿಯನ್ ತೆಳು ಬಣ್ಣದ – ಸಾಮಾನ್ಯ ಚರ್ಮದ ಬಣ್ಣ ಪ್ಯಾನ್ ಕೇಕ್ (Egyptian light)

ಈಜಿಪ್ಷಿಯನ್ ದಟ್ಟ ಬಣ್ಣದ ಸ್ವಲ್ಪ ದಟ್ಟವಾದ ಚರ್ಮದ ಬಣ್ಣ ಪ್ಯಾನ್ ಕೇಕ್ (Egyptian Dark)

**2. ಅಂತರಾಚ್ಛಾದನ ಬಣ್ಣಗಳು (Lining colours)**

(a) ತೆಳುಕಂದು ಬಣ್ಣ (Light brown)

ಛಾಯೆ ಮತ್ತು ಅರ್ಧ ಛಾಯೆಗಳಿಗಾಗಿ

ಹಾಗೇ ತಗ್ಗುಗಳು ಮತ್ತು ಭಿನ್ನತೆ ವಯಸ್ಸಿನ ಗೆರೆಗಳ ಛಾಯೆಗಳನ್ನು ಸೃಷ್ಟಿಸಲು

(b) ನೀಲಿ ಮಿಶ್ರಿತ ಬೂದಿಬಣ್ಣ (Bluish grey)

ಕ್ಷೌರ ಮಾಡಿಕೊಂಡಿರದ ಮುಖದ ಪರಿಣಾಮ ಮೂಡಿಸಲು ಮತ್ತು ಮುಪ್ಪಿನಲ್ಲಿ ಬಿಳಿ ಹುಬ್ಬುಗಳಿಗೆ

(c) ತೆಳುಕೆಂಪು (Light red)

ಗುಲಾಬಿ, ಕೆಂಪು ಎವೆ, ಕೆಂಪು ಮೂಗು ಮತ್ತು ಕೆಂಪು ತುಟಿಗಳನ್ನು ಮೂಡಿಸಲು

(d) ಕಡು ಕೆಂಪು (Dark red)

ಬಿಸಿಲಿನ ತಾಪದಿಂದ ಮಾಸಿದ ಕೆನ್ನೆಗಳಿಗೆ ಗುಲಾಬಿ ಬಣ್ಣದ ಕಾಂತಿ ನೀಡಲು ಈ ಬಣ್ಣದ ಜೊತೆ ಕಂದು ಅಥವಾ ಕಪ್ಪು ಬಣ್ಣ ಮಿಶ್ರಣ ಮಾಡಿ ಪೊಳ್ಳುಭಾಗ (hollow) ಅಥ'ವಾ ವಯಸ್ಸಿನ ಗೆರೆಗಳನ್ನು ಮೂಡಿಸಬಹುದು.

(e) ಬಿಳಿ (White)

ನರೆತ ರೂಪದ ಹುಬ್ಬು ಮತ್ತು ಎವೆಗಳಿಗಾಗಿ

(f) ಕಪ್ಪು : (Black)

ಕಣ್ಣುಗಳಿಗೆ ಪ್ರಾಮುಖ್ಯತೆ ನೀಡಲು, ಹುಬ್ಬು ಮತ್ತು ಎವೆಗಳನ್ನು ಎತ್ತಿ ತೋರಿಸಲು.

**3. ಉಪಯೋಗಕ್ಕೆ ಬರಬಹುದಾಗ ಇತರೇ ಬಣ್ಣಗಳು**

| | |
|---|---|
| (a) ಹಳದಿ (yellow) | 'ಮೂಲ' ಬಣ್ಣ ಬದಲಾಯಿಸಲು (ಆರೋಗ್ಯ ವಿಲ್ಲದ ಮುಖದ ಕಾಂತಿಗಾಗಿ) |
| (b) ತೆಳು ನೀಲಿ | ನಾಡಿಗಳನ್ನು ಒತ್ತಿ ತೋರಿಸಲು ಮತ್ತು ಕಣ್ಣುಗಳ ಛಾಯೆಗಾಗಿ |
| (c) ಹಸಿರು | ವಿಲಕ್ಷಣವಾದ / ಕಲ್ಪನಾನಿಯಮವಾದ ಪ್ರಸಾಧನಕ್ಕಾಗಿ |

ಕುಶಲತೆಯಿಂದ ಮಿಶ್ರಿತ ಮೂಲ ಬಣ್ಣಗಳ ಮಿಶ್ರಣದಿಂದ ಹಲವಾರು ಬಣ್ಣಗಳ ಛಾಯೆ (Shades) ಮಾಡಬಹುದು.

**4. ಇತರೇ ಬಣ್ಣಗಳು**

| | |
|---|---|
| (a) ಬಹಳ ತೆಳುವಾದ ಗುಲಾಬಿ ಬಣ್ಣ ನಂ 1½ | ಬಿಳಚಿಕೊಂಡ ಮುಖದ ವರ್ಣಕ್ಕೆ ಮತ್ತು ದಟ್ಟವಾದ ವೈಭವೀಕರಣಕ್ಕೆ (Strong highlighting) |
| (b) ಮಧ್ಯಮ ಗುಲಾಬಿ ಬಣ್ಣ ನಂ.2 ½ | ಯೌವನ ಪ್ರಸಾಧನಕ್ಕೆ |
| (c) ಕೆಂಪು ಮತ್ತೆ ಕಂದು ಮಿಶ್ರಿತ ಗುಲಾಬಿ ಬಣ್ಣ ನಂ.4 ½ | ಬಿಸಿಲಿನ ಶಾಕಕ್ಕೆ ನಕ್ಕ ಚರ್ಮದ ಬಣ್ಣದ ಪರಿಮಾಣಕ್ಕಾಗಿ. |
| (d) ಹಳದಿ ಮಿಶ್ರಿತ ಗುಲಾಬಿ ಬಣ್ಣ ನಂ.8 | ಆರೋಗ್ಯ ಹೀನ ಮುಖ ಕಾಂತಿಗೆ |
| (e) ಕಡು ಕಂದು ಚರ್ಮದ ಕಾಂತಿಗಾಗಿ | ನಂ.11 ಕಂದು ಬಣ್ಣದ |
| (f) ಕೆಂಪು ಮಿಶ್ರಿತಿ ಕಂದು | ನಂ.9 |

ಪ್ರಸಾಧನ ಪೆಟ್ಟಿಗೆಯಲ್ಲಿ ಇರಬೇಕಾದ ಇತರೇ ಪದಾರ್ಥಗಳು



1. ಒಂದು ಜಾರ್ ಕೋಲ್ಡ್ ಕ್ರೀಂ. (Cold cream) ಮುಖದ ಪ್ರಸಾಧನ ಮಾಡುವ ಮೊದಲು ಮತ್ತು ಪ್ರಸಾಧನ ತೆಗೆಯಬೇಕಾದಾಗ ಉಪಯೋಗಿಸಲು

2. ಪುಡಿ ಕೆನ್ನೆ ಕೆಂಪು (Powder/dry) Cheek Rouge ವಿವಿಧ ಛಾಯೆಗಳದು (Different Shades) ಕೆನ್ನೆ ಕೆಂಪಿಗಾಗಿ

3. ಮುಖಕ್ಕೆ ಹಚ್ಚಿಕೊಳ್ಳಲು ಪೌಡರ್ (Face powder)

– ಇದರ ಉಪಯೋಗ

(a) ಮೂಲ ಬಣ್ಣದ ಹೊಂದಾಣಿಕೆಗಾಗಿ

(b) ಅವಶ್ಯಕ್ಕಿಂತ ಹೆಚ್ಚಾದ ಗ್ರೀಸ್ ಹೀರಿಕೊಳ್ಳಲು.

(c) ಬಣ್ಣಗಳು ಬೀರುವ ಅತಿ ಹೊಳಪಿನ ಪರಿಣಾಮವನ್ನು ಕಡಿಮೆ ಮಾಡಲು.

(d) ಛಾಯೆ ಮತ್ತು ವೈಭವೀಕರಣಗಳ ನಡುವಿನ ತೀವ್ರ ವ್ಯತ್ಯಾಸವನ್ನು ಕಡಿಮೆ ಮಾಡಲು

(e) ದಟ್ಟವಾದ ಛಾಯೆಗಳನ್ನು ಕಡಿಮೆ ಮಾಡಲು.

(f) ಪ್ರಸಾಧನಕ್ಕೆ ನೈಜ ಶೋಭೆ ನೀಡಲು

ಈ ಕೆಳಕಂಡ ವರ್ಣಗಳ ಪೌಡರ್ ನಿಮ್ಮ ಬಳಿ ಇದ್ದರೆ ಒಳ್ಳೆಯದು

1. ಬಿಳಿ

2. ತೆಳುಗುಲಾಬಿ

3. ಕಡು ಗುಲಾಬಿ

4. ಹಳದಿ ಮಿಶ್ರಿತ

5. ರ್‍ಯಾಶೆಲ್ ಮತ್ತು ನ್ಯಾಚುರಲ್

ಆದರೆ ಈ ಎಲ್ಲಾ ಪೌಡರುಗಳ ವರ್ಣ ಮೂಲ ಬಣ್ಣದ ಛಾಯೆಗಿಂತ ಯಾವಾಗಲೂ ಸ್ವಲ್ಪ ತೆಳುವಾಗಿರಬೇಕೆಂಬುದನ್ನು ಗಮನದಲ್ಲಿಡಿ.

4. ಪ್ರಸಾಧನದ ಪೆನ್ಸಿಲ್‌ಗಳು ಕೆಂಪು–ವಿವಿಧ ಛಾಯೆಗಳದು ತೆಳು ಮತ್ತು ಕಡು ಕಂದು ಕಪ್ಪು. — ತುಟಿಯ ಆಕಾರ ಬದಲಾಯಿಸಲು ಕಣ್ಣು ಮತ್ತು ಹುಬ್ಬುಗಳ ಆಕಾರ ಬದಲಾಯಿಸುವುದಕ್ಕೆ ಮತ್ತು ಅವುಗಳಿಗೆ ಪ್ರಾಮುಖ್ಯತೆಯ ಒತ್ತು ನೀಡಲು

5. ಕಣ್ಣಿಗೆ ಕಾಡಿಗೆ /ಕಾಜಲ್ [Eye liner] ದ್ರವ ಸ್ವರೂಪದ್ದು — ಕಣ್ಣಿಗೆ ಪ್ರಾಮುಖ್ಯತೆ ಮತ್ತು ಹೊಳಪು ನೀಡಲು ಕಣ್ಣಿನ ರೆಪ್ಪೆ ಕೆಳಗೆ ಮೇಲೆ ಮೃದುವಾಗಿ ಗೆರೆ ತೆಗೆಯಲು

6. ಪೌಡರ್ ತೆಗೆಯುವ ಪಫ್/ ಬ್ರಷ್ ತುದಿ ದುಂಡಾಗಿರುವುದಲ್ಲದೆ ಮೃದುವಾಗಿರಬೇಕು — ಅಗತ್ಯಕ್ಕಿಂತ ಹೆಚ್ಚಾದ ಪೌಡರ್ ತೆಗೆಯಲು

7. ಕ್ರೇಪ್ ಹೇರ್ (Crepe hair) ಪೆಟ್ಟಿಗೆಯಲ್ಲಿ ಇರಬಹುದಾದ ವರ್ಣಗಳು: — ಕೃತಕ ಮೀಸೆ ಗಡ್ಡ, ಹುಬ್ಬು, ಇತ್ಯಾದಿಗಳಿಗಾಗಿ



1. ಅರ್ಧ ನೆರೆಗೂದಲು (Mid grey)

2. ನೆರೆಗೂದಲು (Grey)

3. ಕಪ್ಪುಕೂದಲು (Black)

4. ಬಿಳಿ ಕೂದಲು (White)

5. ಕಂದು ಕೂದಲು (Brown)

6. ಕಾಫಿ ಕಂದುಕೂದಲು (Coffee brown)

8. ಒಂದು ಬಾಟಲಿ ಸ್ಪಿರಿಟ್‌ಗಂ (Spirit gum) ಒಳ್ಳೆಯಗುಣ ಮಟ್ಟದ್ದಾಗಿರಬೇಕು. [ಇಲ್ಲದಿದ್ದಲ್ಲಿ ಚರ್ಮದಲ್ಲಿ ನವೆ. ಉಂಟಾಗಬಹುದು ಮತ್ತು ಪ್ರದರ್ಶನದ ಮಧ್ಯೆ ಮೀಸೆ ಗಡ್ಡಗಳು ಸಡಿಲಗೊಂಡು ಆಭಾಸಕ್ಕೆ ಎಡೆಮಾಡಬಹುದು] — ಗಡ್ಡ ಮೀಸೆ ಮುಂತಾದವುಗಳನ್ನು ಅಂಟಿಸುವುದಕ್ಕಾಗಿ.

9. ಮಸ್ಕರ (Mascara) ಬಿಳಿ, ಕಂದು, ಬೆಳ್ಳಿ, ಚಿನ್ನ, ಕಪ್ಪು ಛಾಯೆಗಳದು — ಕೂದಲ ಬಣ್ಣ ಬದಲಾಯಿಸಲು.

10. ವ್ಯಾಸಲೀನ್ (Vaseline)/ — ತಲೆ ಕೂದಲಿಗೆ ಹಚ್ಚಿಕೊಳ್ಳುವ ಬ್ರಿಲಿಯನ್‌ಟೈನ್ (Brilliantine)/ಕೂದಲಿಗೆ ಹೊಳಪು ಕೊಡಲು/ ಸಜ್ಜುಮಾಡಲು

11. ಕಪ್ಪು ಬಣ್ಣದ ಹಲ್ಲಿನ ಗಿಲಾಯಿ (Black tooth enamel) — 'ಹಲ್ಲು ಬಿದ್ದಂತೆ' ಕಾಣುವ ಹಾಗೆ ಮಾಡಲು.

12. ಶುದ್ಧವಾದ ಮದ್ಯಸಾರ (Alcohol) ಅಥವಾ ಅಸಿಟೋನ್ (Acetone) ಸ್ಪಿರಿಟ್ ಗಂ ತೆಗೆಯಲು

13. ಯುಡಿ ಕಲೋನ್ : ಮದ್ಯಸಾರದಿಂದ ತಯಾರಿಸಿದ ಸುಗಂಧ ದ್ರವ್ಯ– ಬಣ್ಣ ತೆಗೆದ ನಂತರ ಚರ್ಮವನ್ನು ಹುರುಪುಳ್ಳಂತೆ ಮಾಡಲು.

14. ಬಿಳಿಸೋಪು : ಅಗತ್ಯಕ್ಕಿಂತ ಹೆಚ್ಚಾಗಿರುವ ಹುಬ್ಬಿನ ಕೂದಲು ಮರೆ ಮಾಡಲು

15. ಬ್ರಷ್‌ಗಳು : ನಂ.1 ರಿಂದ 8 ರವರೆಗೆ ವೈಭವೀಕರಣಕ್ಕೆ ಮತ್ತು ಸೂಕ್ಷ್ಮಛಾಯೆಗಳನ್ನು ಒದಗಿಸಲು.

16. ಸಾಮಾನ್ಯ ಪಫ್‌ಗಳು (Ordinary puffs) : ಪೌಡರ್ ಹಚ್ಚಲು ಉಪಯೋಗ

17. ದುಂಡಗಿನ ಕ್ಯಾಮೆಲ್ ಹೇರ್ ಬ್ರಷ್ : ಅಗತ್ಯಕ್ಕಿಂತ ಹೆಚ್ಚಾದ ಪೌಡರ್ ತೆಗೆಯಲು

18. ಕ್ಷೌರಿಕನ ಬಾಚಣಿಗೆಗಳು : ಕೂದಲನ್ನು ಸಿದ್ಧಪಡಿಸಲು

19. ಹರಿತವಾದ ಸಣ್ಣ ಕತ್ತರಿ : ಕ್ರೇಪ್ ಹೇರ್ ಕತ್ತರಿಸಲು

20. ಒಳ್ಳೆಯ ಕನ್ನಡಿ : ಇಡೀ ಮುಖವನ್ನು ಇರುವ ಹಾಗೇ ಪ್ರತಿಬಿಂಬಿಸುವಷ್ಟು ದೊಡ್ಡದಾಗಿರಬೇಕು.

21. ಒಂದು ಕೈಗನ್ನಡಿ : ತಲೆ ಹಿಂಭಾಗ, ಮತ್ತು ಮುಖದ ಪಕ್ಕದ ಭಾಗಗಳನ್ನು ಪ್ರತಿಬಿಂಬಿಸಲು.

22. ಚಿಕ್ಕ ಸ್ಪಾಂಜ್ ತುಂಡುಗಳು : ದೇಹ, ಮುಖ, ಹಸ್ತ ಮುಂತಾದ ಅಂಗಗಳ ಪ್ರಸಾಧನಕ್ಕೆ.

23. ಒರೆಸಿಕೊಳ್ಳುವ ಸಣ್ಣ ಟವೆಲ್ ಮತ್ತು ಕಾಗದದ ನ್ಯಾಪ್‌ಕಿನ್‌ಗಳು: ಮುಖ ಒರೆಸಿಕೊಳ್ಳಲು ಬಣ್ಣ ಅಳಿಸಲು.

24. ಹೀರಿಕೊಳ್ಳುವ ಹತ್ತಿ : ಕೃತಕ ಜೋಡಣೆಗೆ

25. ಪ್ರಸಾಧನ ಪೆಟ್ಟಿಗೆ : ಮೇಲೆ ಹೇಳಿದ ಎಲ್ಲ ಪದಾರ್ಥಗಳನ್ನು, ಒಂದಕ್ಕೊಂದು, ಸೇರದಂತೆ. ಶೇಖರಿಸಿ ಇಟ್ಟುಕೊಳ್ಳಲು ಅನುಕೂಲವಾಗಿರುವಂತಿರುವ ವಿವಿಧ ಭಾಗಗಳಿರುವ ಪೆಟ್ಟಿಗೆ.

## ಪ್ರಸಾಧನದ ಆರೋಗ್ಯ ಸೂತ್ರಗಳು

1. ಪ್ರಸಾಧನ ಕೋಣೆ ಮತ್ತು ನಿಮ್ಮೆಲ್ಲ ಅವಶ್ಯ ವಸ್ತುಗಳು ಶುಚಿಯಾಗಿರಬೇಕು.

2. ಯಾವಾಗಲೂ ಹಾನಿರಹಿತ (Harmless) ಬಣ್ಣಗಳನ್ನೇ ಆರಿಸಿ ಉಪಯೋಗಿಸಿ ಅಪಾಯಕಾರಿಯಾದ ಕೀಳು ಗುಣ ಮಟ್ಟದ ಕೆಂಪು–ಪಾದರಸದ ಸಲ್ಫೈಡ್ ಮತ್ತು ಬಿಳಿ–ಸೀಸದ ಬಣ್ಣದ ಬಗ್ಗೆ ಎಚ್ಚರಿಕೆಯಿಂದಿರಿ.

3. ಬಣ್ಣಗಳು ಬಹಳ ಗಟ್ಟಿಯಾಗಿ ಅಥವಾ ತುಂಬಾ ಮೃದುವಾಗಿರಕೂಡದು.

4. ಪ್ರಸಾಧನದ ಪದಾರ್ಥಗಳನ್ನು ಧೂಳು, ಅತೀ ಉಷ್ಣ ಮತ್ತು ತಂಪಿನಿಂದ ಹಾಳಾಗುವುದಕ್ಕೆ ಬಿಡಬೇಡಿ.

5. ಚರ್ಮವನ್ನು ಪ್ರಸಾಧನ ಮಾಡುವಾಗ ಅತಿಯಾಗಿ ಉಜ್ಜದಿರಿ.

6. ವಾಸನೆ ಬೀರುವ ಮಿಶ್ರಣದ ಬಣ್ಣಗಳಿಂದ ನಿಮ್ಮ ಕಣ್ಣುಗಳನ್ನು ರಕ್ಷಿಸಿಕೊಳ್ಳಿ.

7. ಹಲವಾರು ಜನ ಉಪಯೋಗಿಸಿದ ವಿಗ್ ಮುಂತಾದವನ್ನು ಹಾಕಿಕೊಳ್ಳುವಾಗ ನಿಮ್ಮ ತಲೆಯನ್ನು ತುಂಡು ಬಟ್ಟೆ ಕಟ್ಟಿಕೊಂಡು ರಕ್ಷಿಸಿಕೊಳ್ಳುವುದು ಉತ್ತಮ.

8. ಪ್ರಸಾಧನ ತೆಗೆಯಲು ತಣ್ಣನೆಯ ನೀರು ಉಪಯೋಗಿಸಬೇಡಿ ಯಾವಾಗಲು ಕೋಲ್ಡ್‌ಕ್ರೀಂ ಅಥವಾ ಕೊಬ್ಬರಿ ಎಣ್ಣೆ ಉಪಯೋಗಿಸಿ.

## ಪ್ರಸಾಧನದ ಪ್ರಮುಖವಾದ ವಿಧಗಳು

ಪ್ರಸಾಧನದಲ್ಲಿ ಎರಡು ವಿಧಗಳಿವೆ. ಅವು ಯಾವೆಂದರೆ

1. ಯಥಾವತ್ ಅಥವಾ ನೇರ ಅಥವಾ ಸರಳ ಅಥವಾ ಸಾದಾ ಪ್ರಸಾಧನ (Straight make up)
2. ಗುಣಾತ್ಮಕ (ಅನುಗುಣ) ಪ್ರಸಾಧನ (Character make–up)

ಇವುಗಳ ಬಗ್ಗೆ ವಿವರಣೆ

1. ಯಥಾವತ್ ಪ್ರಸಾಧನ

ರಂಗದ ಬೆಳಕಿನಡಿಯಲ್ಲಿ ನಿಮ್ಮ ಮುಖ ನೈಜಕ್ಕಿಂತ ಹೆಚ್ಚು ಆಕರ್ಷಕವಾಗಿರುವಂತೆ ಕುತೂಹಲಕಾರಿಯಾಗಿರುವಂತೆ ಮತ್ತು ಭಾವ ಪ್ರದರ್ಶನಕ್ಕೆ ಅನುಕೂಲವಾಗುವಂತೆ ಕಡಿಮೆ ಬಣ್ಣ ಉಪಯೋಗಿಸಿಕೊಂಡು ಮಾಡಿಕೊಳ್ಳುವ ಪ್ರಸಾಧನ.

## ನೇರ ಪ್ರಸಾಧನದ ಹಂತಗಳು

ಗುರಿ

ರಂಗದ ಕೃತಕ ಬೆಳಕಿನಿಂದ ಮಾಸಿದಂತೆ ಕಾಣುವ ಚರ್ಮಕ್ಕೆ ತನ್ನ ಪ್ರಾಕೃತಿಕ ಹೊಳಪನ್ನು ನೀಡುವುದು. ಭಾವಪ್ರದರ್ಶನಕ್ಕೆ ಅನುಕೂಲಕರ ವಾಗುವಂತೆ ಕಣ್ಣುಗಳನ್ನು ವಿಶಾಲವಾಗುವಂತೆ ಮಾರ್ಪಡಿಸುವುದು ಮತ್ತು ವಿಶೇಶ ಲಕ್ಷಣಗಳಿಗೆ ಒತ್ತುಕೊಡುವುದು ಪ್ರೇಕ್ಷಕರಿಗೆ ಸ್ಪಷ್ಟವಾಗಿ ಗೋಚರವಾಗುವಂತೆ ಮಾಡುವುದೇ ನೇರಪ್ರಸಾಧನದ ಗುರಿ.

## ಕಾರ್ಯ ವಿಧಾನ

1. ತಣ್ಣನೆಯ ಕ್ರೀಂ ಮುಖಕ್ಕೆ ಹಚ್ಚಿ–ಸವರಿ ನಂತರ ಹೆಚ್ಚಾದ ಕ್ರೀಂ ಅನ್ನು ಹತ್ತಿ ಅಥವಾ ಚೂರು ಬಟ್ಟೆಯಿಂದ ತೆಗೆಯಿರಿ.
2. ನಿಮ್ಮ ವಯಸ್ಸು ಮತ್ತು ಪ್ರಾಕೃತಿಕ ಚರ್ಮದ ಕಾಂತಿಗೆ ಅತೀ ಹತ್ತಿರವಾದ 'ಮೂಲ' ಬಣ್ಣವನ್ನು (foundation) ಹಚ್ಚಿ ನಯವಾಗಿ ಮುಖದ ಎಲ್ಲ ಭಾಗಗಳಿಗೂ ವಿಸ್ತರಿಸಿ. ಕತ್ತು ಮತ್ತು ಕಿವಿಗಳಿಗೆ ಬಣ್ಣ ಹಚ್ಚಲು ಮರೆಯದಿರಿ. ಆದಷ್ಟು ಕಡಿಮೆ ಬಣ್ಣ ಉಪಯೋಗಿಸುವುದರ ಬಗ್ಗೆ ಎಚ್ಚರವಹಿಸಿರಿ.
3. ನಿಮಗೆ ಬೇರೆ ಬಣ್ಣದ ಛಾಯೆ (Shade) ಬೇಕೆನಿಸಿದರೆ ಮೊದಲು ಬೇಕೆನಿಸಿದ ಬಣ್ಣದ ಮಿಶ್ರಣವನ್ನು ಮಾಡಿ ನಿಮ್ಮ ಹಸ್ತದ ಮೇಲೆ ಹಚ್ಚಿ, ಪರೀಕ್ಷಿಸಿ ನಂತರ ಮುಖಕ್ಕೆ ಹಚ್ಚಿಕೊಳ್ಳಿ–ಸರಿಯಾಗಿದೆ ಅನ್ನಿಸಿದಾಗ ಮಾತ್ರ ವಿವರವಾಗಿ ಹಚ್ಚಿಕೊಳ್ಳಿ.
4. ಹಚ್ಚಿಕೊಳ್ಳುವ ಬಣ್ಣ ಹಿತ ಮತ್ತು ಮಿತವಾಗಿ ತೆಳುವಾಗಿ ಇರಬೇಕು.
5. ಕೆನ್ನೆಯ ಮೂಳೆ (Cheek bone)ಗಳ ಸ್ಥಳದಲ್ಲಿ ಆರಿಸಿಕೊಂಡ ಕೆಂಪನ್ನು ಹಚ್ಚಿ ನಂತರ ಇದನ್ನು ವೃತ್ತಾಕಾರವಾಗಿ ಸವರಿ 'ಮೂಲ' ಬಣ್ಣದೊಡನೆ ಹೊಂದಿಕೊಳ್ಳುವಂತೆ ಮಾಡಿ ಮತ್ತು ಈ ಬಣ್ಣದ ಛಾಯೆಯನ್ನು ಕಪಾಳ, ಮೂಗು, ಗಲ್ಲ, ಕಿವಿ ಮುಂತಾದವಕ್ಕೆ ಕೂಡ ವಿಸ್ತರಿಸಿ. ಮತ್ತೆ ಉಪಯೋಗಿಸುವ ಕೆಂಪು ಬಣ್ಣ ಮೂಲದೊಡನೆ ಹದವಾಗಿ ವಿಲೀನವಾಗಬೇಕೆಂಬುದನ್ನು ಮರೆಯದಿರಿ.
6. ಕೊಂಚ ಕೆನ್ನೆಗೆಂಪು ಬಣ್ಣವನ್ನು (Cheek rouge) ಕಣ್ಣು ಗೂಡಿನ ಮೇಲ್ಭಾಗಕ್ಕೆ ಹಚ್ಚಿ. ಈ ಕೆಂಪು ಕೆನ್ನೆಗೆ ಹಚ್ಚಿದ ಕೆಂಪು ಬಣ್ಣಕ್ಕಿಂತ ಕೊಂಚ ಮಂಕಾಗಿರಬೇಕು. ಸಿದ್ಧಪಡಿಸಿದ ಬಣ್ಣದ ಛಾಯೆಯನ್ನು ಕಣ್ಣಿನ ರೆಪ್ಪೆ ಮೇಲ್ಪುಟಿಯ ಮೇಲ್ಭಾಗ ಮೂಗಿನ ಅಕ್ಕಪಕ್ಕ ಮತ್ತು ಕೆಳಗೆ ಮತ್ತು ಕಿವಿಯ ಹಾಲೆ (Ear lobes)ಗೆ ಲೇಪಿಸಿ.
7. ಪೆನ್ಸಿಲ್‌ನಿಂದ ಕೆಳಗಿನ ರೆಪ್ಪೆಯ ಕೆಳಭಾಗದಿಂದ ಪ್ರಾರಂಭವಾಗುವ ತುದಿಯಿಂದ ಕಣ್ಣಿನ ಇನ್ನೊಂದು ತುದಿಯವರೆಗೆ ಒಂದು ಸೂಕ್ಷ್ಮವಾದ ಗೆರೆ ಎಳೆಯಿರಿ. ಈ ಗೆರೆಯನ್ನು ಮೂಲದೊಡನೆ ವಿಲೀನವಾಗುವಂತೆ ಮಾಡಿ. ಈ ಹಂತ ಬಹಳ ನಾಜೂಕಿನ ಕೆಲಸ.
8. ಹಾಗೆ ಕಣ್ಣಿನ ಮೇಲೆ ರೆಪ್ಪೆಯ ಮೇಲೂ ಸೂಕ್ಷ್ಮವಾದ ಗೆರೆ ಎಳೆಯಿರಿ.
9. ಪೆನ್ಸಿಲ್ ಅಥವಾ ಬ್ರಷ್ ಉಪಯೋಗಿಸಿ ನಿಮ್ಮ ಹುಬ್ಬುಗಳಿಗೆ ಒತ್ತು ಕೊಡಿ. ಪೆನ್ಸಿಲ್ ಅಥವಾ ಉಪಯೋಗಿಸುವ ಬಣ್ಣ ನಿಮ್ಮ ಕೂದಲ ಬಣ್ಣಕ್ಕೆ ಹೊಂದುವಂತಿರಬೇಕು. ಹುಬ್ಬುಗಳು ಸಮವಾಗಿರುವುದಿಲ್ಲ (eyes brows are uneven) ಎಂಬುದನ್ನು ಮರೆಯಬೇಡಿ. ಹುಬ್ಬುಗಳು ತಿದ್ದಿದಾಗ ಪ್ರಾಕೃತಿಕ ಸ್ವರೂಪವನ್ನೇ ಅನುಸರಿಸಿರಬೇಕು.
10. ಕೆಂಪು ಬಣ್ಣ ಅಥವಾ ತುಟಿ ಬಣ್ಣ (Lipstick / Lipred) ದಿಂದ ತುಟಿಗಳಿಗೆ ಒತ್ತುಕೊಡಿ. ಇಲ್ಲೂ ಪ್ರಾಕೃತಿಕ ಸ್ವರೂಪವನ್ನು ಮೀರದಂತಿರಬೇಕು.
11. ಕಣ್ಣುಗಳ ಭಾವಪ್ರದರ್ಶನ ವಿಸ್ತರಿಸಲು ಬೇಕೆನಿಸಿದಲ್ಲಿ ಎರಡೂ ಕಣ್ಣುಗಳ ಒಳ ಮೂಲೆಗಳ ಮೇಲೆ ಎರಡು ಕೆಂಪು ಚುಕ್ಕೆಗಳನ್ನು ಇಡಬಹುದು.
12. ಮೂಗಿನ ಹೊಳ್ಳೆಗಳಿಗೆ ತೆಳುವಾಗಿ ಕೆಂಪು ಬಣ್ಣ ಹಚ್ಚಿ.
13. ಪಫ್ ಮೇಲೆ ಪೌಡರ್ ಹಾಕಿ ಹೆಚ್ಚಾದ್ದನ್ನು ಕೊಡವಿ ಗಲ್ಲದಿಂದ ಪ್ರಾರಂಭಿಸಿ ನಿಧಾನವಾಗಿ ಮೇಲ್ಭಾಗಕ್ಕೆ ಚಲಿಸುತ್ತ ಮುಖಕ್ಕೆ ಹದವಾಗಿ ಪೌಡರ್ ಹಚ್ಚಿಕೊಳ್ಳಿ. ಪೌಡರ್ ಸಮನಾಗಿ ಮುಖದ ಎಲ್ಲ ಭಾಗಕ್ಕೂ ಹರಡಿರಬೇಕು.
14. ಅಗತ್ಯಕ್ಕಿಂತ ಹೆಚ್ಚಾದ ಪೌಡರನ್ನು ಮೃದುವಾದ ಬ್ರಷ್ ಉಪಯೋಗಿಸಿ ತೆಗೆಯಿರಿ ಈಗ ನೇರ ಪ್ರಸಾಧನ ಸಂಪೂರ್ಣ.

## ಮಾದರಿ ಮುಖ (Ideal face)

ಲಕ್ಷಣಗಳು

1. ಆರೋಗ್ಯ
2. ಹೊಂದಾಣಿಕೆಯಾದ ಅಂಗಗಳ ಪ್ರಮಾಣ
3. ಸಾಮಾನ್ಯ ಅಂಡಾಕಾರದ ಮುಖ ಅತಿ ಸಣ್ಣದಲ್ಲ ಅಥವಾ ಅತಿ ದಪ್ಪವೂ ಅಲ್ಲ

4. ಕಲೆಗಳಿಲ್ಲದ ಮೃದುವಾದ ಚರ್ಮ


5. ಸಮನಾದ ಬಣ್ಣದ ಚರ್ಮದ ಕಾಂತಿ


6. ನಸುಗೆಂಪು ಅಥವಾ ಗುಲಾಬಿ ಬಣ್ಣದ ಕೆನ್ನೆ

7. ಸಾಮಾನ್ಯ ದೃಷ್ಟಿಕೋನಕ್ಕೆ ತೆರೆದುಕೊಂಡ ವಿಶಾಲವಾದ ನಿರ್ಮಲವಾದ ಕಣ್ಣುಗಳು

8. ಕೆಂದುಟಿ

ಹೊಂದಾಣಿಕೆಯಾದ ಅಂಗದ ಪ್ರಮಾಣದ ಲಕ್ಷಣಗಳು ಮತ್ತು




## ವೈಶಿಷ್ಟ್ಯಗಳು

1. ಅಂಡಾಕಾರದ (Oval) ಮುಖದ ನೇರ ವ್ಯಾಸವನ್ನು (Vertical diameter) ಮೂರು ಸಮ ಭಾಗಗಳಾಗಿ ವಿಭಜಿಸಬಹುದು.

   (a) ಹಣೆಯ ಮೇಲ್ಭಾಗದಿಂದ ಹುಬ್ಬಿನವರೆಗೆ

   (b) ಹುಬ್ಬಿನಿಂದ ಮೂಗಿನ ತುದಿಯವರೆಗೆ

   (c) ಮೂಗಿನ ತುದಿಯಿಂದ ಗಲ್ಲದ ಕೊನೆಯವರೆಗೆ

2. ಅಂಡಾಕಾರದ ಮುಖ ಸಮತಟ್ಟಾದ ವ್ಯಾಸವನ್ನು (Horizontal Diameter) ಐದು ಸಮಭಾಗಗಳಾಗಿ ವಿಭಜಿಸಬಹುದು. ಈ ರೀತಿ ವಿಭಜಿಸಲ್ಪಟ್ಟ ಪ್ರತಿಯೊಂದು ಭಾಗಗಳೂ ಒಂದು ಕಣ್ಣಿನ ಅಗಲಕ್ಕೆ ಸಮನಾಗಿರುತ್ತದೆ.

3. ಕಣ್ಣಿನ ಅಗಲಕ್ಕಿಂತ ಸ್ವಲ್ಪವೇ ಹೆಚ್ಚಾದ ಸುಂದರವಾಗಿ ಬಾಗಿಕೊಂಡ ಬಾಯಿ

4. ನೇರವಾದ ಮೂಗು

5. ಸಮನಾದ, ಒಂದು ಕಣ್ಣಿನಗಲದ ವಿಶಾಲವಾದ ಕಣ್ಣುಗಳು

6. ಕುಗ್ಗಿಲ್ಲದ ಕಣ್ಣಿನ ಗೂಡು

7. ಹತ್ತಿರವಾದಂತಿರುವ ಕೊಂಚವೇ ಬಾಗಿರುವ ಕಮಾನಿನಂತಹ ಹುಬ್ಬುಗಳು.

ಈಗ ಮೇಲಿನಂಶಗಳನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ಮುಖವನ್ನು ನೀವೇ ಪರೀಕ್ಷಿಸಿ. ಅದು ಮಾದರಿ ಮುಖವೇ ಎಂಬುದನ್ನು ನೀವೇ ಗುರುತಿಸಿಕೊಳ್ಳಿ.

## ಗುಣಾತ್ಮಕ (ಅನುಗುಣ) ಪ್ರಸಾಧನ (Character Make-up)

ವಯಸ್ಸಿನ ಪ್ರಭಾವವನ್ನು ಗುಣಾತ್ಮಕ ಪ್ರಸಾಧನದಿಂದ ರೂಪಿಸುವ ಮೊದಲು ನಿಜ ಜೀವನದಲ್ಲಿ ಮುಖದ ಮೇಲಾಗುವ ಕಾಲದ ಪರಿಣಾಮವನ್ನು ಒಂದು ಕ್ಷಣ ಯೋಚಿಸೋಣ. ಕಾಲಕಾಲಕ್ಕೆ ಮನುಷ್ಯನ ಮುಖದಲ್ಲಾಗುವ ಬದಲಾವಣೆಗಳನ್ನು ಖಚಿತವಾಗಿ ಗುರುತಿಸುವುದು ಬಹಳ ಕಷ್ಟಕರವಾದ ಕೆಲಸ.

ಜೀವನದಲ್ಲಿ ಬಹಳ ಸಂಕಷ್ಟಗಳನ್ನು ಅನುಭವಿಸಿದ 30 ವರ್ಷದ ಯುವಕ ಅವನ ವಯಸ್ಸಿಗಿಂತ ಹೆಚ್ಚು ವಯಸ್ಸಾದವನಂತೆ ಕಾಣುತ್ತಾನೆ. ಅದೇ ರೀತಿ ಯಾವರೀತಿಯಲ್ಲೂ ಏರು ಪೇರಿಲ್ಲದ ಜೀವನ ಸಾಗಿಸಿದ 50 ವರ್ಷದ ವ್ಯಕ್ತಿ ತನ್ನ ವಯಸ್ಸಿಗಿಂತ ಚಿಕ್ಕ ವಯಸ್ಸಿನವನಂತೆ ಕಾಣಬಹುದು. ಹಲವು ಸಂಪುಟಗಳನ್ನು ಬರೆದು ಹೊರತಂದರೂ ಎಲ್ಲ ತರಹದ ವ್ಯಕ್ತಿಗಳಲ್ಲಾಗಬಹುದಾದ ಬದಲಾವಣೆಗಳನ್ನು ವಿವರಿಸುವುದು ಅಸಾಧ್ಯ. ಆದ್ದರಿಂದ 35 ರಿಂದ 60 ವರ್ಷದ ವಯಸ್ಸಿನವರ ಪ್ರಸಾಧನದ ಬಗೆಗೆ ಸಾಮಾನ್ಯ ಸೂಚನೆಗಳನ್ನು ನಾವು ಪರಿಶೀಲಿಸಬಹುದು.

ಯೌವ್ವನದಲ್ಲಿ ಚರ್ಮ ದೃಢ, ಮಾಂಸಭರಿತ ಮತ್ತು ಸಾಕಷ್ಟು ಸ್ಥಿತಿ ಸ್ಥಾಪಕವಾಗಿರುತ್ತದೆ. ಆದರೆ ವಯಸ್ಸಾದಂತೆ ಚರ್ಮ ತನ್ನ ದೃಢತೆಯನ್ನು ಕಳೆದುಕೊಳ್ಳುತ್ತದೆ. ತಲೆ ಬುರುಡೆಗೆ ಬಿಗಿಯಾಗಿ ಅಂಟಿಕೊಂಡಿದ್ದ ಚರ್ಮ ಅಳ್ಳಕವಾಗುತ್ತದೆ. ಮತ್ತೆ ಈ ಕಾರಣದಿಂದ ಮೂಳೆಯ ಹದರದಿಂದ ಜೋತಾಡಲು ಪ್ರಾರಂಭವಾಗುತ್ತದೆ. ಸುಕ್ಕುಗಟ್ಟುತ್ತದೆ. ಈ ಹಂತದಲ್ಲೇ ವಯಸ್ಸಿನ ಗೆರೆಗಳು ಗುಳಿಗಳು ಮತ್ತು ಜೋತುಬೀಳುವ ದವಡೆ ಕಾಣಬರುತ್ತದೆ. ಯೌವ್ವನದಲ್ಲಿದ್ದ ಚರ್ಮದ ರಕ್ತಭರಿತ ಕಾಂತಿ ಕಡಿಮೆಯಾಗಿ ಕಪ್ಪುಬಣ್ಣ ಅಥವಾ ಬಿಳಿಚಿಕೊಳ್ಳಬಹುದು.

ಎಷ್ಟೋ ಬಾರಿ ಯಥಾವತ್ತಾದ ಪ್ರಸಾಧನ ಮಾಡಿಕೊಂಡು (Straight make-up) ಅದರ ಮೇಲೆ ದಪ್ಪಗಿನ ಕಪ್ಪಾದ ಗೆರೆಗಳನ್ನು ಎಳೆದುಕೊಂಡು ಚಾರಿತ್ರಿಕ ಪಾತ್ರಗಳನ್ನು ಹವ್ಯಾಸಿಗಳನೇಕರು ಮಾಡುವುದನ್ನು ನಾನು ನೋಡಿದ್ದೇನೆ. ಇದರಿಂದಾಗುವ ಪರಿಣಾಮವನ್ನು ಆ ನಟ ಪ್ರೇಕ್ಷಕರ ದೃಷ್ಟಿಯಿಂದ ನೋಡಬೇಕೆಂಬುದನ್ನು ನಾನು ಇಚ್ಛಿಸುತ್ತೇನೆ. ಖಂಡಿತವಾಗಿಯೂ ವಯಸ್ಸು-ಗೆರೆಗಳು ರೂಪುಗೊಳ್ಳಲು ಕಾರಣವಾಗುತ್ತದೆ ನಿಜ. ಆದರೆ ಈ ಗೆರೆಗಳು ಬಹಳ ಸೂಕ್ಷ್ಮ. ಸಾಧಾರಣವಾಗಿ ಕೂದಲಿಗಿಂತ ತೆಳು ಮತ್ತು ದೂರದಿಂದ ನೋಡಿದಾಗ ಅಗೋಚರ.

ಕುಳಿಗಳು (Hollows) ಛಾಯೆಗಳು (Shadows) ಮತ್ತು ವೈಭವಗೊಂಡ (Highlighted) ಬಣ್ಣಗಳಿಂದ ಮುಖದ ಭಾಗಗಳಿಗೆ ಮಾಡುವ ಪ್ರಸಾಧನದಿಂದ ವಯಸ್ಸಾದ ಕಲ್ಪನೆಯನ್ನು ತೃಪ್ತಿಕರವಾಗಿ ಮೂಡಿಸಬಹುದು.

ಗುಣಾತ್ಮಕ ಪ್ರಸಾಧನವನ್ನು ಮಾಡಿಕೊಳ್ಳುವ ಅಥವಾ ಪ್ರಾರಂಭಿಸುವ ಮೊದಲು ಆದಷ್ಟು ಸಾದಾ ಮತ್ತು ಆಕಾರರಹಿತವಾಗುವಂತೆ 'ಮೂಲ'ವನ್ನು ಹಚ್ಚಿಕೊಳ್ಳಬೇಕು.

ಹಾಗೆ ಮಾಡಿಕೊಂಡಾಗ ಅದು ಭಾವಚಿತ್ರ ರೂಪಿಸುವುದಕ್ಕಿಂತ ಮುಂಚೆ ಕಲಾವಿದನ ಕ್ಯಾನ್‌ವಾಸ್ ಬಟ್ಟೆಯಂತಿರಬೇಕು.

ಕಣ್ಣುಗಳು, ಮೂಗು ಮತ್ತು ಬಾಯಿ ಮುಂತಾದವುಗಳ ಮೂಲಭೂತ ಸ್ಥಳಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ ನಮ್ಮ ಇಚ್ಛೆಗನುಗುಣವಾಗಿ ಇವುಗಳ ರೂಪ ಮತ್ತು ಆಕಾರಗಳನ್ನು ಬದಲಾಯಿಸಿಕೊಳ್ಳಬಹುದು. ಬಟ್ಟೆ, ಕೇಶವಿನ್ಯಾಸ, ಮುಖ ಭಾವಾಭಿವ್ಯಕ್ತಿ ಮತ್ತು ಇವೆಲ್ಲಕ್ಕಿಂತ ಹೆಚ್ಚಾಗಿ 'ಪಾತ್ರವನ್ನು ಅನುಭವಿಸುವ' ಸ್ಥಿತಿ. ಇವು ಬಣ್ಣಕ್ಕಿಂತ ಹೆಚ್ಚಿನದನ್ನು ಸಾಧಿಸುತ್ತದೆ. ಚಾರಿತ್ರ್ಯ ಪಾತ್ರವನ್ನು ನಿರ್ವಹಿಸುವ ಸಂದರ್ಭದಲ್ಲಿ ನೆನೆಪಿನಲ್ಲಿಟ್ಟುಕೊಳ್ಳಬೇಕು.


ಪ್ರಸಾಧನ ಕಲಾವಿದನಾಗಿ ನಾನೇ ಪ್ರಸಾಧನದ ಉಪಯೋಗವನ್ನು ತೆಗಳುತ್ತಿಲ್ಲ. ಪ್ರಸಾಧನ ತನ್ನೆಲ್ಲ ಪ್ರಕಾಶ ಮಾನತೆಯಲ್ಲೂ ಸಹ ಒಂದು ಸಹಾಯಕ ಪಾತ್ರ ಮಾತ್ರ ವಹಿಸುತ್ತದೆ (Helpful).

ಪಾತ್ರವನ್ನು ಸರಿಯಾಗಿ ಅನುಭವಿಸದಿದ್ದರೆ ಮತ್ತು ಮುಖದ ಅಭಿವ್ಯಕ್ತಿ ಸಮರ್ಪಕವಾಗಿರದಿದ್ದರೆ ಪ್ರೇಕ್ಷಕನದೃಷ್ಟಿಯಿಂದ ಉತ್ತಮ ಪ್ರಸಾಧನ ಕೂಡ ನಿರರ್ಥಕ.

ಪ್ರಸಾಧನ ಕಲಾವಿದ 'ಗಮನಿಸುವ' (Observation) ಶಕ್ತಿಯನ್ನು ವೃದ್ಧಿಸಿಕೊಳ್ಳುತ್ತಾ ಹೋಗಬೇಕು, ಉದಾಹರಣೆಗೆ ನೀವು ದಿನನಿತ್ಯ ಪ್ರಯಾಣ ಮಾಡುವ ಬಸ್ಸಿನಲ್ಲಿ ನಿಮ್ಮ ಬಳಿ ಅಥವಾ ಮುಂದೆ ಕುಳಿತಿರುವ ವ್ಯಕ್ತಿಗಳ ಮುಖಗಳನ್ನು ಗಮನಿಸಿ. ಎಷ್ಟೊಂದು ವಿಧ ವಿಧವಾದ ಮುಖಗಳು ಅಲ್ಲವೇ ? ಚರ್ಮದ ಜೋತು ಬೀಳುವಿಕೆ, ಕುಳಿಗಳು ಅದರಿಂದ ಉಂಟಾದ ಆಳವಾದ ಅಥವಾ ನವಿರಾದ ಗೆರೆಗಳು, ಕಣ್ಣುಗಳ ಕೆಳಗೆ ಮೂಡಿರುವ ಛಾಯೆ ಹೀಗೆ ಹಲವಾರು. ಇವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ. ಒಬ್ಬ ಪ್ರಾಮಾಣಿಕ ಕಲಾವಿದನನ್ನು ಬಳಲಿಸುವ ಈ ಕಾರ್ಯ ಖಂಡಿತವಾಗಿಯೂ ಉಪಯುಕ್ತವಾದ ಕುತೂಹಲಕಾರಿಯದ ಅಭ್ಯಾಸ. ಅಲ್ಲದೆ ಕಲಾ ಪ್ರದರ್ಶನಗಳನ್ನು, ಕಲಾಕೇಂದ್ರಗಳನ್ನು ಭೇಟಿಮಾಡಿ ಅಲ್ಲಿ ಪ್ರದರ್ಶಿಸಿರುವ ಕಲಾಕೃತಿಗಳಲ್ಲಿನ ವ್ಯಕ್ತಿ '(Portrait)' ಚಿತ್ರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಅಭ್ಯಾಸಮಾಡಿ. ಚರ್ಮ, ಕುಳಿ ಮತ್ತು ಮೂಳೆಯ ಉಬ್ಬು ತಗ್ಗುಗಳನ್ನು ಕಲಾವಿದ ಹೇಗೆ ಬಣ್ಣದ ವಿಧವಿಧವಾದ ಕಾಂತಿಯಿಂದ ಕಲಾವಿದ ಚಿತ್ರಕಾರ ಸಾಧಿಸಿದ್ದಾನೆಂಬುದನ್ನು ಗಮನಿಸುವುದು ಒಳ್ಳೆಯದು.

ನಿಮ್ಮ ಗುಣಾತ್ಮಕ ಪ್ರಸಾಧನ ನಿಮ್ಮದೇ ಆಗಿರಲಿ ಇನ್ನೊಬ್ಬರ ಪ್ರಸಾಧನವನ್ನು ನಕಲು (Copy) ಮಾಡುವುದೂ ಅಥವಾ ಅನುಕರಿಸುವುದೂ ಸರಿಯಲ್ಲ.


## 60 ವರ್ಷ ವಯಸ್ಸಿನ ವೃದ್ಧನ ಪ್ರಸಾಧನ ಮಾಡುವ ವಿಧಾನ



1. ಮೊದಲು ಮುಖವನ್ನು ಚೊಕ್ಕಟವಾಗಿ ತೊಳೆದಿರಬೇಕು.
2. ನಂತರ ನೇರ ಪ್ರಸಾಧನದಲ್ಲಿ ಮಾಡುವಂತೆ ನವಿರಾಗಿ ತಂಪುಕೆನೆಯನ್ನು (Cold cream) ಹಚ್ಚಿ ನಂತರ ಬಟ್ಟೆಯ ತುಂಡು ಅಥವಾ ಹತ್ತಿಯಿಂದ ಒರೆಸಿ.
3. ಪಾತ್ರಕ್ಕೆ ತಕ್ಕಂತೆ 'ಮೂಲ'ದ ಛಾಯೆ (Shade)ಯನ್ನು ಗುರುತಿಸಿರಿ. ನಂತರ 'ಮೂಲ'ವನ್ನು ವೃತ್ತಾಕಾರದ ಚಲನೆಯಿಂದ ಮುಖದ ತುಂಬಾನವಿರಾಗಿ ಲೇಪಿಸಿ. ಆದರೂ ಉಪಯೋಗಿಸಬೇಕಾದ 'ಮೂಲ' ಅತಿಕಮ್ಮಿ ಕಿವಿ, ಕತ್ತು, ಗಲ್ಲ ಇವುಗಳನ್ನು ಮರೆಯಬೇಡಿ.
4. ಕಂದು ಬಣ್ಣ (Brown)ವನ್ನು ಉಪಯೋಗಿಸಿ ಕೆನ್ನೆಗಳ ಕೆಳಭಾಗದಲ್ಲಿ ಛಾಯೆಯನ್ನು (Shadow) ನಿರ್ಮಿಸಿರಿ. ಇದನ್ನು ದವಡೆಯ ರೇಖೆಯೊಡನೆ (Jaw line) ವಿಲೀನಗೊಳಿಸಿ. ಛಾಯೆ ಮತ್ತು ವೈಭವೀಕರಿಸುವ ರೇಖೆಗಳಿಂದ ಮುಖದ ಸಾಮಾನ್ಯ ಆಕಾರವನ್ನು ರೂಪಿಸಿ
5. ಎರಡೂ ಮೂಗಿನ ಹೊಳ್ಳೆಯ ತುದಿಯಿಂದ ಹೊರಟು ಬಾಯಿಯ ತುದಿಯವರೆಗೆ ಹಬ್ಬಿಕೊಂಡ ನಗೆಯ ಗೆರೆಗಳನ್ನು ಗುರುತಿಸಿ. ಇದನ್ನು ನೇರಳೆ ಬಣ್ಣ ಅಥವಾ ಹುಬ್ಬಿಗೆ ಹಚ್ಚುವ ಕಂದು ಬಣ್ಣದ ಪೆನ್ಸಿಲ್‌ನಿಂದ ಮಾಡಬಹುದು. ಎಳೆದನಂತರ ಬೆರಳಿನ ತುದಿಯಿಂದ ಈ ಗೆರೆಗಳನ್ನು ಮೃದುಗೊಳಿಸಿ ಕೊನೆಯಭಾಗ ಮೂಲದೊಡನೆ ವಿಲೀನವಾಗುವಂತೆ ಮಾಡಿ. ನಂತರ ಕಣ್ಣಿನ ಕುಳಿಗೆ ರೂಪಕೊಡುವ ಮೂಳೆಯ ಮೇಲ್ತುದಿ ಸಿಗುವವರೆಗೂ ಕಣ್ಣಿನ ಕೆಳಗಿನ ಚರ್ಮವನ್ನು ತಡವುತ್ತಾ ಹೋಗಿ ನಮಗೆ ವಯಸ್ಸಾದಂತೆ ಕಣ್ಣಿನ ಕೆಳಗಿನ ಕುಳಿ ಅಥವಾ ಚರ್ಮದ ಚೀಲಗಳು ಉತ್ಪತ್ತಿಯಾಗಿ ನಂತರ ಮೂಳೆಯಿಂದ ರೂಪ ಆಕಾರಗಳನ್ನು ತಾಳುತ್ತವೆ. ನೇರಳೆ ಅಥವಾ ಕಂದು ಬಣ್ಣದಿಂದ ಕುಳಿ ಮತ್ತು ಛಾಯೆಗಳನ್ನು ಮಾಡಿ, ಮೂಳೆಯನ್ನು ಗುರುತಿಸಿ, ಛಾಯೆಗಳನ್ನು 'ಮೂಲ'ದೊಡನೆ ವಿಲೀನಗೊಳಿಸಿ.

ನೋವು ನಿರಾಶೆ, ಹಲ್ಲುಬಿರುದು ನಕ್ಕಾಗ ಅಥವಾ ಕಣ್ಣುಗಳನ್ನು ಮೇಲೆ ಕೆಳಗೆ–ಮತ್ತು ತಿರುಗಿಸಿದಾಗ ಕಣ್ಣಿನ ಕೆಳಗೆ ಅಥವಾ ಮೂಗಿನ ಪಕ್ಕದಲ್ಲಿ ಮೂಡುವ ಗೆರೆಗಳನ್ನು ಮುಖದ ಮಾಂಸಖಂಡಗಳನ್ನಾಡಿಸಿ ಗುರುತಿಸಿ. ಹುಬ್ಬುಗಳ ನಡುವೆ ಮೂಡುವ ಗಂಟಿನ ಗೆರೆಗಳನ್ನು ಸಹಗುರುತಿಸಿ ನಂತರ ಬೆರಳಿನ ತುದಿಯಿಂದ ಈ ಗೆರೆಗಳನ್ನು ಮೃದುಮಾಡಿ. ನೀವು ನಕ್ಕಾಗ ಅಥವಾ ಅತ್ತಾಗ ಕಣ್ಣಿಗ ಹೊರಗಿನ ಮೂಲೆಗಳಲ್ಲಿ ಕೋಳಿಕಾಲಿನಂತೆ ಮೂಡುವ ಸಣ್ಣ ಸಣ್ಣ ಗೆರೆಗಳು ಅತಿ ಸೂಕ್ಷ್ಮವಾದವು. ಪಾತ್ರದ ವಯಸ್ಸಿಗೆ ತಕ್ಕಂತೆ ಮತ್ತು ಗುಣಕ್ಕನುಗುಣವಾಗಿ ಹಣೆಯ ಮೇಲೆ ಮಾಡುವ ವಯಸ್ಸಿನ ಗೆರೆಗಳನ್ನು ರೂಪಿಸಿ ಇದೇ ರೀತಿ ಗಲ್ಲದ ಕೆಳಗೆ, ತುಟಿ, ಕತ್ತು ಮುಂತಾದ ಅಂಗಗಳಲ್ಲೂ ಗೆರೆಗಳನ್ನು.

6. ವೈಭವೀಕರಣ (Highlighting)




ಪ್ರತಿಯೊಂದು ವಯಸ್ಸಿನ ಗೆರೆಗಳನ್ನು ಅಥವಾ ಛಾಯೆಗಳನ್ನು ವೈಭವೀಕರಿಸಬೇಕು. ಚರ್ಮ ಕುಗ್ಗಿದಾಗ ಅದರ ಸಮೀಪದ ಮೇಲಿನ ಭಾಗದಲ್ಲಿ ಚರ್ಮದ ಚಿಕ್ಕ ಶ್ರೇಣಿಗಳು ಬೆಳಕನ್ನು ಸೆಳೆಯುತ್ತವೆ. ಆದರೆ ಕುಗ್ಗಿದ ಭಾಗಗಳು ಬೆಳಕನ್ನು ಸೆಳೆಯುವುದಿಲ್ಲ.

ವೈಭವೀಕರಣಕ್ಕೆ ಉಪಯೋಗಿಸುವ ಬಣ್ಣ ಬಿಳಿ ಮತ್ತು ಸ್ವಲ್ಪ ಹಳದೀ ಸೇರಿದ ಮಿಶ್ರಣ.

ಕೋಳಿ ಕಾಲಿನ ಗೆರೆಗಳನ್ನು ಬಿಟ್ಟು ಉಳಿದೆಲ್ಲ ಗೆರೆಗಳ ಮೇಲಿನ ಪಕ್ಕದಲ್ಲಿ ವೈಭವೀಕರಣ ಮೂಡಿಸಿ ನಂತರ ಬೆರಳಿನ ತುದಿಯಿಂದ ಮೃದುಮಾಡಿ 'ಮೂಲ' ದೊಡನೆ ಸೇರಿಸಿ.

7. ಈಗ ಪಾತ್ರದ ಚರ್ಮದ ಬಣ್ಣಕ್ಕೆ ತಕ್ಕಂತಹ ಪೌಡರನ್ನು ಧಾರಾಳವಾಗಿ ಮುಖಕ್ಕೆ ಹಚ್ಚಿ. ಉಪಯೋಗಿಸುವ ಪೌಡರ್ ಮೂಲ ಬಣ್ಣಕ್ಕಿಂತ ಕಮ್ಮಿ ಬಣ್ಣದ್ದಾಗಿರಬೇಕು, ಆಮೇಲೆ ಮೃದುವಾದ ಬ್ರಷ್‌ನಿಂದ ಅಗತ್ಯಕ್ಕಿಂತ ಹೆಚ್ಚಾದ ಪೌಡರ್ ತೆಗೆಯಿರಿ.

8. ಗೋಜಲು ಗೋಜಲಾಗಿ ಆದರೆ ಮೃದುವಾಗಿ ಬೂದಿ ಬಣ್ಣ ಅಥವಾ ಬಿಳಿಯ ಬಣ್ಣವನ್ನು ಹುಬ್ಬಿನ ಮೇಲೆ ಬಳಿಯಿರಿ. ಪೊದೆಯಾಗಿರುವ ಹುಬ್ಬಿನ ಪರಿಣಾಮ ಬೇಕೆಂದರೆ ಕೂದಲು ಬೆಳೆಯುವ ವಿರುದ್ಧ ದಿಕ್ಕಿನಲ್ಲಿ ಬ್ರಷ್ ಉಪಯೋಗಿಸಿ.

9. ನೀವು ವಿಗ್ ಅಥವಾ ಟೋಫನ್ ಉಪಯೋಗಿಸಬೇಕಾದಲ್ಲಿ ಸರಿಯಾಗಿ ಹೊಂದಿಸಿ ಅದನ್ನು ಜಾರದಂತೆ ಕೂಡಿಸಿ.

10. ನೀವು ವಿಗ್ ಉಪಯೋಗಿಸದಿದ್ದರೆ ಕೂದಲನ್ನು ಬೇಕಾದ ಆಕಾರಕ್ಕೆ ಬಾಚಿ ನಂತರ ನೆರೆತ ಕೂದಲಿನ ಪರಿಣಾಮಕ್ಕೆ ಹಣೆ ಮೇಲಿನ ಮತ್ತು ಕಪಾಲ, ಕಿವಿಗಳ ಮೇಲಿನ ಕೂದಲಿಗೆ ಬಿಳಿ ಪೌಡರ್ ಹಚ್ಚಿ. ತಲೆಯ ಕೂದಲ ಮೇಲೂ ಗೋಜಲು ಗೋಜಲಾದ ಬಿಳಿ ಬಣ್ಣದ ಗೆರೆಗಳನ್ನು ಎಳೆಯಿರಿ. ಜಿಂಕ್ ಆಕ್ಸೈಡ್ (Zinc oxide) ಬಿಳಿ ಬಣ್ಣವನ್ನು ನೀರಿನಲ್ಲಿ ಕಲಸಿ ಈ ನೆರೆತ ಕೂದಲನ್ನು ಮಾಡಬಹುದು. ಒಣಗಿದ ನಂತರ ಅಗಲವಾದ ಹಲ್ಲುಗಳಿರುವ ಬಾಚಣಿಗೆಯಿಂದ ನವಿರಾಗಿ ಬಾಚಿ ಇದು ನಿಮಗೆ ವಯಸ್ಸಾದ ಮುಖ ಚರ್ಯೆಯನ್ನು ಅತ್ಯಂತ ಪ್ರಭಾವವಾಗಿ ರೂಪಿಸುತ್ತದೆ.

11. ಕೈಗಳಿಗೂ ಬಣ್ಣವನ್ನು ನವಿರಾಗಿ ಹಚ್ಚಲು ಮರೆಯದಿರಿ. ಕೈಗಳೂ ಸಹ ವೃದ್ಧಾಪ್ಯದ ಕಳೆ ಹೊಂದಿರಬೇಕು. ಬೆರಳಿನ ಗಿಣ್ಣುಗಳನ್ನೂ, ರಕ್ತನಾಳಗಳನ್ನು, ವೈಭವೀಕರಿಸಿ. ಬೆರಳಿನ ಒಳಭಾಗಗಳಿಗೆ ಚೊಕ್ಕವಾದ ಛಾಯೆ ಬರಿಸಿದಾಗ ಸೊರಗಿಹೋದ ಕೈಗಳಂತೆ ಕಾಣುತ್ತದೆ.

## ಮೀಸೆ-ಗಡ್ಡಗಳು

ಎಷ್ಟೆಂದರೂ ಇವು ಕೃತಕ, ಮೀಸೆ, ಗಡ್ಡಗಳ ಆಕಾರ ಉದ್ದ ಬಣ್ಣ ಹಲವು ವಿಧ. ಆದ್ದರಿಂದ ಪ್ರಸಾಧನ ಕಲಾವಿದ ನಿತ್ಯ ಜೀವನದಲ್ಲಿ ಕಂಡು ಬರುವ ಹಲವಾರು ವ್ಯಕ್ತಿಗಳ ಗಡ್ಡ-ಮೀಸೆ-ಬೋಳುತಲೆ-ಬಕ್ಕತಲೆ ಇವುಗಳನ್ನು ಸೂಕ್ಷ್ಮವಾಗಿ ಗಮನಿಸುವುದಲ್ಲದೆ ಅವುಗಳ ಚಿತ್ರಗಳನ್ನು ಬರೆದಿಟ್ಟುಕೊಳ್ಳುವುದಲ್ಲದೆ, ಹಲವಾರು ಜಾಹಿರಾತುಗಳಲ್ಲಿ, ವೃತ್ತ ಪತ್ರಿಕೆಗಳಲ್ಲಿ, ನಿಯತಕಾಲಿಕಗಳಲ್ಲಿ ಬರುವ ಉಪಯುಕ್ತ ಚಿತ್ರಗಳನ್ನು ಕತ್ತರಿಸಿ ಒಂದು ಪುಸ್ತಕದಲ್ಲಿ ಅಂಟಿಸಿ ಇಟ್ಟುಕೊಳ್ಳುವುದು ಒಳ್ಳೆಯದು.

## ಮೀಸೆ ಗಡ್ಡಗಳಲ್ಲಿ ಎರಡು ವಿಧ

ಸಿದ್ಧಪಡಿಸಿದ ಮೀಸೆ-ಗಡ್ಡಗಳು ಬಲೆಯ ಮೇಲೆ ಹೊಂದಿಸಿರುವುದು ಮಾರುಕಟ್ಟೆಯಲ್ಲಿ ಸಿಗುತ್ತದೆ. ಆದರೆ ಅವುಗಳ ಬೆಲೆಯು ದುಬಾರಿ ಮತ್ತು ನಮ್ಮ ಮುಖಕ್ಕೆ, ಪಾತ್ರಕ್ಕೆ ಹೊಂದದೇ ಹೋಗಬಹುದು.

ಆದ್ದರಿಂದ ಕ್ರೇಪ್ ಹೇರ್ ಬಳಸಿ ನಮ್ಮ ಕೂದಲ ಬಣ್ಣಕ್ಕೆ ಮತ್ತು ಮುಖದ ಆಕಾರಕ್ಕೆ, ಪಾತ್ರಕ್ಕೆ ತಕ್ಕಂತೆ ಸುಲಭವಾಗಿ ತಯಾರಿಸಿಕೊಳ್ಳಬಹುದು. ಅದೂ ಕಡಿಮೆ ಖರ್ಚಿನಲ್ಲಿ ಹಾಗೂ ಒಂದೇ ನಾಟಕದ ಹಲವಾರು ಪ್ರದರ್ಶನಗಳು ಇದ್ದಲ್ಲಿ ಪಾತ್ರಕ್ಕೆ ತಕ್ಕಂತೆ ಗಡ್ಡ ಮೀಸೆಗಳನ್ನು ಚಿತ್ರಿಸಿ ವಿಗ್ ತಯಾರಿಕರಿಂದ ಮಾಡಿಸಿಟ್ಟುಕೊಂಡು ಧರಿಸಿಕೊಳ್ಳಬಹುದು. ಇನ್ನೊಂದು ಪ್ರಶ್ನೆ ಎಂದರೆ. ನಾವೇ ಮೀಸೆ ಗಡ್ಡಗಳನ್ನು ಬೆಳೆಸಿದರೆ ಹೇಗೆ? ಸಾಧ್ಯವೇ ?. ಪಾತ್ರಕ್ಕೆತಕ್ಕಂತೆ -ಅದು ಹಲವಾರು ಪಾತ್ರಗಳಿಗೆ ತಕ್ಕಂತೆ ನಮ್ಮ ಮುಖದಲ್ಲಿ ಗಡ್ಡ ಮೀಸೆಗಳ 'ಬೆಳೆ' ಸಾಧ್ಯವೇ ಇಲ್ಲ !

ಆದ್ದರಿಂದ ಕೃತಕ ಮೀಸೆ-ಗಡ್ಡಗಳಿಗೆ ಮೊರೆಹೋಗಲೇ ಬೇಕು.

## ಕ್ರೇಪ್ ಹೇರ್‌ನಲ್ಲಿ ಮೀಸೆ ತಯಾರಿಸುವ ವಿಧಾನ

ಕ್ರೇಪ್ ಹೇರ್ ಗುಂಗೂರಾಗಿರುವ ಉಣ್ಣೆ. ಅದನ್ನು ಜಡೆಯಂತೆ ಹೆಣೆದಿರುತ್ತಾರೆ.

1. ಮೊದಲು ದಾರದೊಂದಿಗೆ ಹೆಣೆದುಕೊಂಡಿರುವ ಕ್ರೇಪ್ ಹೇರ್‌ನ್ನು ಬೇಕಾದಷ್ಟನ್ನು ದಾರದಿಂದ ಬಿಡಿಸಿ.
2. ತಿರುಚಿಕೊಂಡಿರುವುದನ್ನು ಹೋಗಲಾಡಿಸಲು ಅದನ್ನು ನೀರಿನಲ್ಲಿ ನೆನೆಸಿ.
3. ಒಣಗಿದ ನಂತರ ಒಂದು ಸೀಸೆಗೆ ಬಿಗಿಯಾಗಿ ಸುತ್ತಿಡಿ.
4. ನಂತರ ಅಗತ್ಯಕ್ಕೆ ಬೇಕಾಗುವಷ್ಟು ಕ್ರೇಪ್ ಹೇರ್ ಕತ್ತರಿಸಿಕೊಳ್ಳಿ ಅದನ್ನು ಎರಡು ಪಕ್ಕಗಳಿಂದ ಹತ್ತಿಯನ್ನು ಬಿಡಿಸುವ ಹಾಗೆ ಓಂಜಿ ಎಳೆಯಿರಿ.

5. ಪಸ್ತಗಳ ಮಧ್ಯೆ ಉರುಟಿನ ಅದು ಮಧ್ಯದಲ್ಲಿ ದಪ್ಪವಾಗಿಯೂ ಅಂಚಿನಲ್ಲಿ ಹೆಣೆದಂತೆಯೂ ಇರಬೇಕು.

6. ಈಗ ದೊರತ ಮೀಸೆಯ ದಪ್ಪ ಆಕಾರದ ಕ್ರೇಪ್ ಹೇರನ್ನು ಮಧ್ಯದಲ್ಲಿ ಅರ್ಧ ಭಾಗಕ್ಕೆ ಕತ್ತರಿಸಿ, ಎರಡು ತುಂಡುಮಾಡಿ.

7. ಮೀಸೆ ಇರಬೇಕಾದ ಜಾಗದಲ್ಲಿ ಯಾವ ಬಣ್ಣವೂ ಇರದಂತೆ ಮುಖದ ಮೇಲ್ಪುಟಿಸ ಭಾಗವನ್ನು ಒರೆಸಿ ಶುದ್ಧ ಮಾಡಿ.

8. ಈ ಜಾಗಕ್ಕೆ ಅಳತೆಗೆ ತಕ್ಕಂತೆ ಸ್ಪಿರಿಟ್‌ಗಂನ್ನು ಬ್ರಷ್‌ನಿಂದ ತೆಳುವಾಗಿ ಬಳೆಯಿರಿ. ಕೆಲವು ಕ್ಷಣಗಳ ನಂತರ ಮತ್ತೊಮ್ಮೆ ಸ್ಪಿರಿಟ್ ಗಂ ಬಳೆಯಿರಿ.

9. ಕ್ರೇಪ್ ಹೇರ್ ತುಂಡುಗಳನ್ನು ಹೆಬ್ಬೆರಳು ಮತ್ತು ತೋರು ಬೆರಳುಗಳ ಮಧ್ಯದಲ್ಲಿ ಹಿಡಿದು ಮೃದುವಾಗಿ ಹೆಬ್ಬೆರಳಿನಿಂದ ಮೇಲಿನ ಪದರಗಳನ್ನು ಜರುಗಿಸಿ. ಜರುಗಿಸಿದಾಗ ಚಿತ್ರದಲ್ಲಿ ಕಾಣಿಸಿರುವಂತಿರಬೇಕು.

10. ಹೀಗೆ ಮಾಡಿದ ತುಂಡಾಗಳನ್ನು ಸ್ಪಿರಿಟ್ ಗಂ ಹಚ್ಚಿದ ಮೇಲ್ತುಟಿಯ ಭಾಗಕ್ಕೆ ಮೂಗಿನ ತಳದಲ್ಲಿ ಅಂಟಿಸಿ. ಈಗಲೇ ಒತ್ತಿಹಿಡಿಯದಂತೆ ಎಚ್ಚರಿಕೆ ವಹಿಸಬೇಕು.

11. ನಂತರ ಒಂದು ತೊಯ್ದು ಹಿಂಡಿದ ಬಟ್ಟೆಯ ತುಂಡಿನಿಂದ ಕ್ರೇಪ್ ಹೇರ್ ಒತ್ತಿ ಹಿಡಿಯಿರಿ.

ಎಚ್ಚರಿಕೆ : ಒಣಗಿದ ಬಟ್ಟೆಯನ್ನು ಈ ಕ್ರಮಕ್ಕೆ ಉಪಯೋಗಿಸಬಾರದು ಹಾಗೆ ಮಾಡಿದರೆ ಮೀಸೆ ಬಟ್ಟೆಗೆ ಅಂಟಿ ಬರುವ ಸಾಧ್ಯತೆ ಇದೆ.

12. ನಂತರ ನಮಗೆ ಬೇಕಾದ ಆಕಾರಕ್ಕೆ ಮೀಸೆಯನ್ನು ಸಹಜವಾಗಿ ಕಾಣುವಂತೆ ಅಂಟಿಸಿದ ಕ್ರೇಪ್‌ಹೇರ್ ಬಿಡಿಸಿ ಮಾಡಿ. ಅನವಶ್ಯಕವಾದ ಕ್ರೇಪ್ ಹೇರನ್ನು ಕತ್ತರಿಸಿ.

ಹೊರಾಂಗಣದಲ್ಲಿ ಪ್ರದರ್ಶನ ಮಾಡುವಾಗ ಮೀಸೆಯ ಆಕಾರ ಕೆಡದಂತಿರಲು ಕ್ರಮ

ಸ್ಪಿರಿಟ್‌ಗಂಗೆ ಮತ್ತಷ್ಟು ರೆಕ್ಟಿಫೈಡ್‌ಸ್ಪಿರಿಟ್ (Rectified spirit) ಸೇರಿಸಿ ತೆಳು ಮಾಡಿಕೊಂಡು ಮೃದುವಾದ ಬ್ರಷ್‌ನಿಂದ ಮೀಸೆಯ ಮೇಲೆ ತೆಳುವಾಗಿ ಹಚ್ಚಿ ನಂತರ ತೊಯ್ದು ಹಿಂಡಿದ ಬಟ್ಟೆಯಿಂದ ಒತ್ತಿದ್ದರೆ ಆಕಾರ ಕೆಡದಂತೆ ಸಾಕಷ್ಟು ಕಾಲ ಇರುತ್ತದೆ.

## ನಿಮ್ಮ ಸ್ವಂತ ಕೂದಲಿನ ಮೀಸೆ

ಸಣ್ಣ ಉತ್ತಮ ಆಕಾರದ ಮೀಸೆಯನ್ನು ನಿಮ್ಮ ಸ್ವಂತ ಕೂದಲನ್ನು ಚಿಕ್ಕ ತುಂಡು ತುಂಡು ಮಾಡಿಟ್ಟುಕೊಂಡು ಈ ಪುಡಿ ಕೂದಲನ್ನು ಬೇಕಾದ ಆಕಾರಕ್ಕೆ ಸ್ಪಿರಿಟ್‌ಗಂ ಬಳಿದು ಅದಕ್ಕೆ ಅಂಟಿಸಿ. ಬ್ಲೇಡ್ ಅಥವಾ ಕತ್ತರಿಯ ಅಲಗಿನಿಂದ ಬೇಕಾದ ಆಕಾರಕ್ಕೆ ತಿರುಗಿಸಬಹುದು.

ಈ ಮೀಸೆ ಬಹಳ ಸಹಜವಾಗಿ ಕಾಣುತ್ತದೆ.

ಎಚ್ಚರ: ಪಾತ್ರಧಾರಿಯು ಮೀಸೆಯ ಮೇಲೆ ಕೈ ಆಡಿಸುವಾಗ ಅದನ್ನು ಎಳೆದಂತೆ ನಟಿಸಬೇಕು. ಎಚ್ಚರವಹಿಸಬೇಕು ಇಲ್ಲದಿದ್ದಲ್ಲಿ ಆಭಾಸಕ್ಕೆ ಎಡೆ.

## ಗಡ್ಡ

ಸುಮಾರು 15 ಅಂಗುಲ ಆದಷ್ಟು ಉದ್ದವಾದ ಕ್ರೇಪ್ ಹೇರನ್ನು ಕತ್ತರಿಸಿಕೊಳ್ಳಿ ಅದನ್ನು 3 ಅಥವಾ 4 ಅಂಗುಲದಷ್ಟು ಅಗಲವಾದ ಒಂದು ಮಟ್ಟಸವಾದ ಪಟ್ಟಿಯಾಗುವ ಹಾಗೆ ಬೆರಳುಗಳಿಂದ ಇದನ್ನು ಹಿಂಜುತ್ತ ಹೋಗಿ. ಈಗ ಇದನ್ನು 3 ಭಾಗಗಳಾಗಿ ಕತ್ತರಿಸಿ. ಅಂದರೆ 5 ಅಂಗುಲ ಉದ್ದಾದ 3 ಅಂಗುಲ ಅಗಲದ 3 ಭಾಗಗಳಾಗಿವೆ. ಒಂದು ಪಟ್ಟಿಯನ್ನು ಮಧ್ಯಕ್ಕೆ ಕತ್ತರಿಸಿ. ಅಂದರೆ 5" ಉದ್ದದ 2" ಅಗಲದ ಎರಡು ಭಾಗಗಳಾದವು.

ಒಟ್ಟಿನಲ್ಲಿ ನಮ್ಮಲ್ಲಿ 5" × 4"– 2ಭಾಗಗಳು

5" × 2"– 2ಭಾಗಗಳ ಕ್ರೇಪ್ ಹೇರ್ ಪಟ್ಟಿ ಇದೆ.

ಇವುಗಳಲ್ಲಿ 5" × 4"ದ ಪಟ್ಟಿಗಳು ಗಡ್ಡದ ಹಿಂಭಾಗ ಮತ್ತು ಮುಂಭಾಗಕ್ಕೆ ರೂಪ ಕೊಟ್ಟರೆ 5" × 2" ಅಗಲದ ಪಟ್ಟಿಗಳು ಎರಡೂ ಪಕ್ಕಗಳಿಗೆ ಉಪಯೋಗಕ್ಕೆ.

ಈಗ ನಟನ ಮುಖದ ಮೇಲೆ ಗಡ್ಡ ಹೇಗೆ ಬೆಳೆಯುತ್ತದೆಂಬುದನ್ನು ಗಮನಿಸಿ ಪಾತ್ರಕ್ಕೆ ತಕ್ಕ ಗಡ್ಡವನ್ನು ಚಿತ್ರಿಸಿಕೊಳ್ಳಿ.

ಗಡ್ಡ ಅಂಟಿಸಬೇಕಾದ ಜಾಗದಲ್ಲಿ ಯಾವ ರೀತಿಯ ಬಣ್ಣವೂ ಇರದಂತೆ ಒರೆಸಿ ಶುದ್ಧಮಾಡಿ.

ಗಡ್ಡ ಇರಬೇಕಾದ ಜಾಗಕ್ಕೆ ಸ್ಪಿರಿಟ್ ಗಂ ಹಚ್ಚಿ. ಸ್ವಲ್ಪ ಕ್ಷಣಗಳನಂತರ ಮತ್ತೊಮ್ಮೆ ಬಹಳ ತೆಳುವಾಗಿ ಸ್ಪಿರಿಟ್ ಗಂ ಹಚ್ಚಿ.

ಕೆಲವು ಸೆಕೆಂಡುಗಳ ನಂತರ ಗಲ್ಲದ ಕೆಳಭಾಗಕ್ಕೆ 5" × 4" ಅಳತೆಯ ಕ್ರೇಪ್ ಹೇರ್ ಪಟ್ಟಿಯನ್ನು ಅಂಟಿಸಿ. ಅದು ಗಟ್ಟಿಯಾಗಿ ಕೂರುವತನಕ ತೊಯ್ದು ಬಟ್ಟೆಯಿಂದ ಒತ್ತಿಹಿಡಿಯಿರಿ. ಗಡ್ಡ ಯಾವಾಗಲು ಗಂಟಲಿನ ಕಡೆ ಬಹಳ ತೆಳುವಾಗಿರುವುದನ್ನು ಮರೆಯದಿರಿ.

ಮತ್ತೆ ಗಲ್ಲದ ಮೇಲ್ಭಾಗಕ್ಕೆ 5" × 4"ಇನ್ನೊಂದು ಪಟ್ಟಿಯನ್ನು ಅಂಟಿಸಿ. ಇದೇ ರೀತಿ ಇನ್ನೆರಡು ಚಿಕ್ಕ ಪಟ್ಟಿಗಳನ್ನು ಕೆನ್ನೆಯ ಎರಡೂ ಪಕ್ಕಗಳಿಗೆ ಅಂಟಿಸಿ ಕಪಾಳದ ಕೆನ್ನೆ ಕೂದಲವರೆಗೂ ಈ ತುಂಡುಗಳಿರಬೇಕೆಂಬುದನ್ನು ಗಮನಿಸಿ.

ಈಗ ಗಲ್ಲ ಕೇಶಭರಿತ. ನಂತರ ಈ ಅಂಟಿಸಿದ ಪಟ್ಟಿಗಳನ್ನು ಸವರುತ್ತ ಹೋಗಿ. ಮೃದುವಾಗಿ ಒಂದಕ್ಕೆ ಒಂದು ಸೇರುವಂತೆ ಮಾಡಿ. ಬೇಕಾದ ಆಕಾರಕ್ಕೆ ಗಡ್ಡವನ್ನು ರೂಪಿಸಿ. ಕೊನೆಯದಾಗಿ ಉದ್ದ, ಆಕಾರಕ್ಕೆ ತಕ್ಕಂತೆ ಕತ್ತರಿಯಿಂದ ಕತ್ತರಿಸಿ. ಇದು ನಾಜೂಕು ಎಚ್ಚರಿಕೆಯಿಂದ ಮಾಡಬೇಕಾದ ಕೆಲಸ.

ಗಡ್ಡದ ಕೂದಲು ಒಂದೇ ಬಣ್ಣದ್ದಾಗಿರುವುದಿಲ್ಲ ಸಾಮಾನ್ಯವಾಗಿ. ಆದುದರಿಂದ ಕ್ರೇಪ್ ಹೇರ್ ಬಿಡಿಸಿಕೊಳ್ಳುವಾಗ ವಿಧವಿಧವಾದ ಬಣ್ಣಗಳನ್ನು ಸೇರಿಸಿ ಬಿಡಿಸಿ ತಯಾರಿಸಿಕೊಂಡರೆ ಒಳ್ಳೆಯದು. ಹಾಗೆ ಮಾಡಿದಾಗಲೂ ಬಣ್ಣಗಳು ಅತಿಯಾಗಿರಬಾರದು ಮತ್ತೆ ನೋಡಲಿಕ್ಕೆ ಅಂದವಾಗಿರಬೇಕು.

### ಹುಬ್ಬುಗಳು

ಎಷ್ಟೋ ಬಾರಿ ನಮ್ಮ ನೈಜನಾದ ಹುಬ್ಬುಗಳನ್ನು ಮರೆಮಾಡಿ ಹೊಸ ಹುಬ್ಬುಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ.

### ಕ್ರಮ


1. ನಮ್ಮ ಹುಬ್ಬುಗಳ ಮೇಲೆ ನವಿರಾಗಿ ಮೃದುವಾದ ನೆನೆಸಿದ ಸೋಪು ಹಚ್ಚಿ
2. ಅದು ಒಣಗುವ ಮುಂಚೆಯೇ ಬೆರಳಿನಿಂದ ನವಿರಾಗಿ ಸವರಿಸಿ ಎದ್ದಿರುವ ಹುಬ್ಬಿನ ಕೂದಲು ಅಂಟಿಕೊಂಡಂತೆ ಮಾಡಿ.
3. ಒಣಗಿದನಂತರ ಇದರ ಮೇಲೆ ಮೂಲ ಬಣ್ಣವನ್ನು ಹಚ್ಚಿ, ಅದು ಚರ್ಮದ ಬಣ್ಣದಂತಿರಬೇಕೆಂಬುದನ್ನು ಗಮನಿಸಿ.
4. ನಮ್ಮ ನೈಜ ಹುಬ್ಬುಗಳ ಮೇಲೆ ಪೂರ್ತಿಯಾಗಿ ಈ ಬಣ್ಣ ಹಚ್ಚಿರಬೇಕು.
5. ನಂತರ ನಮಗೆ ಬೇಕಾದ ಆಕಾರದಲ್ಲಿ ಹುಬ್ಬು ತಿದ್ದಿಕೊಳ್ಳಬಹುದು ಅಥವಾ ಕ್ರೇಪ್ ಹೇರ್‌ನಿಂದ ತಯಾರಿಸಿದ ಹುಬ್ಬುಗಳನ್ನು ಅಂಟಿಸಿಕೊಳ್ಳಬಹುದು.

## ಮುಖದ ಕೆಲವು ಅಂಗಗಳ ಸ್ವರೂಪದ ಬದಲಾವಣೆ ಮಾಡುವ ಉದಾಹರಣೆಗಳು

ಅನೇಕ ಬಾರಿ, ನಾಟಕಕಾರ ತನ್ನಕಲ್ಪನೆಯಂತೆ ನಾಟಕವಾಗಬೇಕೆಂದು ಆಶಿಸುತ್ತಾನೆ ಅಥವಾ ನಾಟಕದಲ್ಲಿ – ಪಾತ್ರ ಸೃಷ್ಟಿಯಲ್ಲಿ ಯಾವುದೋ ಒಂದು ಅಂಗದ ವಿಕಾರ, ಸ್ವರೂಪವೇ ಪ್ರಾಧಾನ್ಯವಾಗಿರುತ್ತದೆ. ಉದಾಹರಣೆಗೆ ಸಿರಾನೋ ಡಿ ಬರ್ಜರ್‍ಯಾಕ್ ಎಂಬ ಫ್ರೆಂಚ್ ನಾಟಕದಲ್ಲಿ ಸಿರಾನೋ ಪಾತ್ರಸೃಷ್ಟಿ ಮತ್ತು ನಾಟಕದ ಉದ್ದಕ್ಕೂ ಅವನ ಉದ್ದವಾದ, ವಿಕಾರವೆನಿಸಬಹುದಾದ ಮೂಗೇ ಪ್ರಧಾನವಾಗಿದೆ. ಇಂತಹ ಮೂಗಿನ ಸೃಷ್ಟಿ ಅಷ್ಟು ಸಫಲವಾಗುವುದಿಲ್ಲ. ಮತ್ತೊಂದು ತೊಂದರೆ ಎಂದರೆ ನಾಟಕದಲ್ಲಿ ಒಂದು ಸನ್ನಿವೇಶದಲ್ಲಿ ಸಿರಾನೋ ತನ್ನ ಪ್ರೆಯಸಿ ಕೈಹಿಡಿದು ಕೈಗೆ ಮುತ್ತಿಟ್ಟು ಯುದ್ಧಕ್ಕೆ ಹೊರಡುತ್ತಾನೆ. ಆಗ ಈ ಮೂಗು ಕೈಗಳ್ನು ಮುಟ್ಟಿ ಪಕ್ಕಕ್ಕೆ ತಿರುಗಿ ಮತ್ತೆ ತನ್ನ ಸಹಜಸ್ವರೂಪಕ್ಕೆ ಹಿಂತಿರುಗಬೇಕು.


ಹೀಗಿದ್ದಾಗ ಈ ಮೂಗು ಸೃಷ್ಟಿಸುವುದು ಹೇಗೆ ? ಮುಂದೆ ನೋಡೋಣ.

### ಕ್ರಮ - ಹತ್ತಿಯಲ್ಲಿ ಮಾಡಿದುದು



ಮೂಗು ಅಗಲ ಅಥವಾ ಉದ್ದ ಮಾಡುವಾಗ ಹತ್ತಿ ಉಪಯೋಗಿಸಿ ಮಾಡಬಹುದು. ಇಂತಹ ಸೃಷ್ಟಿಯ ಮೂಗು ಮೇಲೆ ಹೇಳಿದ ಮೂಗಿನಂತೆ ಅಕ್ಕಪಕ್ಕಕ್ಕೆ ತಿರುಗುವುದು ಅಸಾಧ್ಯ.

1. ಹತ್ತಿಯಲ್ಲಿ ಮಾಡುವಾಗ, ಮೂಲ ಬಣ್ಣವನ್ನು ಹಚ್ಚಿಕೊಳ್ಳುವುದ ಕ್ಕಿಂತ ಮೊದಲು ನಟನ ಮೂಗಿನ ಮೇಲೆ ಯಾವ ರೀತಿಯಲ್ಲೂ ಜಿಡ್ಡು ಇರದಂತೆ ಒರೆಸಿ.
2. ನಂತರ ಸ್ಪಿರಿಟ್ ಗಂ ಅನ್ನು ನವಿರವಾಗಿ ಮೂಗಿನ ಮೇಲೆ, ಹೊಳ್ಳೆಗಳಿಗೆ ಬಳಿಯಬೇಕು. ಹಾಗೇ ಮೂಗಿನ ಹೊಳ್ಳೆಗಳ ಮಧ್ಯಭಾಗಕ್ಕೂ ಬಳಿಯಬೇಕು.
3. ಹತ್ತಿಯನ್ನು ನಮಗೆ ಸೃಷ್ಟಿಸಬೇಕೆಂದಿರುವ ಕೃತಕ ಮೂಗಿನ ಆಕಾರಕ್ಕೆ ರೂಪಕ್ಕೆ ಮಾಡಿಕೊಳ್ಳಬೇಕು.



4. ನಂತರ ಸ್ಪಿರಿಟ್ ಗಂ ಹಚ್ಚಿದ ಭಾಗಗಳಿಗೆ ಮಾತ್ರ ಅಂಟಿಕೊಳ್ಳುವಂತೆ ನಟನ ಮೂಗಿನ ಮೇಲೆ ಈ ಕೃತಕ ಮೂಗನ್ನು ಜೋಡಿಸಿ ಅಂಟಿಸಬೇಕು. (ನಟನಿಗೆ ಉಸಿರಾಡಲು ತೊಂದರೆಯಾಗಬಾರದು)

5. ಈ ಅಂಟಿಸಿದ ಕೃತಕ ಮೂಗಿಗೆ ಅವನ ಮುಖದ ಚರ್ಮಕ್ಕೆ ಹೊಂದುವ ಮೂಲ ಬಣ್ಣವನ್ನು ಬಹಳ ಎಚ್ಚರಿಕೆಯಿಂದ ಬಳಿಯಬೇಕು. ಈ ಕ್ರಮ ಬಹಳ ಕಠಿಣವಾದದ್ದು.

6. ಯಾವುದೇ ಕಾರಣದಿಂದಲೂ ಅಂಟಿಸಿದ ಮೂಗಿನ ಬಣ್ಣ, ಅಂತ್ಯಗಳು ಎದ್ದು ಕಾಣದಂತಿರಬೇಕು.

7. ಮತ್ತೆ ಪಾತ್ರ ಪೋಷಕ ಪ್ರಸಾಧನದ ಕ್ರಮವನ್ನು ಅನುಸರಿಸಿ ಪ್ರಸಾಧನ ಪೂರ್ತಿಗಳಿಸಿ.

## ಕ್ರಮಃ ಸ್ಪಾಂಜ್ ಉಪಯೋಗಿಸಿ ಮಾಡಬಹುದಾದದ್ದು

1. ಮೃದುವಾದ ಸ್ಪಾಂಜ್‌ನ್ನು ಆರಿಸಿ ತನ್ನಿ

2. ಅದನ್ನು ಹರಿತವಾದ ಕತ್ತರಿಯಿಂದ ಬೇಕಾದ ಮೂಗಿನ ಆಕಾರಕ್ಕೆ ಸ್ವಲ್ಪ ಸ್ವಲ್ಪವಾಗಿ ಕತ್ತರಿಸಿ.

3. ಒಳಭಾಗ ನಟನ ಮೂಗಿನ ಆಕಾರಕ್ಕೆ ಬಹು ಹತ್ತಿರವಾಗಿರಬೇಕು ಅಲ್ಲದೆ ಅಂಕು ಡೊಂಕುಗಳಿರಬಾರದು.

4. ನಂತರ ದಟ್ಟವಾದ ಚರ್ಮದ ಬಣ್ಣ (Dark brown + a little black)ವನ್ನು ಹಚ್ಚಿ.

5. ನಟನ ಮೂಗಿಗೆ ಸ್ಪಿರಿಟ್ ಗಂ ಹಚ್ಚಿ– ಈ ಸ್ಪಾಂಜಿನ ಮೂಗನ್ನು ಅಂಟಿಸಿ.

6. ಕೃತಕ ಮೂಗಿನ ಅಂಚುಗಳು ಬಹಳ ತೆಳುವಾಗಿರಬೇಕು.

7. ನಂತರ ಮೂಲ ಬಣ್ಣವನ್ನು ಮುಖದ ಎಲ್ಲಾ ಭಾಗಗಳಿಗೂ ಹಚ್ಚಿ ಮೂಗಿಗೂ ಹಚ್ಚಿ.

8. ಸಾಮಾನ್ಯವಾಗಿ ವೈಭವೀಕರಣ ಮಾಡುವಂತೆ ಮೂಗಿಗೂ ಬಣ್ಣ ಹಚ್ಚಿ ಬೇಕಾದ ರೀತಿಯಲ್ಲಿ ವೈಭವೀಕರಿಸಿ.

9. ನಾಟಕ ಮುಗಿದ ಮೇಲೆ ಎಚ್ಚರಿಕೆಯಿಂದ ಈ ಮೂಗು ತೆಗೆದಿಟ್ಟರೆ ಪುನಃ ಪ್ರದರ್ಶನಕ್ಕೆ ಉಪಯೋಗಿಸಬಹುದು.

## ಲ್ಯಾಟೆಕ್ಸ್ ಉಪಯೋಗ

ಲ್ಯಾಟೆಕ್ಸ್ (Latex) ದ್ರವರೂಪದಲ್ಲಿರುವ ರಬ್ಬರ್. ಇದರಲ್ಲಿ ಕೂಡ ನಮಗೆ ಬೇಕಾದ ರೀತಿಯಲ್ಲಿ ಮೂಗು ಮತ್ತು ಇತರೇ ಭಾಗಗಳ ಆಕಾರ ಬದಲಾಯಿಸಬಹುದು.

ಹತ್ತಿಯಲ್ಲಿ ಬೇಕಾದ ಆಕಾರದಲ್ಲಿ ಮೂಗು ಮತ್ತು ಕೆನ್ನೆಗಳ ಭಾಗಗಳನ್ನು ಮೊದಲು ಮಾಡಿ ನಂತರ ದ್ರವರೂಪದ ರಬ್ಬರ್ ಬಹಳ ಎಚ್ಚರಿಕೆಯಿಂದ ಬಳಿದರೆ ಅದು ಒಣಗಿ, ಆಕಾರ ಹಾಗೇ ಉಳಿದಿರುವುದಲ್ಲದೆ ಮತ್ತೆ ಮತ್ತೆ ಉಪಯೋಗಕ್ಕೂ ಬರುತ್ತದೆ.

ಇಂತಹ ತುಂಡು ಭಾಗಗಳನ್ನು ಮೊದಲೇ ಹೇಳಿದ ರೀತಿಯಲ್ಲಿ ಸ್ಪಿರಿಟ್ ಗಂ ಉಪಯೋಗಿಸಿ ಅಂಟಿಸಿ. ನಂತರ ಮೂಲಬಣ್ಣವನ್ನು ಹಚ್ಚಿ ಪ್ರಸಾಧನ ಮಾಡಬಹುದು.

ಆದರೆ ದ್ರವರೂಪದ ರಬ್ಬರ್ ದೊರಕುವುದು ಕಷ್ಟ ಮತ್ತು ಬಹು ವೇಗ ಗಾಳಿಗೆ ಆಡಿಸಿದಾಗ ಗಟ್ಟಿಯಾಗಿಬಿಡುತ್ತದೆ ಅನ್ನುವುದನ್ನು ಮರೆಯಬಾರದು.

## ಕೃತಕ ಅಂಟು ಪದಾರ್ಥಗಳು—ಅನೇಕವು ಈಗ ದೊರಕುತ್ತಲಿವೆ

ಈ ಅಂಟುಪದಾರ್ಥಗಳು ಫೆವಿಕಾಲ್ ತರಹೆಯವನ್ನು ಉಪಯೋಗಿಸಿ ನಮಗೆ ಬೇಕಾದ ರೀತಿಯ ಮೂಗು ಮತ್ತು ಕೆನ್ನೆಯ ಭಾಗಗಳನ್ನು ಮಾಡಿಟ್ಟುಕೊಳ್ಳಬಹುದು.

ಹತ್ತಿಯಲ್ಲಿ ಬೇಕಾದ ಭಾಗಗಳನ್ನು ಮಾಡಿ ನಂತರ ಫೆವಿಕಾಲ್ ಹಚ್ಚಿ ಒಣಗಲು ಬಿಟ್ಟು, ನಂತರ ಅದಕ್ಕೆ ಮೂಲಬಣ್ಣವನ್ನು ಹಚ್ಚಿ ಮತ್ತೆ ಒಣಗಿಸಿ.

ನಂತರ ಸ್ಪಿರಿಟ್‌ಗಂನ್ನು ಮುಖದ ಭಾಗಕ್ಕೆ ಹಚ್ಚಿ ಈ ತುಂಡುಗಳನ್ನು ಅಂಟಿಸಬಹುದು.

## ಗಾಯಗಳು

ಕೊನೆಯ ಪಟದಲ್ಲಿ ಚಿತ್ರಗಳನ್ನು ನೋಡಿ

**A.** ಗುದ್ದಿದಾಗ, ಮೂಗೇಟುಬಿದ್ದಾಗ ಆದ ಗಾಯ

ಕ್ರಮ : 1. ಏಟು ಬಿದ್ದಿರಬಹುದಾದ ಜಾಗದಲ್ಲಿ 'ಬೇಕಾದಷ್ಟು' ಗುರ್ತಿಸಿ.

2. ನಂತರ ತಿಳಿ ನೀಲಿ ಮತ್ತು ಕಂದು ಬಣ್ಣ ಸೇರಿಸಿ ಹದ ಮಾಡಿ. ಗಾಯದ ಮಧ್ಯಭಾಗದ ಸುತ್ತ ತೆಳುವಾಗಿ ಹಚ್ಚಿ. ಅದು ಮೂಲ ಬಣ್ಣದೊಡನೆ ವಿಲೀನವಾಗಿರಬೇಕು

3. ಗಾಯದ ಮಧ್ಯ ಭಾಗಕ್ಕೆ ಕೆಂಪು ಮತ್ತು ಕಂದು ಮಿಶ್ರಿತ ಬಣ್ಣದಿಂದ ಗಾಯದ ಸ್ವರೂಪ ಸೃಷ್ಟಿಸಿ.

4. ಆಮೇಲೆ. ಇದರ ಸುತ್ತ ವೈಭವೀಕರಣ ಮಾಡಿ ಉಬ್ಬಿಕೊಂಡಂತೆ ಮಾಡಿ.

**B.** ಕತ್ತರಿಸಿ ರಕ್ತ ಸುರಿದ ಗಾಯ

1. ಗಾಯದ ಆಕಾರ ಗುರ್ತಿಸಿ

2. ಆಕಾರವನ್ನು ನೀಲಿ ಕೆಂಪು ಬೆರೆತ ಬಣ್ಣದಿಂದ ದಟ್ಟಗೊಳಿಸಿ.

3. ದಟ್ಟವಾದ ಕೆಂಪು ಬಣ್ಣ ಮತ್ತು ಕಂದು ಬಣ್ಣದ ಮಿಶ್ರಣ ಮಾಡಿ ಅದಕ್ಕೆ ಗ್ಲಿಸರೀನ್/ವ್ಯಾಸಲೀನ್ ಸ್ವಲ್ಪ ಸೇರಿಸಿ ಮಧ್ಯದ ಭಾಗಕ್ಕೆ ಬ್ರಷ್‌ನಿಂದ ಹಚ್ಚಿ.

4. ನಂತರ ಇನ್ನಷ್ಟು ರಕ್ತದ ಬಣ್ಣ ಮಾಡಿಕೊಂಡು ಗಾಯದ ಮಧ್ಯದಿಂದ ರಕ್ತ ಸಾಮಾನ್ಯವಾಗಿ ಹರಿಯುವ ದಿಕ್ಕಿನಲ್ಲಿ.

ರಕ್ತ ಹರಿಯುವಂತೆ ರಕ್ತದಲ್ಲಿ ಅದ್ದಿದ ಬ್ರಷ್‌ನ್ನು ಒತ್ತಿ ಹಿಡಿಯಿರಿ. ಸೋರುವುದು ತಾನೇ ತಾನಾಗಿ ಆಗಲಿ. ಒರೆಸಬೇಡಿ. ದೇಹದ ಬೇರೆ ಭಾಗ ಅಥವಾ ಬಟ್ಟೆಯಮೇಲೆ ಬಿದ್ದು ಹರಿದಿದ್ದರೆ ಮತ್ತಷ್ಟೂ ಒಳ್ಳೆಯದು.


C. ಸುಟ್ಟಗಾಯ

1. ಫೆವಿಕಾಲ್ ನಂತಹ ಅಂಟಿಗೆ ಸ್ವಲ್ಪ ನೀರು ಸೇರಿಸಿ ತೆಳುವು ಮಾಡಿಕೊಳ್ಳಿ.
2. ಇದಕ್ಕೆ ಸ್ವಲ್ಪ ಮೈದಾ ಹಿಟ್ಟು ಸೇರಿಸಿ
3. ಚೆನ್ನಾಗಿ ಕಲಿಸಿ ಹದ ಮಾಡಿ
4. ಗಾಯದ ಭಾಗವನ್ನು ಗುರುತಿಸಿ
5. ಕುಶಲವಾಗಿ ಬ್ರಷ್‌ನಿಂದ ಈ ಮಿಶ್ರಣವನ್ನು ಸುಟ್ಟಗಾಯದ ಆಕಾರದಲ್ಲಿ ಹಚ್ಚಿ.
6. ಅದರ ಮೇಲೆ ಪಾರದರ್ಶಕ ವಾರ್‌ನಿಷ್ (Transparent Varnish or Laquer)ಬಳಿಯಿರಿ.

ಒಣಗಿದ ಮೇಲೆ ಸುಟ್ಟ ಗಾಯದಂತಿರುತ್ತದೆ.

## ಪ್ರಸಾಧನದ ಬಗ್ಗೆ–

## ನನ್ನ ಬಗ್ಗೆ ಪರ್ವತವಾಣಿಯವರ ಪತ್ರವಾಣಿ



ನಿಘಂಟಿನಲ್ಲಿ ಇದನ್ನು 'ಪೂರೈಸುವಿಕೆ', 'ನಿರ್ವಹಿಸುವಿಕೆ', 'ಜೋಡಿಸುವಿಕೆ', 'ಕ್ರಮವಾಗಿಡುವಿಕೆ', 'ಅಲಂಕರಿಸುವಿಕೆ', 'ಸಿಂಗರಿಸುವಿಕೆ'– ಎಂದು ಅರ್ಥ ಮಾಡಿಸಿದೆ. ಆಂಗ್ಲ ಭಾಷೆಯಲ್ಲಿ "Make up" ಎನ್ನುತ್ತಾರೆ.

ದೇವರು ನಮಗೆ ಕೈ, ಕಾಲು, ಕಣ್ಣು, ಮೂಗು, ಕಿವಿಗಳನ್ನು ಕೊಟ್ಟು ಸೃಷ್ಟಿಸುತ್ತಾನೆ. ಈಗ ನಾವು 'ಸಮಾನತೆ' ಎಂದು ಕೂಗುತ್ತೇವಲ್ಲಾ. ಈ ಕೂಗು ಆಗ ಇರಲಿಲ್ಲವೋ ಏನೋ–ಬ್ರಹ್ಮ ಒಬ್ಬನ ಬಣ್ಣ ಕಪ್ಪು, ಒಬ್ಬಳ ಗಾತ್ರ ದಪ್ಪ, ಅವನು ಒಂಟೆ. ಇವಳು ಕುಳ್ಳಿ–ಹೀಗೆ 'ಅಸಮಾನತೆ' ಸೃಷ್ಟಿಮಾಡಿ ಕೈತೊಳೆದುಕೊಂಡ. ಸಮಾನತೆಯ ಕಡೆಗೆ ಒಯ್ಯುವ ಕೆಲಸ ನಮಗೆ–ಎಂದರೆ ಪ್ರಸಾಧನಕಾರರಿಗೆ–ಬಿಟ್ಟ. ಆ ಚತುರ್ಮುಖನಿಗೆ ವಂದಿಸಿ, ಲೇಖನಿ ಮುಂದುವರಿಸುತ್ತೇನೆ.

'Tailor made Man' ಎಂಬುವ ಮಾತನ್ನು ಕೇಳಿದ್ದೇವೆ. ಅವನ ಹೆಸರು ಗೋವಿಂದರಾಯನೆಂದು ಇಟ್ಟುಕೊಂಡರೆ, ಅವನು ದರ್ಜಿ ಕೊಟ್ಟ ಬಟ್ಟೆಯನ್ನು ಬಿಚ್ಚಿಹಾಕಿದರೆ– 'ಗೋವಿಂದ' – ಎನ್ನಿಸುತ್ತಾನೆ! ಇನ್ನು ಗೋದಾವರಿ. ಇವಳು ಸಾಧಾರಣದ ಹುಡುಗಿ. ಮದುವೆಯ ಮುಹೂರ್ತದಲ್ಲಿ, ಬೆಳಗ್ಗೆ, ಇವಳು ಹೇಗಿರುತ್ತಾಳೆ ? ಸಂಕಲಿಕೆ ಸೀರೆ, ಬಿಗಿದು ಜಡಿದ ಐದು ಕಾಲು ಜಡೆ, ಹೊರೆ ಮಲ್ಲಿಗೆ ಹೂ, ಊರಗಲದ ಕುಂಕುಮ, ಅರಿಶಿನ ಗಿರಿಶಿನಗಳಂತೂ–ನಿಜ ಹೇಳಬೇಕೆಂದರೆ–ಭಯಾನಕ! ಇದೇ ಗೋದಾವರಿ, ಅದೇ ಸಂಜೆ, ಆರತಕ್ಷತೆಗೆ–ರಿಸೆಪ್ಷನ್ನಿಗೆ– ಕೂಡುವಾಗ? ಓಹೋ ಹೋ ಹೋ! ಸಂಜೆ ಇದಕ್ಕೇ ಯಾವುದೋ ಒಂದು Beauty saloonಗೆ ಹೋಗಿ– Parlour ಅನ್ನೋಣ ಹೋಗಲಿ–ಅಲ್ಲಿಗೆ ಹೋಗಿ ಯಾವ ಚಿತ್ರನಟಿಗೂ ಕಡಿಮೆಯಿಲ್ಲವೆನ್ನುವಷ್ಟು 'make–up' ಮಾಡಿಸಿ ಕೊಳ್ಳುತ್ತಾಳೆ !ಆರಂಗುಲದ ಜಡೆ, ಕೇಶರಾಶಿಯಾಗಿರುತ್ತದೆ ! ಎಲ್ಲೋರಾ ಅಜಂತ ಪ್ರತ್ಯಕ್ಷ! ಬಣ್ಣವೋ! ಅದೆಷ್ಟು ಬಗೆ! ತುಟಿ ಎಷ್ಟು ಕೆಂಪು, ಹುಬ್ಬು! ಭಲೇ ಎಂಥ ತಿದ್ದಣಿಗೆ! ಆ ಗಂಡನೂ, ಬೆಳಗ್ಗೆ ಕಾಶಿಯಾತ್ರೆಗೆ ಹೊರಡುವಾಗ ಇದ್ದ ವೇಷವೇನು, ಸಂಜೆ ಅವನ ಅಂಗಿಯೇನು, ಷರಾಯೇನು, ಟೈ ಏನು, ಷೂಸ್ಸೇನು, ಏನೇನು! ಬೇರೆ

ಗಂಡ, ಬೇರೆ ಹೆಂಡತಿಯರಂತೆ ಬೆಳಗ್ಗೆ ಬಂದವರಿಗೆ ಅನ್ನಿಸಿದರೆ, ಪಾಪ, ಅವರದೇನೂ ತಪ್ಪಲ್ಲ. ಪ್ರಸಾಧನಕಾರದ ಕೈವಾಡ, ಬಂದ ಆಮಂತ್ರಿತರೆಲ್ಲಾ ಒಂದಕ್ಕೆ ನಾಲ್ಕು ಸಲ ಕೈ ಕೈ ಕುಲುಕಿ ಬಿಡಲಾರದ ಮನಸ್ಸಿನಿಂದ ಬಿಟ್ಟು ತೆರಳುತ್ತಾರೆ! ಜೀವನ ನಾಟಕದಲ್ಲಿ ಹೀಗೇ.

ಜೀವನ ನಾಟಕವನ್ನು ಪ್ರತಿಬಿಂಬಿಸುವ ರಂಗ ನಾಟಕದಲ್ಲಿಯೂ ಕತೆ ಇದೇ. ಹಗಲಾಟದ ಕಾಲದಲ್ಲೂ ರಾಮನಾಗೋ, ಕೃಷ್ಣನಾಗೋ, ಶಿವನಾಗೋ ವೇಷ "ಬಳಿದು" ಕೊಳ್ಳುತ್ತಿದ್ದ. ಜನ ವೇಷಕ್ಕೆ ಹೆಚ್ಚು ಗಮನ ಕೊಡದೆ "ವಿಷಯ"ಕ್ಕೆ ಪ್ರಾಧಾನ್ಯತೆ ಕೊಟ್ಟು ಆನಂದಪಡುತ್ತಿದ್ದರು. ಕಲಾತ್ಮಕವಾದ ಪ್ರಸಾಧನವೆಂದರೆ. ನಮ್ಮಲ್ಲಿ ಪ್ರಾಯಶಃ ಯಕ್ಷಗಾನದವರಿಗೋ ಅಗ್ರ ಪೂಜೆ ಸಲ್ಲಬೇಕು. ಇವತ್ತು ನಮಗೆ ವಿಚಿತ್ರವೆನ್ನಿಸಿದರೂ, ಅದೇನು ಬಣ್ಣದ ಶ್ರೀಮಂತಿಕೆ !

## ವೇಷದಲ್ಲಿ ಚಿತ್ರ



ಅಂದು, ಹಳ್ಳಿಗಳ ಕಡೆಗಳಲ್ಲಿ, ಅವರಿಗಿದ್ದ ದೀಪದ ಸೌಕರ್ಯದಲ್ಲಿ, ಬಯಲಿನಲ್ಲಿ ಕೂತು ಸಹಸ್ರಾರು ಪ್ರೇಕ್ಷಕರು ನೋಡುವ ನಾಟಕಕ್ಕೆ ಆ "ವೇಷ"ಅಗತ್ಯ. ಎಲ್ಲರಿಗೂ ಕಾಣಬೇಕು. ಕಂಡೊಡನೆ 'ಇವನು ರಾಕ್ಷಸ, ಇವನು ದೇವತೆ' ಎಂದು ತಿಳಿಯಬೇಕು. ಇಂದೂ ಯಕ್ಷಗಾನದವರು, ಇತರ ವಿಷಯಗಳಲ್ಲಿ ಸುಧಾರಿಸಿದರೂ, (ಚಂಡೆ ಮದ್ದಲೆಗಳಿಗೆ ಬದಲು ಕೀಳಲು ಪಿಟೀಲು ತಂದಿರುವರಲ್ಲವೆ?) 'ವೇಷ' ಮಾತ್ರ ಅದೇ ಉಳಿದಿದೆ.

ನಂತರ ಬಂದ ವೃತ್ತಿ ರಂಗದವರು 'ಸಹಜತೆ'ಗೆ ಹೆಚ್ಚು ಹತ್ತಿರ ಬದಲು ಪ್ರಯತ್ನಿಸಿದರು. ಬಹುದೂರ ಬಂದರೆಂದೇ ಹೇಳಬಹುದು. ಆದರೂ ಅವರು ಹೆಚ್ಚಾಗಿ ರಂಗಸಜ್ಜಿಕೆ, ಝುಗಝುಗಿಸುವ ಅಂಗಿಗಳು, ಪೇಟಗಳು, ಕಿರೀಟಗಳು, ಬೆಳ್ಳುಳ್ಳಿ, ಪಟಾಕಿ, ಶಾಸ್ತ್ರೀಯ ಸಂಗೀತ, ವಾದ್ಯ–ಇವುಗಳಿಗೆ ಪ್ರಾಶಸ್ತ್ಯ ಕೊಟ್ಟರು. ಪ್ರಸಾಧನ ಅವರಿಗೆ ಅಷ್ಟು ಗಮನಕ್ಕೆ ಬರಲಿಲ್ಲ. ಬಣ್ಣ ಸುಣ್ಣ ಹಚ್ಚಿಕೊಳ್ಳುತ್ತಿದ್ದರು. ಕಣ್ಣಿಗೆ ಚೆಂದವಾಗಿ ಕಾಣುತ್ತಲೂ ಇದ್ದರು. ಆದರೆ ಗಡ್ಡ ಮೀಸೆಗಳನ್ನು ಹಾಕಿಕೊಳ್ಳುವುದರಲ್ಲಿ–ಕ್ರೇಪ್ ಕೂದಲು, ಸ್ಪಿರಿಟ್ ಗಮ್ಮು ಉಪಯೋಗಿಸುತ್ತಿದ್ದರೂ–ಸಮರ್ಪಕತೆಯಿರುತ್ತಿರಲಿಲ್ಲ. ಮೀಸೆ ಬಿದ್ದು ಹೋದೀತೆಂದೇ ಅಥವಾ ಆಕಾರ ಕೆಡುತ್ತದೆಂದೋ ಭಯ ಕಾಡುತ್ತಲೇ ಇತ್ತೇನೋ–ಪದೇ ಪದೇ, ಅತಿ ಪ್ರಮುಖ ನಟರೂ ಅವನ್ನು ಕಟ್ಟಿಕೊಳ್ಳುತ್ತಿದ್ದರು. 'ಸಿದ್ಧ ಪಡಿಸಿದ ಮೀಸೆ ಗಡ್ಡಗಳು ' ಸಹಜವಾಗಿ ಬೆಳೆದವಂತೆ ಕಾಣಿಸುತ್ತಿರಲಿಲ್ಲ. ಅಲ್ಲದೆ ನಾವು ಈಗ ಒಂದು ಪಾತ್ರ ಹೇಗೆ ಕಾಣಬೇಕು ಎಂದು ಯೋಚಿಸುವಷ್ಟು ಅವರು ತೊಂದರೆ ತೆಗೆದುಕೊಳ್ಳುತ್ತಿರಲಿಲ್ಲ. ಆದರೂ ಆ ಕಾಲದಲ್ಲೇ 'ಪ್ರಸಾಧನ' ಮುಂದೆ ಬಂತು–

ರಂಗಭೂಮಿಯ ಚಟುವಟಿಕೆ ಕ್ರಮೇಣ ಹವ್ಯಾಸಿಗಳ ಹೆಚ್ಚಿನ ಹೊಣೆಗೆ ಬಿದ್ದ ಮೇಲೆ–ಬಿದ್ದ ಮೇಲೂ, ಅನೇಕ ವರ್ಷಗಳು, ಪ್ರಸಾಧನ ಕಲೆ ಅಲ್ಪಸ್ವಲ್ಪ ಮುಂದುವರಿದಂತೆ ಕಂಡರೂ, ವಿಗ್ಗುಗಳನ್ನು ಕೂಡಿಸುವಿಕೆ, ಮೀಸೆ ಗಡ್ಡ ಅಂಟಿಸುವಿಕೆ,' 'ಪಾತ್ರ'ಕ್ಕೆ ಅನುಗುಣವಾದ ಪ್ರಸಾಧನ ಪೂರೈಸುವಿಕೆ 'ಇನ್ನೂ ಬೇಕು' ಎನ್ನುವಂತಲೇ ಇತ್ತು. ಅಲ್ಲಲ್ಲಿ, ಶಾಮರಾಯರಂಥ, ನರಸಿಂಹಮೂರ್ತಿಯಂಥ, ಸುಬ್ಬರಾವ್ ಅಂಥ, ಸುಬ್ಬಣ್ಣನಂಥ, ನಾರಾಯಣರಾಯರಂಥ ಹಲಕೆಲವರು ಈ ಕಲೆಯನ್ನು ಸಾಕಷ್ಟು ಬೆಳೆಸಿದರು ಆಸಕ್ತರಿಗೆ ತಮಗೆ ತಿಳಿದದ್ದನ್ನು ಕಲಿಸಿದರು.

ಮೀಸೆಯಿರುವವನು ಅದನ್ನು ತಿರಿಚಿಕೊಳ್ಳುವುದು ಸಹಜವೆಂದು ಒಪ್ಪುತ್ತೀರಿ ತಾನೇ? "ಆತ್ಮ ಪ್ರಶಂಸೆ ಮಾಡಿಕೊಳ್ಳುತ್ತಾನೆಂ"ದು ಅಪಾದನೆ ಮಾಡುವುದಕ್ಕಿಂತ, 'ಮಾಡಿದ್ದನ್ನು, ಆಡುತ್ತಾನಾ'–'ಸಹಜ'ವೆನ್ನುತ್ತೀರೆಂದು ನಂಬಿ ಮುಂದುವರಿಸುತ್ತೇನೆ.

ಇವನ ಮನೆಯ ಹೆಸರೇ "ಗ್ರೀನ್ ರೂಂ" ಇವನನ್ನು 'ನಾಟಕದವರೆಲ್ಲರೂ' ಕರೆಯುವುದು "ಗ್ರೀನ್ ರೂಂ ನಾಣಿ" ಯೆಂದೇ. ಇದಕ್ಕೆ ಕಾರಣವೆಂದರೆ (make–up ನಾಣಿ). ಇವನು 'ಪ್ರಸಾಧನ'ಕ್ಕೆ ಕೊಟ್ಟ ಪ್ರಾಶಸ್ತ್ಯ, ಕಲೆಯನ್ನು ಕಲಿಯಲು ಪಟ್ಟ ಶ್ರಮ, ಸಿಕ್ಕ ಅವಕಾಶ. ಇಂಗ್ಲೆಂಡಿನಲ್ಲಿ ಓದುತ್ತಿದ್ದಾಗ, ಅಲ್ಲಿನ ನಾಟಕಗಳನ್ನು ನೋಡುವುದರ ಜೊತೆಗೆ–

ಇವನಿಗೆ ಆಗಲೇ 'ಪ್ರಸಾಧನ' ಕಲೆಯನ್ನು ತನ್ನದಾಗಿ ಮಾಡಿಕೊಂಡು, ಆ ದಿಕ್ಕಿನಲ್ಲಿ ಕನ್ನಡ ರಂಗಭೂಮಿಗೆ ತನ್ನ ಸೇವೆ ಮಾಡಬೇಕೆಂಬ ಮನಸ್ಸು ಬಂದು, ಹೆಚ್ಚಿನ ಗಮನ ಆ ದಿಕ್ಕಿಗೆ ತಿರುಗಿಸಿದ. ಅಲ್ಲಿನ ಡಿಪ್ಲೊಮಾ ಪಡೆಯುವ ವೇಳೆಗೆ ಸಾಕಷ್ಟು ಅನುಭವ ಪಡೆದುಕೊಂಡಿದ್ದ ನಮ್ಮ ನಾಣಿ.

ತಾನು ಸ್ವದೇಶಕ್ಕೆ ಹಿಂತಿರುಗಿದ ನಂತರ ತನು, ಮನ, ಧನವನ್ನು ಹೆಚ್ಚಾಗಿ 'ಪ್ರಸಾಧನ'ಕ್ಕೆ ಇತ್ತ. ನಮ್ಮ ರಾಮ, ನಮ್ಮ ಭೀಮ, ನಮ್ಮ ಪುಟ್ಟಾಶಾಸ್ತ್ರಿ, ನಮ್ಮ ನಾಗತ್ತೆ, ನಮ್ಮ ಬೋರ, ನಮ್ಮ ಯಾಕೂಬ, ಸಿದ್ಧ ಶಂಕರರು ಹೇಗೆ ಕಾಣಿಸಬೇಕು, ಹಾಗೆ ಕಾಣಿಸಲು ನಮ್ಮ ಪ್ರಸಾಧನ ಸಾಮಗ್ರಿಗಳನ್ನು ಹೇಗೆ ತಯಾರಿಸಬೇಕು, ಅವನ್ನು ಯಾವ ಸುಧಾರಿತ ರೀತಿಯಲ್ಲಿ ಸಮರ್ಪಕವಾಗಿ ಬಳಸ ಬೇಕು– ಈ ದಿಕ್ಕಿನಲ್ಲಿ 'ಅಧ್ಯಯನ'ಗಳಲ್ಲಿ ಮುಳುಗಿದ.

ಇವನು ಸಂಪ್ರದಾಯದ ಸಂಕೋಲೆಯನ್ನು ಕಾಲಿಗೆ ಕಟ್ಟಿಹಾಕಿಕೊಂಡು ಅದೇ ಸರಿಯೆಂಬ ಹಟ ಹಿಡಿಯುವ ಮೊಂಡು ಮಗುವಲ್ಲ. ಹಾಗೆಯೇ ಅಪ್ಪನ ಆಲದ ಮರ ಅಪ್ರಯೋಜಕವೆಂದು ಬೇರು ಸಹಿತ ಕಿತ್ತೊಗೆದು ಪ್ರಸಿದ್ಧಿ ಪಡೆಯುವ ಮನೋಭಾವದವನೂ ಅಲ್ಲ. ಸಮಾಧಾನವಾಗಿ ಕೂತು, ತಂಪಾಗಿ ಯೋಚಿಸಿ, "ಇದು ಸರಿಯನ್ನಿಸುತ್ತೆ" ಎನ್ನುವ ಸಾಧಾರಣ ಮನುಷ್ಯ. ಈ ಮಾತುಗಳನ್ನು ಹೇಳುವ ಕಾರಣ–

ಪಶ್ಚಿಮದಲ್ಲಿ ಒಬ್ಬನಿಗೆ ಒಂದು ಹುಚ್ಚು ಹಿಡಿಯಿತು. 'ನಟನಿಗೆ ಪ್ರಸಾಧನವೇಕೆ ?' ಎಂದ. ರಂಗ ಮಂಚದ ಮೇಲೆ ಒಥೆಲೋ, ಷೈಲಾಕ, ಸೀಸರರನ್ನು ಅಂಗಿ, ಷರಾಯಿ, ಟೈ, ಬೂಡ್ಸುಗಳಲ್ಲೇ ತಂದ. ಎಡವಿದ್ದನ್ನೇ ವರಸೆ ಎನ್ನುವ ಭಟ್ಟಂಗಿಗಳು ಭಾರತಕ್ಕೆ ಮಾತ್ರ ಮೀಸಲಿಲ್ಲ. ಅಲ್ಲೂ ಕೆಲವು 'ಹಿತೈಷಿ ಅಭಿಮಾನಿ'ಗಳು 'ಭಲೆ' ಎಂದರು. ಆ ಕೂಗು ಇಲ್ಲಿಗೂ ಕೇಳಿಸಿ, ಇಲ್ಲಿನ ಒಬ್ಬಿಬ್ಬರಿಗೂ ಅದೇ ಹುಚ್ಚು ಅಂಟಿತು. ಪಶ್ಚಿಮದ ಹುಚ್ಚೆಂದ ಮೇಲೆ ಮರುಮಾತುಂಟೆ? ಪುಣ್ಯಕ್ಕೆ ಸಾಂಕ್ರಾಮಿಕ, ಹತೋಟಿಯಲ್ಲೇ ಹತವಾಗಿ, ನಮ್ಮ ಸೀತೆ ಸಾವಿತ್ರಿಯರು ಮಿನಿ ಮ್ಯಾಕ್ಸಿಗಳಲ್ಲಿ ಷೇಲ್ವರ್, ಬಾಬ್ ಕಟ್ಟುಗಳಲ್ಲಿ ಕಾಣಿಸಿಕೊಂಡು ಕಣ್ಣುಬೇನೆ ತಂದಿಲ್ಲ. ಪ್ರಸಾಧನ ಬೇಕು ಪ್ರೇಕ್ಷಕ ಇದನ್ನು ನಿರೀಕ್ಷಿಸುತ್ತಾನೆ. ಕೃಷ್ಣನ ಮುಖವನ್ನೇ ಕಾಣದಿದ್ದರೂ, ನವಿಲುಗರಿ–ಕೊಳಲುಗಳನ್ನು ನೋಡಿದೊಡನೆ, 'ಹಾ, ಕೃಷ್ಣ ಬಂದ' ಎನ್ನುತ್ತಾನೆ; ನರಸಿಂಹನ ತಲೆ, ಬರಿ ನರನದೇ ಆದರೆ, ನಾಟಕ ಸಪ್ಪೆ'ಯಾಗುತ್ತದೆ. ಈ ಬಾಬತ್ತಿನಲ್ಲಿ ನಾಟಕಕ್ಕೂ ಚಲನಚಿತ್ರಕ್ಕೂ ಅಂಥ ವ್ಯತ್ಯಾಸವಿಲ್ಲವೆನ್ನಬಹುದು. ಲೋಕವಿಖ್ಯಾತ ನಟರಾದ ಲಾನ್ ಛಾನಿ, ಜೀನ್ ಹರ್ಕ್ಯಾಲ್ಟ್ ಚಾರ್ಲ್ಸ್ ಲಾಟನ್ ಫ್ರೆಡರಿಕ ಮೊದಲಾದವರನ್ನು ಸ್ಮರಿಸಿಕೊಂಡಾಗ ಮೈ ಜುಂ ಎನ್ನುತ್ತದೆ. ಚಾರ್ಲಿ ಚಾಪ್ಲಿನ್ನನನ್ನು ಅರಿಯದವರಾರು ?

ಅಲ್ಲಿನವರದಲ್ಲ, ನಾನು ಈ 'ನಾಣೆ' ಕೈಗೆ ಸಿಕ್ಕಿಹಾಕಿಕೊಂಡು ಪಟ್ಟಿರುವ ಪಾಡು (?) ನೋಡಿ! ನನ್ನದೇ ನಾಟಕ, 'ನಾನು ನೀನೇ' ನಲ್ಲಿ, ನಾನು 'ಕುಬೇರಪ್ಪ'ನಾಗಿ ಚಿತ್ರದಲ್ಲಿರುವಂತೆ ಕಂಡಾಗ– ಪರಿಣಾಮ ಎಂಥವಾಗಬಹುದೆಂಬ ಕಲ್ಪನೆ ಸಹೃದಯರಿಗೇ ಸೇರಿದ್ದು.

ಕೊನೆಯ ಪುಟಗಳಲ್ಲಿರುವ ಚಿತ್ರಗಳನ್ನು ನೋಡಿ

ಪರ್ವತವಾಣಿಯವರ ಮಾತಿನಲ್ಲೇ.....



ಒಂದು ಕಡೆಯ ಮಾತು. ಕಿರೀಟವಿಲ್ಲದೇ, ಕಿಂಕಾಪಿನ ಅಂಗಿಯಿಲ್ಲದೆ, ಟೋಪಿಯಿಟ್ಟುಕೊಂಡೇ, ಬುಷ್ ಷರಟು ಹಾಕಿಕೊಂಡು ಪಾತ್ರ ಮಾಡಬಹುದು. ಬರಿತಲೆ, ಬರಿ ಬನಿಯನ್ನು ಸಾಕು, ಹೆಚ್ಚಾದರೆ ಅವು ಬೇಡ. ಆದರೆ ಪರ್ವತವಾಣಿಯವರದೇ ತಮ್ಮ ಸ್ವಂತ ಅನುಭವ ಆಗಾಗ ಹೇಳುತ್ತಿರುತ್ತಾರೆ –ಅವರು ಕೇವಲ ಒಬ್ಬ ಸಣ್ಣ ಸಂಬಳದ ಗುಮಾಸ್ತೆಯಾಗಿದ್ದಾಗ ರಂಗ ಪ್ರವೇಶ ಮಾಡಿದರಂತೆ. ಬೆಳ್ಳಾವೆ ನರಹರಿ ಶಾಸ್ತ್ರಿಗಳ "ಶ್ರೀಕೃಷ್ಣ ಪಾರಿಜಾತ" ನಾಟಕದಲ್ಲಿ "ಕೃಷ್ಣ"ನಾಗಿ ಬೆಂಗಳೂರಿನಿಂದ ನಾಗಪ್ಪನವರು (ಚಾರಿ ನಾಗಪ್ಪನೆಂದು ಪ್ರಸಿದ್ಧರಾಗಿದ್ದವರು) ಭದ್ರಾವತಿಗೆ ಹೋಗಿ ಅಲ್ಲಿ ಈ ಗುಮಾಸ್ತೆಗೆ ಬಣ್ಣ ಹಚ್ಚಿ, ಬಟ್ಟೆ ತೊಡಿಸಿ; ಕನ್ನಡಿ ನೋಡಿಕೋ ' ಎಂದಾಗ, ಕನ್ನಡಿಯಲ್ಲಿ ನೋಡಿಕೊಂಡಾಗ, ವಿಚಿತ್ರ ಅನುಭವವಾಯಿತಂತೆ. ಕೃಷ್ಣನಂತೇ ಕಂಡಾಗ, ಗುಮಾಸ್ತನನ್ನು ಮರೆತುಹೋದರಂತೆ! ನಿಲುವು, ಠೀವಿ, ತಾವಾಗಿ ಬದಲಾಯಿಸಿದವಂತೆ! ನಿಜವಲ್ಲವೆ? ವಾಕಿಂಗ್ ಸ್ಟಿಕ್ ಹಿಡಿದವನಿಗೂ, ಗದೆಹಿಡಿದವನಿಗೂ ಅಂತರ ಸಹಜ ತಾನೇ ? ವಾದಕ್ಕಾಗಿ ವಿರೋಧಿಸುವ ಹಕ್ಕು ತಮಗುಂಟು. ಸ್ವಾರ್ಥಕ್ಕಾಗಿಯಾದರೂ, ಸ್ವಸಂತೋಷಕ್ಕಾಗಿ ಯಾದರೂ ಪ್ರಸಾಧನದವರ ವಕೀಲಿ ವಹಿಸುವ ಸ್ವಾತಂತ್ರ್ಯ ನನಗೂ ಉಂಟು.

ಆಯಿತು ಮುಂದೆ ಈ ಪ್ರಸಾಧನ ಕಲೆ ಜನ, ಸಾಮಾನ್ಯವಾಗಿ ಭಾವಿಸಿರುವಷ್ಟು ಸುಲಭವಲ್ಲ. ನಮಗೆಲ್ಲಾ ಮನೆಗಳಿವೆಯಲ್ಲವೆ?– ಬಾಡಿಗೆಯವಾದರು? ಅವಕ್ಕೂ ಐದು ವರ್ಷಗಳಿಗೊಮ್ಮೆಯಾದರೂ ಸುಣ್ಣಬಣ್ಣ ಹಚ್ಚಿಸುತ್ತೇವೆಯಲ್ಲವೇ? ಈ ಕೆಲಸ ಯಾರಾದರೂ ಮಾಡಲು ಸಾಧ್ಯವೆ? ಕುಚ್ಚು ಮುಟ್ಟೆಯೋ ಬ್ರಷೋ ಸರಿಯಿರಬೇಕು; ಗೋಡೆಯನ್ನು ಉಜ್ಜಿ ಮಳೆ ಪಳೆ ಹೊಡೆದು ಮಾಡಿದ್ದ ತೂತುಗಳನ್ನು ಮುಚ್ಚಿ ಅದನ್ನು ಸಮಮಾಡಿಕೊಳ್ಳಬೇಕು; ಎಷ್ಟು ಸುಣ್ಣಕ್ಕೆ ಎಷ್ಟು ನೀರು ಬೆರೆಸಬೇಕು, ಬೇಯಲು ಎಷ್ಟು ಹೊತ್ತು ಬಿಡಬೇಕು ತಿಳಿದಿರಬೇಕು; ಕೈ ಪಳಗಿರಬೇಕು! ಬರಿ ಕೈಗಳಿದ್ದರೆ ಸಾಲದು, ಕಸುಬು ತಿಳಿದ ಕೈಗಳಾಗಿರಬೇಕು.

ನಮ್ಮ ಮುಖಗಳು; ಕೈ ಕಾಲುಗಳು ನಮ್ಮ ಮನೆ ಗೋಡೆಗಳಿಗೂ ಬೀಳೇ? ಕನಿಷ್ಟವೇ? ಸುಣ್ಣ ಬಣ್ಣ ಸುಲಭವೇ? ಕಂಡದ್ದು ಹಚ್ಚಿದರೆ ಚರ್ಮ ಏನಾಗಬಹುದು? ಕೆಲವು ಬಣ್ಣ 'ನುಂಗಿ'ಬಿಡುತ್ತವೆ. ಪ್ರಯೋಗ ಮಾಡಿ, ಪರಿಹಾರ ಕಂಡು, ಸಾಮಗ್ರಿ ಶೇಖರಿಸಿ, 'ಸಿದ್ಧ' ಎನ್ನಬೇಕು.

ಪ್ರಸಾಧನಕಾರನ ಸೇವೆಗೆ ಕರೆ ಬಂದಾಗ ಅವನು ಮೊಟ್ಟ ಮೊದಲು 'ನಾಟಕ'ದ ಸಂಪೂರ್ಣ ಪರಿಚಯ, ಪಾತ್ರಗಳ ಪರಿಚಯ ಮಾಡಿಕೊಳ್ಳ ಬೇಕು– ಸಾಧ್ಯವಾದರೆ ನಾಟಕಕಾರನ ಅಭಿಪ್ರಾಯ ಕೇಳಬೇಕು. ನಿರ್ದೇಶಕನಾದವನೂ ಕೂಡ ಕಡೆ ಘಳಿಗೆಗೆ ಕೋಣೇಶ್ವರನ ಹಾಗೆ (ಕೈಲಾಸ) ಕೋಣೆಗೆ ನುಗ್ಗಿ, 'ರೀ, ಇವನಿಗೆ ಒಂದು ಮೀಸೆ ಹಾಕ್ರೀ, ಇವನ ತಲೆ ಬೋಳಿಸ್ರೀ' ಎಂದು ಹೇಳಿ ಓಡಬಾರದು. ಸಾವಿರ ರಖಮ್ಮಿನ ಮೀಸೆಗಳುಂಟು ಕಡ್ಡೀಮಿಸೆ, ನಲ್ಲಿಮೀಸೆ, ಕುದುರೆ ಲಾಳದ ಮೀಸೆ, ಜರಡಿ ಮೀಸೆ ಹೀಗೆಲ್ಲಾ ಉಂಟು: ತಲೆ ಬೋಳೆಂದರೆ ಎಷ್ಟು ಬೋಳು? ಗಂಡನನ್ನು ಕಳೆದುಕೊಂಡವಳಷ್ಟೆ? ಬಾದಾಮಿ ಬೋಳೇ ? ಪುರುಚುಲು ಬೇಡಿಕೆಯೇ? ಪಿಳ್ಳಜುಟ್ಟೇ, ಜುಟ್ಟಿನ ಗಂಟೇ ? ಹತ್ತ ಕಡಕು ಸಿಕ್ಕಿಸಬೇಕಾದರೆ ಅದೆಂಥದು? ಚಿನ್ನದ್ದೇ, ಕಲ್ಲಿನದೇ ಮೊದಲೇ ತೀರ್ಮಾನವಾಗಿರಬೇಕು. ಕಡೆ ಘಳಿಗೆಯಲ್ಲಿ ಹೇಳಿದರೆ ಅದು ಪ್ರಸಾಧನಕಾರರ ಮ್ಯಾಜಿಕ್ ಪೆಟ್ಟಿಗೆಯಲ್ಲಿ ಪ್ರತ್ಯಕ್ಷವಾಗಲಾರದು. ಎಲ್ಲ ಪೂರ್ವನಿಯೋಜಿತವಾಗಿದ್ದು ಬಣ್ಣದ ಪೆಟ್ಟಿಗೆ ಪರಿಪೂರ್ಣತೆ ಪಡೆದಿರಬೇಕು.

ಈ ಕಿರು ಹೊತ್ತಿಗೆಯಲ್ಲಿ ಉಪಯೋಗಿಸಿರುವ ಚಿತ್ರಗಳು ನಾಣಿಯವರ ಸಂಗ್ರಹಣೆ ಹಾಗೂ ಶ್ರೀ ಎಸ್.ಎಸ್. ಕಿಶೋರ್ ಅವರಿಂದ ಪಡೆಯಲಾಗಿದೆ

## ಆಕರ ಗ್ರಂಥಗಳು


| ಪುಸ್ತಕ | ಲೇಖಕ | ಪ್ರಕಾಶಕರು |
|---|---|---|
| ಸ್ಟೇಜ್ ಮೇಕಪ್ | ಹೊರೇಸ್ ಸಿಕ್ವೀರಾ (Horace Sequeira) | ಪಿಟ್‌ಮ್ಯಾ |
| ದಿ ಆರ್ಟ್ ಆಫ್ ಮೇಕಪ್ | ಸರ್ಜಿಸ್ಟೈನ್ಕೋವ್‌ಸ್ಕಿ | ಫ್ರೆಡ್ರಿಕ್ ಮುಲ್ಲರ್ |
| ಥಿಯೇಟರ್ ಅಂಡ್ ಸ್ಟೇಜ್ (ಎರಡು ಸಂಪುಟ) | ಹೆರಾಲ್ಡ್ ಡೌನ್ಸ್ | ಪಿಟ್‌ಮ್ಯಾ |
| ಮೈ ಲೈಫ್ ಇನ್ ಆರ್ಟ್ | ಸ್ಟಾನಿಸ್ಲಾವ್‌ಸ್ಕಿ | |
| ಆನ್ ಆಕ್ಟರ್ ಪ್ರಿಪೇರ್ಸ್ | | |
| ಪುಟಿಂಗ್ ಆನ್ ಎ ಪ್ಲೇ | ಮಾರ್ಟಿನ್ ಬರ್ಡ್ಸ್ (Martin) ಮತ್ತು ಇತರರು | ಲಾವೌಟ್ ಡಿಕರ್ಸ್ನ (Lavout) |
| ಪ್ಲೇ ಪ್ರೊಡಕ್ಷನ್ | ಹೆನ್ನಿಂಗ್ ನೆಲ್ಮ್ಸ್ (Hennina Nelmes) | ಬಾರನ್ಸ್ ಅಂಡ್ ನೋಬಲ್ |
| ಪ್ರೊಡ್ಯೂಸರ್ ಅಂಡ್ ದಿ ಪ್ಲೇ | ನಾರ್ಮನ್ ಮಾರ್ಷಲ್ | ಮ್ಯಾಕ್‌ಡೊನಾಲ್ಡ್ |
| ಸೀಕ್ರೆಟ್ ಆಫ್ ಫಿಲ್ಮ್ಸ್ ಅಂಡ್ ಟೆಲಿವಿಷನ್ | ಗೋಲ್ಡನ್ ಹಿಲ್ (Gordon Hill) | ನೈಟ್ ಬುಕ್ಸ್ |
| ಡ್ರೆಸಿಂಗ್ ಫಾರ್ ದಿ ಸ್ಟೇಜ್ | ಡೋರಿಸ್ ಜಂಕೀಸೆಸ್ | ಸ್ಟುಡಿಯೋ ಪಬ್ಲಿಕೇಷನ್ |
| ಡ್ರೆಸಿಂಗ್ ದಿ ಪ್ಲೇ | ನೋರ್ಹಾಲ್ಯಾಮ್ ಬೋರಸ್ (Norah Lamborous) | ಸ್ಟುಡಿಯೋ ಪಬ್ಲಿಕೇಷನ್ |
| ಸ್ಟೇಜ್ ಸೀನರಿ ಅಂಡ್ ಲೈಟಿಂಗ್ | ಸ್ಯಾಮ್ಯುಯಲ್ ಸೆಲ್‌ಡೆನ್ | ಜಾರ್ಜ್ ಜಿ. ಹಾರ್ಪ್ ಅಂಡ್ ಕಂಪನಿ |
| ರಂಗ ಪ್ರಪಂಚ | ಅಕ್ಷರ ಕೆ.ವಿ. | ಅಕ್ಷರ ಪ್ರಕಾಶನ |
| ನಾಂದಿ | ಎಂ.ಎಸ್. ನಾಗರಾಜ್ | ಜಯ ಪ್ರಕಾಶನ |
| ದಶರೂಪಕ | ಕೆ. ವಿ. ಸುಬ್ಬಣ್ಣ | ಅಕ್ಷರ ಪ್ರಕಾಶನ |
| ಕನ್ನಡ ರಂಗಭೂಮಿ ವಿಕಾಸ | ಡಾ. ಎಚ್.ಕೆ. ರಾಮನಾಥ್ | ಅಭಿನಯ ಪ್ರಕಾಶನ |
| ರಂಗ ಚಿಂತನೆ | ಡಾ. ವಿಜಯ (ಸಂಪಾದಕರು) | ಕರ್ನಾಟಕ ನಾಟಕ ಅಕಾಡೆಮಿ |
| ಕನ್ನಡ ರಂಗಭೂಮಿ ನಡೆದು ಬಂದ ದಾರಿ | ಶ್ರೀ ರಂಗ (ಸಂಪಾದಕರು) | ಕನ್ನಡ ಸಾಹಿತ್ಯ ಪರಿಷತ್ತು |
| ಮಾವಿನ ಮರದಲ್ಲಿ ಬಾಳೆಯ ಹಣ್ಣು | ಅಕ್ಷರ ಕೆ.ವಿ. | ಅಕ್ಷರ ಪ್ರಕಾಶನ |
| ಕನ್ನಡ ರಂಗ ಭೂಮಿಯ ಪರ್ವತವಾಣಿ | ಎಲ್.ಎಸ್. ಶೇಷಗಿರಿರಾವ್(ಸಂಪಾದಕರು) | ಕರ್ನಾಟಕ ನಾಟಕ ಅಕಾಡೆಮಿ |


ಇದಲ್ಲದೆ ನಿಮ್ಮ ಸಂಪೂರ್ಣ ಬೆಳವಣಿಗೆಗಾಗಿ `ನಾಟಕ ಪ್ರದರ್ಶನ'ಕ್ಕೆ ಸಂಬಂಧಪಟ್ಟ ಎಲ್ಲ ಪುಸ್ತಕಗಳನ್ನು ಓದುತ್ತಾಯಿರಿ.

ಕ್ರೇಪ್ ಹೇರ್





ಕ್ರೇಪ್ ಹೇರ್ ಬಿಡಿಸಿಕೊಳ್ಳುವುದು

ಕ್ರೇಪ್ ಹೇರ್ ಬಿಡಿಸಿಕೊಳ್ಳುವುದು





ಮೀಸೆಯ ಆಕಾರ

ಮಧ್ಯಕ್ಕೆ ಕತ್ತರಿಸಿಕೊಳ್ಳುವುದು






ಹೆಬ್ಬೆರಳಿನಿಂದ ಮೇಲ್ಪದರವನ್ನು
ಸ್ವಲ್ಪ ಜರುಗಿಸಿಕೊಳ್ಳುವುದು

ಉಳಿದ ಕ್ರೇಪ್ ಹೇರ್ ಅನ್ನು ಕೈಗಳ ಮಧ್ಯದಲ್ಲಿ ಅಂಗೈನಲ್ಲಿಟ್ಟು ಮೃದುವಾಗಿ
ಹೊಸೆಯುವುದು






ಟೋಪಾನಾಗಳು (ಜೋಪಾನವಾಗಿ, ಕರ್ಲ್ ಹೋಗದಂತೆ, ಧೂಳು
ಬೀಳದಂತೆ ಇಡಬೇಕು)




ನಂತರ ಎಳೆದ ಗೆರೆಗಳ ಪಕ್ಕದಲ್ಲಿ ಮೂಲ ಅಥವಾ ಮೊದಲ ಬಣ್ಣಕ್ಕಿಂತ ತೆಳುವಾದ ಬಿಳಿ ಮತ್ತು ಹಳದಿ ಮಿಶ್ರಿತ ಬಣ್ಣವನ್ನು ಹಚ್ಚಿ



ಈಗ ಗಡ್ಡಕ್ಕೆ ಬೇಕಾದ ಕ್ರೇಪ್ ಹೇರ್ ಬಿಡಿಸಿಕೊಳ್ಳಿ ಮತ್ತು ಸ್ಪಿರಿಟ್‌ಗಂ ಕೆನ್ನೆಗೆ ಹಚ್ಚಿ ಕ್ರೇಪ್‌ಹೇರ್ ಅನ್ನು ಬೆರಳಿನಲ್ಲಿ ಹಿಡಿದು ಇನ್ನೊಂದು ಕೈಯಿಂದ ಬೆರಳುಗಳಿಂದ ಉದ್ದವಾಗಿ ಎಳೆಯುತ್ತಾ ಹೋಗುವುದು.




ಹೀಗೆ ಎರಡೂ ಕೆನ್ನೆ ಮತ್ತು ಗಲ್ಲಕ್ಕೆ ಕ್ರೇಪ್ ಹೇರ್ ಅಂಟಿಸಿ



ವಯಸ್ಸಿನ ನೆರಿಗೆರೆಗಳನ್ನು ಕೆಂಪು ಮತ್ತು ಕಪ್ಪು ಬಣ್ಣ ಸೇರಿಸಿ ಮೃದುವಾಗಿ ಸಣ್ಣದಾಗಿ ಬ್ರಷ್‌ನಿಂದ ಎಳೆಯಿರಿ

ಬೆರಳಿನಿಂದ, ಎಳೆದ ಗೆರೆಗಳನ್ನು ಚರ್ಮಕ್ಕೆ ಸೇರಿದ ಹಾಗೆ ಮಾಡಿ







ಬಿಳಿ ಮತ್ತು ಹಳದಿ ಮಿಶ್ರಿತ ಬಣ್ಣದಿಂದ ವೈಭವೀಕರಣ (Highlighting)


ಅದೇ ಬಣ್ಣದಿಂದ ಮೂಗನ್ನು ವೈಭವೀಕರಿಸಿ ಹಾಗೆ ಹಣೆಯ ಮೇಲೆ ಎಳೆದಿರುವ ಗೆರೆಗಳನ್ನು ವೈಭವೀಕರಿಸಿ.






ತಲೆಗೆ ಪಾತ್ರಕ್ಕೆ ತಕ್ಕಂತೆ ಟೋಪಿ ಅಥವಾ ರುಮಾಲ್ ಪಾತ್ರಧಾರಿ ಕನ್ನಡಿಯಲ್ಲಿ ನೋಡಿಕೊಂಡಾಗ ಅವನಿಗೆ ಸಮಾಧಾನವಾಗಬೇಕು.










ಮೇಲ್ತುಟಿಯ ಮೇಲೆ ಮೀಸೆ ಇರಬೇಕಾದ ಜಾಗಕ್ಕೆ ಸ್ಪಿರಿಟ್ ಗಂ ಹಚ್ಚಿ





ಪ್ರದೀಪ್ ಬೆಳವಾಡಿ ನೈಜ ಸ್ವರೂಪ

ಮೀಸೆಯ ಆಕಾರವನ್ನು ಅಂಟಿಸಿದ ಕ್ರೇಪ್ ಹೇರ್ ಅನ್ನು ಒತ್ತಿ ಹಿಡಿದು ಬದಲಿಸಿ







ಸ್ಪಿರಿಟಗಂ ಸ್ವಲ್ಪ ಅಂಟುದಾದಂತೆ ಕತ್ತರಿಸಿದ ಮೀಸೆಯ ಭಾಗದ ಕ್ರೇಪ್ ಹೇರ್ ತುಟಿಗೆ ಜೋಡಿಸಿ


ಮೀಸೆಯ ಆಕಾರ





ಯಾವ ರೀತಿಯಲ್ಲೂ ಮುಖದ ಮಾಂಸ ಖಂಡಕ್ಕೆ ಚಲನವಲನಕ್ಕೆ ಅಡ್ಡಿ ಯಾಗಬಾರದು














ಪ್ರಸಾದನ ಕಲಾವಿದ ತನ್ನ ಕೈಬೆರಳುಗಳನ್ನು ಸಡಿಲವಾಗಿಟ್ಟುಕೊಳ್ಳುವುದಕ್ಕೆ ಹಲವಾರು ಬಿಸಾಡುವ ಪದಾರ್ಥಗಳಿಂದ ಕಲಾತ್ಮಕ ವಸ್ತುಗಳನ್ನು ತಯಾರಿಸುವ ಅಭ್ಯಾಸಮಾಡಬೇಕು.




















'ನಾಣಿ' ವಂಶವೃಕ್ಷ ಚಿತ್ರದಲ್ಲಿ



16 ವರ್ಷದ ಕಾಲೇಜ್ ವಿದ್ಯಾರ್ಥಿನಿ




ಸದಾ ೯ರ್ ಪಟೇಲ್ ಆಗಿ ಸುಬ್ಬಣ್ಣ



ಉಪಾಸನೆ ಸೀತಾರಾಂ ಪಠಾಣನಾಗಿ (1973)


# ಪರ್ವತವಾಣಿಯವರು









## ಮೀಸೆಗಳ ಮಾದರಿಗಳು





## ಗಡ್ಡಗಳ ಮಾದರಿಗಳು





# ಗಾಯಗಳು





















‘ಕಿಸ್ ಆಫ್
ಎ ಸ್ಪೈಡರ್ ಉಮನ್’
ನಾಟಕದಲ್ಲಿ ಅಮೆರಿಕನ್
ನಟ ‘ಜೋಶ್ವಾ ಫಿನ್‌ಕೆಲ್’
ಅವರಿಗೆ ಲ್ಯಾಟೆಕ್ಸ್
ಉಪಯೋಗಿಸಿ ಪ್ರಸಾಧನ
ಮಾಡಿದಾಗ.






ತಲೆಗೆ ಟೋಫನ್ ಕೂರಿಸಿ
ಮುಂದಲೆ ಕ್ಷೌರ
ಮಾಡಿಸಿಕೊಂಡ
ಹಾಗೆ ಕಾಣಲು
ಬ್ರಷ್‌ನಿಂದ
ಬಣ್ಣ ಹಾಕಿ.

8-10 ದಿನದ ಗಡ್ಡದಂತೆ
ಕಾಣುವ ಹಾಗೆ ಬಣ್ಣ
ಕೆನ್ನೆಗೆ ಹಾಕಿ







ಪೂರ್ತಿಯಾದ ಪಾತ್ರ,
ಪೋಷಕ ಪ್ರಸಾಧನ




ಪ್ರಕಾಶ್ ಬೆಳವಾಡಿ (ನೈಜ)



ಹಣೆಗೆ ಸ್ಪಿರಿಟ್ ಗಂ ಹಚ್ಚಿ



ಹೆಂಗಸರು ಕಾಲಿಗೆ ಹಾಕುವ ನೈಲಾನ್ ನೆಟ್
ಬೇಕಾದಷ್ಟು ಕತ್ತರಿಸಿ




ತಲೆಕೂದಲನ್ನು ಬೇಕಾದ ಹಾಗೆ ಬಾಚಿ ನೈಲಾನ್ ನೆಟ್ಟನ್ನು ತಲೆಗೆ
ಮೆಲ್ಲಗೆ ಹಾಕಿ ಹಣೆಯ ಮೇಲೆ ಒತ್ತಿ ಹಿಡಿದು ಅಂಟಿಸಿ.

# ವಿವಿಧ ಪ್ರಸಾಧನಗಳ ಚಿತ್ರಗಳು





ಕ್ಲೌನ್ ಸ್ಟೈಲೈಸ್ಡ್ ಮೇಕಪ್



ಸ್ಟೈಲೈಸ್ಡ್ ಮೇಕಪ್



ಮೊಸೈಕ್ ಮೇಕಪ್



ಸ್ಟೈಲೈಸ್ಡ್ ಮೇಕಪ್



ಸ್ಟೈಲೈಸ್ಡ್ ಮೇಕಪ್
'ಕಬೂಕಿ' ಜಾಪಾನ್

# ಶೇಕ್ಸ್‌ಪಿಯರನ ಹಲವಾರು ನಾಟಕಗಳ ಪಾತ್ರಗಳ

# ಪ್ರಸಾಧನದ ಕಲ್ಪನೆಯ ಚಿತ್ರಗಳು




MACBETH
SHAKESPEARE
Nani 1-8-92



KING LEAR
SHAKESPEARE
Nani 5/8/92



CYRANO DE BERGERAC
EDMUND ROSTAND
Nani 3/8/92



ORIENTAL- MASKS OF
JAPANESE NOH THEATRE
Nani 8/8/92



SHYLOCK
MERCHANT OF VENICE
SHAKESPEARE
Nani 2-8-92




MASK
Nani 7/8/92

# ಶೇಕ್ಸ್‌ಪಿಯರನ ಹಲವಾರು ನಾಟಕಗಳ ಪಾತ್ರಗಳ
# ಪ್ರಸಾಧನದ ಕಲ್ಪನೆಯ ಚಿತ್ರಗಳು



FAGIN
OLIVER TWIST
CHARLES DICKENS
Nani 5/8/92



THE AFRICAN MASK
Nani 5/8/92



THE CLOWN IN OTHELO
SHAKESPEARE
Nani 5/8/92



A GREEK MASK FOR TRAGEDY
A GREEK MASK FOR COMEDY
Nani 5/8/92



PUCK
MIDSUMMER NIGHT
SHAKESPEARE
Nani 4/8/92



OTHELO
SHAKESPEARE
Nani 3/8/92


## 'ಮುಯ್ಯಿ' ಚಲನಚಿತ್ರದಲ್ಲಿ ನಟಿ ಶ್ರೀಮತಿ ಭಾರ್ಗವಿ ನಾರಾಯಣ್













ರುಡಾಲಿ: ನಾಟಕದಲ್ಲಿ ಹೆಚ್.ಜಿ. ದತ್ತಾತ್ರೇಯ




ಜಗದೀಶ್ ರಾಜ ಸಿ.ವಿ.ರಾಮನ್ ಆಗಿ
(ಡಾಕ್ಯುಮೆಂಟರಿ)



ನಾಟಿ ಇಂಗ್ಲೆಂಡಿನಿಂದ ಹಿಂತಿರುಗಿದಾಗ
ಹಡಗಿನಲ್ಲಿ ಫ್ಯಾನ್ಸಿ ಡ್ರೆಸ್‌ನಲ್ಲಿ



'ಭರತ್' ಕೆಂಪೇಗೌಡನಾಗಿ




ಶ್ರೀ ಕೃಷ್ಣ



ದ.ರಾ.ಬೇಂದ್ರೆ



ಔರಂಗ್‌ಜೇಬ್




ಮಾಲ್ತೇಶ್




ನೀನಾ ಸಂಕೃಪೆ




ಕಂಬಾರರ ಹುಲಿನೆರಳು ನಾಟಕದ ಮಾಯಾವಿ



ಹೆಂಗಳೆಯರಿಬ್ಬರನ್ನು ಶಿಲಾಬಾಲಿಕೆಯರಂತೆ ಮಾಡಿದ ಪ್ರಸಾಧನ (ಬಿವಿಲ್ಟ) 'ಅಪಕಾರಿ ಕಥೆ'ಯಲ್ಲಿ




ನಮ್ಮಲ್ಲಿ ಕಾರ್ಯಾಗಾರ



ಅಮೆರಿಕೆಯಲ್ಲಿ ಪ್ರಸಾಧನದ ಬಗ್ಗೆ ಆಸಕ್ತಿ



ಪ್ರೊ. ಬಿ. ಚಂದ್ರಶೇಖರ್





ರಾಮಕೃಷ್ಣ
ಹೆಗಡೆ ಹೆಣ್ಣಾಗಿ



ಸೂತ್ರಧಾರ
ಮೃಚ್ಛ ಕಟಿಕ
ನಾಟಕದಲ್ಲಿ

'ಚಾಂಕೋವ್'ನ
'ಆ್ಯನಿವರ್ಸರಿ'
ನಾಟಕದಲ್ಲಿ




ಮೋಲಿಯಾರನ ನಾಟಕ
'ಪ್ರಾಡಿಜಿಯಸ್
ಸ್ನಾಬ್'ನಲ್ಲಿ





# ಎಂಥ ಬದಲಾವಣೆ...






ಹದಿನೈದು ವರ್ಷದ
ಹುಡುಗಿ 'ಶೈಲಾಕ್' ಆಗಿ
ನಟಿ ಮೀನಾ.



*20 ವರ್ಷದವ 70 ವರ್ಷ*
ಆದಾಗ ನಟ ರಮೇಶ್






'ಸ್ವಾಣಿ' ಅಬಚೂರಿನ
ಪೋಸ್ಟಾಫೀಸ್ ಚಿತ್ರದಲ್ಲಿ



ಉಪಾಸನೆ ಸೀತಾರಾಂ ದೊರೆಸ್ವಾಮಿ ಗೋವಿಂದರಾವ್

# ಪೌರಾಣಿಕ ನಾಟಕಗಳಲ್ಲಿ (1953)




ಬಿ.ಆರ್.ಶ್ರೀಕಂಠಯ್ಯ




ರಾಜಗೋಪಾಲರಾವ್

# ಮೊಸಾಯಿಕ್ ಮೇಕಪ್


















Fig. 16. The Mimicking of Expressions (II).

# LEICHNER MAKE-UP CHART No. 4

## MIDDLE-AGED MAN




You are dealing with a more mature face, firm, and essentially young with a normally healthy complexion.

FOUNDATION Use Greasepaint Standard Stick or Spot-Lite Klear make-up in tubes (select shade from list on page 3).

SHADING Use No. 16, or No. 16 mixed with No. 25 Lake, and No. 32 as indicated, creating pools of shading, not hard lines.

HIGHLIGHTS Using No. 1½ or No. 5.

EYES Define clearly with sharp lines along lashes. For eyelids use Brown; the addition of No. 25 Lake or No. 32 Dark Grey creates tired effect.

LIPS Use No. 9 with No. 25 Lake, or Carmine III. Don't overdo.

POWDER with Rose Blending Powder firmly over make-up, brush off surplus.

HAIR No. 486 Silver Cosmetic on hair at temples adds a subtle touch of ageing.

**All shades and numbers given are LEICHNER.**

# ಗಂಡುಗಳು ಹೆಣ್ಣಾಗಿ




ಕಿರಣ್





ದಿ ॥ ಸುಬ್ರಮ್ಮಣ್ಯಂ




ರಂಗನಾಥ್



1972: 'ಸಿರಾನೋ-ಡಿ-ಬರ್ಜೆರಾಕ್' ನಾಟಕ ಸಿರಾನೋ ಪಾತ್ರದಲ್ಲಿ ಸಿಂಹ



ದಿ.'ಕಾನ್‌ಕಾನ್‌ಹಳ್ಳಿ' ಗೋಪಿ
ಅವರಿಗೆ ಪ್ರಥಮ ಬಾರಿ ಬಟ್ಟೆ
ಉಪಯೋಗಿಸಿ ಬೋಳುತಲೆ
ಮಾಡಿದ ಪ್ರಯೋಗ







ಸಿರಾನೋ ಚಿತ್ರದಲ್ಲಿ ಸಿ.ಆರ್.ಸಿಂಹ


ಜನಪ್ರಿಯ ನಟಿ ಶ್ರೀಮತಿ
ಉಮಾಶ್ರೀ 'ಒಡಲಾಳ'
ನಾಟಕದಲ್ಲಿ

# ವೈವಿಧ್ಯಮಯ ಪ್ರಸಾಧನ












ಸಿ.ಆರ್.ಸಿಂಹ



ತುಘಲಕ್

ತುಘಲಕ್





ಟ್ರಿಪಿಕಲ್

ಟಿ.ಪಿ.ಕೈಲಾಸ್

# ಪರ್ವತವಾಣಿಯವರು





